ಶ್ರೀ ಸಿದ್ದರಾಮಯ್ಯ ಕಾವೇರಿ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಮನವಿಯನ್ನು ಮುಖ್ಯಮಂತ್ರಿಗಳು ಸಲ್ಲಿಸುತ್ತಾರೆಂದೂ ಪತ್ರಿಕೆಗಳಲ್ಲಿ ಬಂದಿದೆ ಪ್ರಧಾನ ಮಂತ್ರಿಗಳಿಗೆ ಮನವಿಯನ್ನು ಸಲ್ಲಿಸುತ್ತೇನೆಂದು ಅವರು ಕೂಡ ಹೇಳಿದ್ದಾರೆ ಆದರೆ ಇದಕ್ಕೂ ಮೊದಲು ಎಲ್ಲಾ ಪಕ್ಷಗಳ ಜೊತೆ ಅವರು ಚರ್ಚೆಯನ್ನೇ ಮಾಡಿಲ್ಲ ಅವರು ಏನು ಮನವಿಯನ್ನು ಬರೆದಿದ್ದಾರೆ ಎಂಬ ಬಗ್ಗೆ ಚರ್ಚೆಯನ್ನೇ ಮಾಡಿಲ್ಲ ಅವರು ನಮ್ಮನ್ನು ಕೇಳುವುದೇ ಇಲ್ಲವೆಂದು ಹೇಳಿದರೆ We have no objection, ಮಾಡಿಕೊಳ್ಳಲಿ But ಮನವಿ ಸಲ್ಲಿಸುತ್ತೇವೆ, written ಮನವಿಯನ್ನು ಕೊಡುತ್ತೇವೆಂದು ಹೇಳಿದ್ದೀರಿ

(ಆ) ವಿಧಾನ ಪರಿಷತ್ತಿನ ಸಭಾಪತಿಯವರ ಚುನಾವಣೆ ಬಗ್ಗೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೇ, ಸಭೆಯಲ್ಲಿ ಈ ಪ್ರಶ್ನೆಗಳನ್ನು ಕೇಳದೇ ಹೋದರೆ ಅದೇ ತರಹ ಹೋಗುತ್ತಿತ್ತು ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲು ಹೋಗುತ್ತಾರೆ, ರಾಜ್ಯದ ಹಲವಾರು ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತಾರೆ, ಅದರ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ ಆದರೆ ಮನವಿ ಪತ್ರವನ್ನು ಕೊಡುತ್ತೇವೆ ಎನ್ನುವಂಥ ರೀತಿಯಲ್ಲಿ ಪ್ರಸ್ತಾಪ ಮಾಡಲಾಗಿದೆ ಅದನ್ನು ಅಲ್ಲಗಳೆದಿದ್ದೇವಷ್ಟೆ ಇವೊತ್ತು ಮತ್ತೊಂದು ಮಹತ್ವವಾದ ವಿಷಯವನ್ನು ಪ್ರಸ್ತಾಪ ಮಾಡಲು ನಾನು ಈಗ ಎದ್ದು ನಿಂತಿದ್ದೇನೆ 9 ದಿವಸಗಳ ಕಾಲ ವಿಧಾನ ಪರಿಷತ್ತಿನಲ್ಲಿ ಕಾರ್ಯ ಕಲಾಪಗಳು ನಡೆದಿಲ್ಲ ಪ್ರಕಾಶ್‌ರವರೇ ತಾವು ಕೇಳಬೇಕು, ಇದು ತಮಗೆ ಸಂಬಂಧ ಪಟ್ಟದ್ದು ಪತ್ರಿಕೆಗಳಲ್ಲಿ ಏನು ಬರೆಯುತ್ತಾರೆಂದರೆ ವಿಧಾನ ಪರಿಷತ್ತಿನಲ್ಲಿ 9 ದಿವಸಗಳಿಂದಲೂ ಕಾರ್ಯ ಕಲಾಪಗಳು ನಡೆಯುತ್ತಿಲ್ಲ ಮಾನ್ಯ ತಿಪ್ಪಣ್ಣನವರನ್ನು ವಿಧಾನ ಪರಿಷತ್ತಿನ ಸಭಾಪತಿಗಳೆಂದು ಒಪ್ಪುತ್ತಿಲ್ಲ ಈ ರೀತಿ ಬಹಳಷ್ಟು ಮಾತುಗಳು ಪತ್ರಿಕೆಗಳಲ್ಲಿ ಬರುತ್ತಿವೆ ಮೊನ್ನೆ ನಾನು ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಚರ್ಚೆ ಮಾಡಲು ಸಭೆ ಕರೆಯಿರಿ ಎಂದು ಹೇಳಿದೆ ಸಭೆ ಕರೆದಿದ್ದರು ನಾನು ಮತ್ತು ಮಾನ್ಯ ಖರ್ಗೆಯವರು ಇದ್ದರು ಮಾನ್ಯ ಪ್ರಕಾಶ್‌ರವರೂ ಕೂಡ ಇದ್ದರು ನಾನು ಸಭೆಯಲ್ಲಿ ಹೇಳಿದೆ, ಕಳೆದ 9 ದಿನಗಳಿಂದಲೂ ವಿಧಾನ ಪರಿಷತ್ತಿನಲ್ಲಿ ಕಾರ್ಯ ಕಲಾಪ ನಡೆಯುತ್ತಿಲ್ಲ, ಇವೊತ್ತು ಕೂಡ ನಡೆಯುತ್ತಿಲ್ಲ ಕಾರ್ಯ ಕಲಾಪಗಳನ್ನು ಮಾನ್ಯ ತಿಪ್ಪಣ್ಣನವರು ನಡೆಸುವುದಕ್ಕೆ ಅಧಿಕಾರವನ್ನು ಹೊಂದಿಲ್ಲ ಅವರು Panel of Chairmen

ಪಟ್ಟಿಯಲ್ಲಿ ಇದ್ದಾರೆ ಇವೊತ್ತು ಸಭಾಪತಿ, ಉಪ ಸಭಾಪತಿಗಳು ಇರದಿದ್ದ ಪಕ್ಷದಲ್ಲಿ, ಏನಾಗುತ್ತದೆ? ತಾವು ಹೊರಗಡೆಗೆ ಹೋದರೆ ಉಪಾಧ್ಯಕ್ಷರಾದ ಮಾನ್ಯ ಗೋಪಾಲಕೃಷ್ಣರವರು ತಮ್ಮ ಪೀರದಲ್ಲಿ ಕುಳಿತುಕೊಳ್ಳುತ್ತಾರೆ ಅವರೂ ಇಲ್ಲದಿದ್ದರೆ Panel of Chairmen ಪಟ್ಟಿಯಲ್ಲಿ ಇರುವವರು ಕುಳಿತುಕೊಳ್ಳುತ್ತಾರೆ Panel of Chairmen ರವರಿಗೆ ಕೇವಲ ಅವೊತ್ತಿನ ಸಭೆಯನ್ನು ನಡೆಸುವ ಅಧಿಕಾರ ಮಾತ್ರ ಇರುತ್ತದೆ Business Advisory Committee ಯನ್ನು preside ಮಾಡತಕ್ಕಂಥ ಹಕ್ಕು ಅವರಿಗಿರುವುದಿಲ್ಲ ಬೇರೆ ವಿಷಯಗಳ ಬಗ್ಗೆ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಲು ಅವರಿಗೆ ಹಕ್ಕಿರುವುದಿಲ್ಲ ಆದಕಾರಣ ನಾವೇನು ಹೇಳಿದ್ದೇವೆಂದರೆ, ಇವೊತ್ತು ವಿಧಾನ ಪರಿಷತ್ತಿನಲ್ಲಿ ನಮಗೆ ಬಹುಮತವಿದೆ

ಅಧ್ಯಕ್ಷರು ಈಗ ಆ ಮನೆಯ ವಿಷಯವನ್ನು ಈ ಮನೆಯಲ್ಲಿ ಚರ್ಚೆ ಮಾಡುವುದು ಎಷ್ಟರ ಮಟ್ಟಿಗೆ ಸರಿ ಹೇಳಿ ಆ ಮನೆಯ ಕಾರ್ಯ ಕಲಾಪಗಳ ಬಗ್ಗೆ

ಶ್ರೀ ಡಿ.ಕೆ ಶಿವಕುಮಾರ್ ಮಾನ್ಯ ಅಧ್ಯಕ್ಷರೇ, ಆ ಮನೆ constitute ಆಗಿರುವುದು ಈ ಮನೆಯಿಂದ We have every right to take up the subject

ಶ್ರೀ ಸಿದ್ದರಾಮಯ್ಯ. That house is creation of this house ಹೀಗಿರುವಾಗ ನಮಗೆ ಮಾತನಾಡಬಾರದು ಎಂದರೆ ಹೇಗೆ? This house has created that house

(ಗೊಂದಲ)

ಶ್ರೀ ಜಿ.ವಿ ಶ್ರೀರಾಮರೆಡ್ಡಿ. ಮಾನ್ಯ ಅಧ್ಯಕ್ಷರೇ ವಿಧಾನ ಪರಿಷತ್ತಿನ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶಕ್ಕಾಗಿ ತಮಗೆ ಕೇಳಿದ್ದೆ ಅವರು ಮಾತನಾಡಿದ ಮೇಲೆ ನನಗೆ ಅವಕಾಶ ಮಾಡಿಕೊಡಿ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು). ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಿದ ಮೇಲೆ ಅವರಿಗೆ ಅವಕಾಶ ಕೊಡಿ ವಿಧಾನ ಪರಿಷತ್ತಿನ ಸಭಾಪತಿ ವಿಚಾರದಲ್ಲಿ ಒಂದು ಸಭೆಯಾಯಿತು ಅಲ್ಲಿ ಮುಖ್ಯಮಂತ್ರಿಗಳು ಮತ್ತು ಅಲ್ಲಿನ ಸಭಾನಾಯಕರಾದ ಮಾನ್ಯ ಡಿ.ಹೆಚ್ ಶಂಕರಮೂರ್ತಿಯವರೂ ಕೂಡ ಇದ್ದರು ನಾವು ಹೇಳಿದೆವು ನಮಗೆ

ಬಹುಮತವಿದೆ, Demacratic set up ನಲ್ಲಿ ನಮಗೆ ಅವಕಾಶ ಮಾಡಿಕೊಡಿ ಸಭೆ ನಡೆಯಲಿ, ಈ ತರಹದ ಏನು attitude ಇದೆ, ಏನು ಉದ್ಧಟತನವಿದೆ ಅದು ಸರಿಯಲ್ಲವೆಂದು ನಾನು ಹೇಳಿದೆ ಇದೇ ಪದವನ್ನು ನಾನು ಹೇಳಿದೆ ಆಗ ಪ್ರಕಾಶ್‌ರವರು ಏನು ಹೇಳಿದರೆಂದರೆ, ಇಲ್ಲಾ , ಮುಖ್ಯಮಂತ್ರಿಗಳು ಸ್ವಲ್ಪ consult ಮಾಡಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾರೆಂದರು ಇವೊತ್ತು ಈಗಾಗಲೇ 5ನೇಯ ದಿವಸವಾಯಿತು, ಅವರ ತೀರ್ಮಾನ ಏನು ಎಂಬುದು ನಮಗೂ ಕೂಡ ಇನ್ನೂ ತಲುಪಿಲ್ಲ ನಮಗೆ ಅವೊತ್ತು ಅವರೇ ಕರೆಸಿದ್ದಾರೆ, ನಾವೂ ಕೂಡ ಹೋಗಿದ್ದೇವೆ, ಮಾತುಕತೆ ಆಡಿದ್ದೇವೆ ಅದಕ್ಕಾಗಿ ನಾನು ತಮ್ಮಲ್ಲಿ ಕೇಳತಕ್ಕಂಥದ್ದು ಏನೆಂದರೆ, ತಾವು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದೀರಿ, ಹಿರಿಯರಿದ್ದೀರಿ, ಇವೊತ್ತು ಗೃಹ ಸಚಿವರೂ ಕೂಡ ಆಗಿದ್ದೀರಿ ಮೊಟ್ಟಮೊದಲನೆಯದಾಗಿ ಈ ರೀತಿಯಲ್ಲಿ ವಿಧಾನ ಪರಿಷತ್ತಿನಲ್ಲಿ Deadlock create ಆಗಿದೆ ಅದಕ್ಕಾಗಿ ನಾವು ಪ್ರಸ್ತಾಪ ಮಾಡುತ್ತಿದ್ದೇವೆ, ಈ ವಿಚಾರದಲ್ಲಿ ಸರ್ಕಾರದಲ್ಲಿ ನಿಮ್ಮ ತೀರ್ಮಾನವೇನು? ಮುಖ್ಯಮಂತ್ರಿಗಳು ಯಾವ ತೀರ್ಮಾನಕ್ಕೆ ಬಂದಿದ್ದಾರೆ ಇವೊತ್ತು ವಿಧಾನ ಪರಿಷತ್ತಿನಲ್ಲಿ ಕಾರ್ಯಕಲಾಪವನ್ನು ನಡೆಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರೋ ಅಥವಾ ಇಲ್ಲವೋ? ಅಥವಾ ಇದೇ ರೀತಿಯಲ್ಲಿಯೇ ತಾವು ಮುಂದುವರೆಸುತ್ತೀರಾ ಎಂಬ ಬಗ್ಗೆ ತಾವು ಉತ್ತರವನ್ನು ಕೊಡಬೇಕೆಂದು ಕೇಳಬಯಸುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೇ, ನಾನೂ ಕೂಡ ಇದೇ ವಿಷಯದ ಬಗ್ಗೆ ಮಾತನಾಡಲು ನನಗೆ ಅವಕಾಶ ಮಾಡಿಕೊಡಬೇಕೆಂದು ತಮಗೆ ಪತ್ರವನ್ನು ಕಳುಹಿಸಿದ್ದೆ ಈಗ ನನಗೆ ತಾವು ದಯವಿಟ್ಟು ಅವಕಾಶವನ್ನು ಕೊಡಬೇಕು

ಅಧ್ಯಕ್ಷರು ಈಗ ಅವರು ಪ್ರಸ್ತಾಪ ಮಾಡಿದ್ದಾರಲ್ಲ ನೀವು ಪ್ರಸ್ತಾಪ ಮಾಡಿದರೂ ಅಷ್ಟೆ, ಅವರು ಪ್ರಸ್ತಾಪ ಮಾಡಿದರೂ ಅಷ್ಟೇ ಈಗ ಅವರು ಪ್ರಸ್ತಾಪ ಮಾಡಿದ್ದಾರೆ ಸರ್ಕಾರದವರು ಏನು ಹೇಳುತ್ತಾರೆ ಕೇಳೋಣ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾನು ಪ್ರತ್ಯೇಕವಾಗಿಯೇ ತಮಗೆ ಕೇಳಿದ್ದೇನೆ ನನಗೂ ಕೂಡ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿದ್ದೇನೆ

ಅಧ್ಯಕ್ಷರು ಕೇಳಿದ್ದೀರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಈ ಸದನ ಪ್ರಾರಂಭವಾದ ದಿನವೇ ಆ ಸದನವೂ ಕೂಡ ಪ್ರಾರಂಭವಾಯಿತು ಅವ್ವೊತ್ತಿನಿಂದ ಇವ್ವೊತ್ತಿನವರೆಗೂ ಅಲ್ಲಿ ನಡೆಯುತ್ತಿರತಕ್ಕಂಥ ವಿದ್ಯಮಾನಗಳೇನಿವೆ ಅದು ನಿಜವಾಗಲೂ ಕೂಡ ಮೇಲ್ಮನೆಗೆ ಗೌರವ ತರತಕ್ಕಂಥ ವಿಚಾರಗಳಲ್ಲ ಇದು ಮೊದಲನೆಯದು ಆದರೆ ಅದರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ, ಅಲ್ಲಿ ಏನು ನಡೆಯುತ್ತಿದೆ ಎಂಬ ಬಗ್ಗೆ ಚರ್ಚೆ ಮಾಡುವುದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಆದರೆ ಮುಖ್ಯವಾದಂಥ ಪ್ರಶ್ನೆ ಏನೆಂದರೆ, ಅಲ್ಲಿ ನಡೆಯುತ್ತಿರತಕ್ಕಂಥ ವಿದ್ಯಮಾನಗಳು ನಮ್ಮ ಮೇಲೆ ಕೂಡ ಪರಿಣಾಮವನ್ನು ಬೀರುತ್ತವೆ ಏಕೆಂದರೆ Upper House Lower Houseನ creation ಸಂವಿಧಾನದ ಪ್ರಕಾರ ಇಲ್ಲಿ resolution pass ಆಗಿ Council ರಚನೆಯಾಗಿದೆ ಇವತ್ತು ಲಕ್ಷಾಂತರ ರೂಪಾಯಿ ಖರ್ಚು ಮಾಡತಕ್ಕಂಥ ಸ್ಥಿತಿಯಲ್ಲಿ ಅನಾವಶ್ಯಕವಾಗಿ dead lock ಆಗಿ, ಅಲ್ಲಿ ಸದನ ನಡೆಯದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿ, ಅಸಹ್ಯಕರವಾದ ಘಟನಾವಳಿಗಳು ನಡೆಯುತ್ತಿವೆ ಇದಕ್ಕೆ ಸರ್ಕಾರ ತಡೆ ಹಾಕಬೇಕು ಹಾಗೂ ತೀರ್ಮಾನ ತೆಗೆದುಕೊಳ್ಳಬೇಕು ಇನ್ನು ಎರಡನೆಯದಾಗಿ Councilನ ಅವಶ್ಯಕತೆ ಇಲ್ಲ ಸರ್ಕಾರ ಖರ್ಚನ್ನು ಕಡಿಮೆ ಮಾಡಬಹುದು Council ಗೆ ಅಧಿಕಾರ ಇಲ್ಲದೇ ಅಲಂಕಾರಕ್ಕೆ ಆ House ಅನ್ನು ಇಟ್ಟುಕೊಳ್ಳುವ ಅವಶ್ಯಕತೆ ಇದೆಯೇ ಎಂದು ನನ್ನ ಪ್ರಶ್ನೆ ಸಂವಿಧಾನಬದ್ಧವಾದ ಯಾವುದೇ ಅಧಿಕಾರ ಇಲ್ಲದೇ ಇರುವಂತಾದ್ದನ್ನು ಇಟ್ಟುಕೊಳ್ಳುವ ಅವಶ್ಯಕತೆ ಇದೆಯೇ ? ಹಿಂದೆ ಅದಕ್ಕೆ ಒಂದು sanctity ಇತ್ತು ಹಿರಿಯರು ಬೇರೆ ಬೇರೆ ವಿಭಾಗಗಳಿಂದ ಬಂದಂತಹ ಬುದ್ದಿಜೀವಿಗಳು, ಮೇಧಾವಿಗಳು ಸರ್ಕಾರಕ್ಕೆ ಸಲಹೆ ಕೊಡುತ್ತಾರೆ ಎಂದು ಇತ್ತು ಆ sanctity ಕೂಡ ಅದಕ್ಕೆ ಇವತ್ತು ಉಳಿದಿಲ್ಲ ಅದು ಏನೇನೋ ಆಗುತ್ತಿದೆ It has become a political asylum ರಾಜಕೀಯ ನಿರಾಶ್ರಿತರಿಗೆ ಒಂದು ಜಾಗ ಆಗತಕ್ಕಂಥ ಸ್ಥಿತಿ ನಿರ್ಮಾಣವಾಗಿ

ಶ್ರೀ ಕೆ ಆರ್ ರಮೇಶ್‌ಕುಮಾರ್: All these things will go into record Let us have some restraints

PR
TK

ಶ್ರೀ ಜಿ ವಿ ಶ್ರೀರಾಮರೆಡ್ಡಿ Record ಗೆ ಹೋಗಲಿ, ನನ್ನ ಅಭಿಪ್ರಾಯ ನಾನು ಹೇಳುತ್ತಿದ್ದೇನೆ ನಿಮ್ಮ ಅಭಿಪ್ರಾಯದಲ್ಲಿ ಇಲ್ಲವೆಂದು ಹೇಳಿ That is my opinion

ಶ್ರೀ ಕೆ ಆರ್ ರಮೇಶ್‌ಕುಮಾರ್ Sir, I am appealing to learned Member through you ಅವರ ಮುಖಾಂತರ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, let us have differences, but let us be considerate It is not fair

ಶ್ರೀ ಡಿ ಕೆ ಶಿವಕುಮಾರ್ ಹಾಗಾದರೆ ನೀವೆಲ್ಲ political rehabilitationಗೋಸ್ಕರ ಹೋಗಿದ್ದೀರಾ? ಏನು ಸ್ವಾಮಿ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅದರ ಬಗ್ಗೆ ಸರ್ಕಾರ ಸ್ಪಷ್ಟವಾದಂತಹ ನಿಲುವು ತೆಗೆದು ಕೊಳ್ಳಬೇಕು ಇಲ್ಲ, ಚುನಾವಣೆ ನಡೆಸಬೇಕು ಅಲ್ಲಿ ಅಧ್ಯಕ್ಷರನ್ನು ಆಯ್ಕೆ ಮಾಡಬೇಕು ಸರ್ಕಾರದ ಧೋರಣೆ ಏನೆಂದು ಇವತ್ತು ಸದನದಲ್ಲಿ ಸ್ಪಷ್ಟ ಮಾಡಬೇಕು ಸುಮ್ಮನೆ ಅದನ್ನು ಮುಂದುವರೆಸಿಕೊಂಡು ಹೋಗುವುದು ಸರಿಯಲ್ಲ

ಅಧ್ಯಕ್ಷರು ಆಯಿತು, react ಮಾಡುತ್ತಾರೆ

ಶ್ರೀ ಡಿ ಕೆ ಶಿವಕುಮಾರ್ ಮಾನ್ಯ ಅಧ್ಯಕ್ಷರೆ, Law Minister ಮಾತನಾಡುವುದಕ್ಕಿಂತ ಮೊದಲು ನಾನು ಮಾತನಾಡುತ್ತೇನೆ ಸದನ ನಡೆಸುತ್ತಿರುವ ಬಗ್ಗೆ ಇಡೀ ರಾಜ್ಯ ನೋಡುತ್ತಿದೆ ಇದು ಪ್ರಜಾಪ್ರಭುತ್ವಕ್ಕೆ ದೊಡ್ಡ ಅವಮಾನ ಪ್ರಜಾಪ್ರಭುತ್ವವನ್ನು ಕೊಲೆ ಮಾಡುವಂತಹ ರೀತಿಯಲ್ಲಿ ವಿಧಾನ ಪರಿಷತ್ತಿನ ಅಧ್ಯಕ್ಷರ ಸ್ಥಾನದ ಬಗ್ಗೆ ನಮ್ಮ ಎಂ ಪಿ ಪ್ರಕಾಶ್‌ರವರು Law and Parliamentary affairs Minister ಆಗಿದ್ದಾಗ ಪ್ರಸ್ತಾಪಿಸಿ ಅವರ conscience ವಿರುದ್ಧವಾಗಿ ಇಲ್ಲಿ ಕೆಲಸ ನಡೆಯುತ್ತಿದೆ ಎಂದು ಹೇಳಿದರು ಅಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಹೇಳಲು ನಿಮ್ಮ conscience ಇಲ್ಲಿ permit ಮಾಡುತ್ತಿಲ್ಲ xxx ಇದರ ಬಗ್ಗೆ ಈ ಮನೆ ಯಾವುದಾದರೂ ರೀತಿಯಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಲೇಬೇಕಾಗುತ್ತದೆ

---

xxx ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ

ಅಧ್ಯಕ್ಷರು ಈಗ ರಾಜ್ಯಪಾಲರ ಬಗ್ಗೆ ಆ ರೀತಿ comments ಮಾಡಬೇಡಿ

ಶ್ರೀ ಡಿಕೆ ಶಿವಕುಮಾರ್ ಏಕೆಂದರೆ ultimately, ಈ ಪ್ರಜಾಪ್ರಭುತ್ವ ಉಳಿಸಿ, ಸದನದ ಗೌರವವನ್ನು ರಕ್ಷಣೆ ಮಾಡುವವರು ಯಾರು? ಹಾಗಾದರೆ majority ಗೆ ಒಂದು ಗೌರವ ಇಲ್ಲವೇ? 40 ಜನ members majority ಯಲ್ಲಿ ಇದ್ದುಕೊಂಡು

ಅಧ್ಯಕ್ಷರು ಬೇರೆಯದಕ್ಕಲ್ಲ, it may be their opinion ರಾಜ್ಯಪಾಲರ ಬಗ್ಗೆ ಆ ರೀತಿ ಮಾತನಾಡಬೇಡಿ ಅದನ್ನು ಕಡತದಿಂದ ತೆಗೆದು ಹಾಕಲಾಗಿದೆ

ಶ್ರೀ ಡಿಕೆ ಶಿವಕುಮಾರ್ ನಾವು ಹೇಳಿದ್ದನ್ನೆಲ್ಲಾ ತೆಗೆದು ಹಾಕುತ್ತೀರಿ, ತೆಗೆದು ಹಾಕಿಕೊಳ್ಳಿ ವರವಾಗಿಲ್ಲ ಆದರೆ ನಾವು majority ಇದ್ದುಕೊಂಡು ನಮಗೆ ಗೌರವ ಇಲ್ಲವೆಂದರೆ, ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಆಯ್ಕೆ ಮಾಡುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡುವುದಿಲ್ಲವೆಂದರೆ, ಅದಕ್ಕೆ ನಾವು ರಾಜಕಾರಣ ಮಾಡುತ್ತೇವೆ, political strategy ಎಂದರೆ, ಇಂತಹ ಒಂದು ಬೇಜವಾಬ್ದಾರಿ ಹೇಳಿಕೆ ಇಡೀ ರಾಜ್ಯದಲ್ಲಿ ಯಾವತ್ತು ಕೂಡ ಆಗಿರಲಿಲ್ಲ ಪ್ರಜಾವ್ರಭುತ್ವದ ಕಗ್ಗೊಲೆಯನ್ನು ಈ ನರ್ಕಾರ ಇಲ್ಲಿ ಮಾಡುತ್ತಿದೆ

ಅಧ್ಯಕ್ಷರು ಆಯಿತು ಹೇಳಿ

ಶ್ರೀ ಕೆಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೆ, I will not take much time, ಸಾಮಾನ್ಯವಾಗಿ ಆ ಮನೆಯ ನಡವಳಿಕೆಗಳನ್ನು ಅದವಾ ಅಲ್ಲಿಯ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದು ಸಾಧುವಲ್ಲ ಇಲ್ಲಿ ಮೂಲಭೂತವಾದ ವಿಷಯವೇನೆಂದರೆ ಆ ಸದನ ನಮ್ಮ ಪ್ರಯತ್ನದ ಸೃಷ್ಟಿ ಎಲ್ಲೋ ಒಂದು ಕಡೆಗೆ ನಮ್ಮಲ್ಲಿರತಕ್ಕಂಥ ಅವೇಕ್ಷೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ನಾವು ಅದಕ್ಕೆ ಜನ್ಮ ಕೊಟ್ಟಿದ್ದೇವೆ ಮಾನ್ಯ ರೆಡ್ಡಿಯವರು ಹೇಳಿದಂತೆ ಆ ಮನೆ ಇರಬೇಕೇ ಅಥವಾ ಬೇಡವೇ ಎನ್ನುವುದು ನಮ್ಮ ವಿವೇಚನೆಗೆ ಅನುಗುಣವಾಗಿ ಆಯಾಯ ಸಂದರ್ಭಕ್ಕೆ ತಕ್ಕಂತೆ ತೀರ್ಮಾನಕ್ಕೆ ತೆಗೆದುಕೊಳ್ಳಬಹುದು ನಮ್ಮ ಸಂಸದೀಯ ಪ್ರಜಾವ್ರಭುತ್ವದ ವ್ಯವಸ್ಥೆಯೊಳಗೆ ನಾವು ಹೆಚ್ಚಾಗಿ Britain ಅನ್ನು ಅನುಸರಿಸುತ್ತೇವೆ ನಮಗೆ ಎರಡು ಗ್ರಂಥ ಇವೆ ಅದರಲ್ಲಿ ಒಂದು May's Parliamentary Practice, ಎರಡನೆಯದು Kaul and

Shakdhar ನಮ್ಮಲ್ಲಿ ಹೆಚ್ಚು ಆಧಾರ ಪಡೆದುಕೊಂಡಿರುವಂತಹ ಗ್ರಂಥ Whip ಯಾರು? Speaker ಯಾರು? Deputy Speaker ಯಾರು? Chairperson ಯಾರು? Pro-tem Speaker ಯಾರು? Panel Chairman ಯಾರು? ಪ್ರತಿಯೊಂದನ್ನು ಕೂಡ ಸವಿವರವಾಗಿ ಹೇಳಲಾಗಿದೆ ಈಗ ನಮ್ಮ ಸಮಸ್ಯೆ ಏನೆಂದರೆ ನಮ್ಮಿಂದ ಉದ್ಭವವಾದಂತಹ ಆ ಒಂದು ಸಂಸ್ಥೆ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ, ನಿಷ್ಕ್ರಿಯವಾಗಿದೆ ಅದು ಕ್ರಿಯಾತ್ಮಕವಾಗಿ ಕೆಲಸ ಮಾಡುವಂತೆ ನಾವು ಚಾಲನೆ ಕೊಡಬೇಕಾಗಿದೆ ಕಗ್ಗಂಟು ಬಂದಿರುವಂತಹ ವಿಚಾರದಲ್ಲಿ ಅದರ meritsಗೆ ಹೋಗಬಾರದು ನಾನು ಸಂಸದೀಯ ವ್ಯವಹಾರ ಸಚಿವರಲ್ಲಿ ತಮ್ಮ ಮುಖಾಂತರ ಇಷ್ಟನ್ನೇ ನಿವೇದಿಸಿಕೊಳ್ಳುತ್ತೇನೆ ಒಂದು House ಹೊಸದಾಗಿ constitute ಆದಾಗ ಮಾನ್ಯ ರಾಜ್ಯಪಾಲರು ಚುನಾವಣಾ ಆಯೋಗದ ವರದಿಯನ್ನು ತರಿಸಿಕೊಂಡು, ಅತ್ಯಂತ ಹಿರಿತನ ಹೊಂದಿರುವಂತಹ ಸದಸ್ಯರು ಯಾರಿರುತ್ತಾರೆ, ಅವರಿಗೆ ಪ್ರತಿಜ್ಞಾವಿಧಿಯನ್ನು ರಾಜಭವನದಲ್ಲಿ ಬೋಧಿಸಿ, ಅವರನ್ನು pro-tem Speaker ಅಥವಾ pro-tem Chairman ಎಂದು ಮಾಡಿ ಅವರಿಗೆ ಒಂದು ಸಂಕ್ಷಿಪ್ತವಾದಂತಹ ಜವಾಬ್ದಾರಿಯನ್ನು ಕೊಡುತ್ತಾರೆ ಇತರೆ ಚುನಾಯಿತ ಸದಸ್ಯರು ಯಾರಿರುತ್ತಾರೆ ಅವರಿಗೆ ಪ್ರಮಾಣ ವಚನವನ್ನು ಇವರು ಬೋಧಿಸಿಬಿಟ್ಟು House constitute ಆಗುವ ಹಾಗೆ ಮಾಡುತ್ತಾರೆ ಅಲ್ಲಿಗೆ ಅವರ ಕೆಲಸ ಮುಗಿದುಹೋಯಿತು That is the role of a pro-tem Speaker or Pro-tem Chairman Elected Chairman ಯಾರಿರುತ್ತಾರೆ, he will also have the assistance of an elected Deputy Chairman, as the case may be, Speaker and Deputy Speaker Speaker ಅವರು ಕೊಡ ನಮ್ಮ ಕಲಾಪಗಳು ಪ್ರಾರಂಭ ಮಾಡುವಾಗ ಬೆಳಿಗ್ಗೆ ಅವರೇ ಬರಬೇಕು ಅಧ್ಯಕ್ಷರು ಬಂದು bell ಹಾಕಿಸಿ agenda ಪ್ರಕಾರ Question hour, ಇವನ್ನೆಲ್ಲಾ ನಡೆಸಿ, ಆಮೇಲೆ ಬೇಕಿದ್ದರೆ ಅವರು indication ಕೊಡುತ್ತಾರೆ ಆಗ Deputy Speaker ಕುಳಿತುಕೊಳ್ಳುತ್ತಾರೆ ಒಂದು ವೇಳೆ ಮಾನ್ಯ ಅಧ್ಯಕ್ಷರು ಬೇರೆ ಯಾವುದಾದರೂ ಕಾರಣಕ್ಕೆ House ಗೆ ಬರುವುದಕ್ಕೆ ಅನಾನುಕೂಲವಿದ್ದರೆ, ಅದನ್ನು ಮೊದಲೇ ತಿಳಿಸಿದರೆ ಆ ದಿವಸದಲ್ಲಿ Deputy Speaker, can

come and conduct the House ಆಗ he is not Deputy Speaker Though he is designated as Deputy Speaker, he will be playing the role of a Speaker That is the case in case of Deputy Chairman also Chairman and Deputy Chairman ಇಬ್ಬರೂ ಇಲ್ಲದೇ ಇದ್ದಾಗ ಶೂನ್ಯವಾಗುತ್ತದೆ Panel Chairmen or Panel Speakers ಯಾರು? ಸದನದಲ್ಲಿ ತಾವು ಏನು ಮಾಡುತ್ತೀರಿ ತಮ್ಮ ಅಭಿಪ್ರಾಯದಂತೆ ಎಲ್ಲಾ ಭಾಗಗಳಿಂದ ಸೇರಿರತಕ್ಕಂಥ ಐದು ಅಥವಾ ಆರು ಮಂದಿ ಹಿರೀಕರನ್ನು Panel ನಲ್ಲಿಟ್ಟಿರುತ್ತೀರಿ ಅವರಿಗೂ ಕೂಡ ಒಂದು ಕಡೆ ತರಬೇತಿ ಆಗಬೇಕು ಎನ್ನುವುದು ಇದ್ದರೆ, ಎಂತಹ exigency ಯನ್ನು ಕೂಡ ನಾವು meet ಮಾಡುವುದಕ್ಕೆ ತಯಾರಾಗಿರಬೇಕು ಎನ್ನುವುದು ಎರಡನೇ ಉದ್ದೇಶ ತಾವೂ ಇಲ್ಲದೇ ಇದ್ದು Deputy Speaker ಸದನ ನಡೆಸುತ್ತಿದ್ದು, ಅವರಿಗೆ ಅನಿವಾರ್ಯ ಇದ್ದು, ಅವರೂ ಕೂಡ ಹತ್ತು ನಿಮಿಷ ಹೊರಗೆ ಹೋಗಬೇಕಾದಂತಹ ಸಮಯದಲ್ಲಿ ಅವರು Panel ನಲ್ಲಿ ಇರುವಂತಹ ಯಾರಿಗಾದರೂ ಒಬ್ಬರಿಗೆ ಕಾರ್ಯಾಲಯದ ಮುಖಾಂತರ ಸೂಚನೆ ಕೊಡುತ್ತಾರೆ ಆ ಸೀಮಿತ ಉದ್ದೇಶಕ್ಕಾಗಿ Panel ನಲ್ಲಿ ಇರುವವರು ಬಂದು proceedings conduct ಮಾಡುತ್ತಾರೆ ಬಹಳ ಹೆಚ್ಚೆಂದರೆ ಅವರು adjourn ಮಾಡಬಹುದು Panel ನಲ್ಲಿ ಇರತಕ್ಕಂತವರು, they cannot come and summon the House the next day ಬರುವುದಕ್ಕೆ ಸಾಧ್ಯವೇ ಇಲ್ಲ ಈಗ ಮೇಲ್ಮನೆಯಲ್ಲಿ ಏನಾಗಿದೆ ಎಂದರೆ Chairman ರವರ ಸ್ಥಾನ ಖಾಲಿ ಇದೆ Deputy Chairman ರವರು ದುರ್ದೈವವಶಾತ್ ಬಂದು ತಮ್ಮ ಆಸನದಲ್ಲಿ ಕುಳಿತುಕೊಂಡು ಕಾರ್ಯಭಾರ ಗಳನ್ನು ನಡೆಸುವ ಸ್ಥಿತಿಯಲ್ಲಿ ಇಲ್ಲ ಹಾಗಿದ್ದಾಗ, who has to run the House? . It's a Constitutional crisis ಇಲ್ಲಿ majority, minority ಯಾರಾಗುತ್ತಾರೆ, ಯಾರು ಹೋಗುತ್ತಾರೆ ಎನ್ನುವಂತಹ ಪ್ರಶ್ನೆ ಅಲ್ಲ ನಾವು ಮೇಲ್ಮನೆಯಲ್ಲಿ ಇರಬೇಕು, ಅನೇಕ ಕ್ಷೇತ್ರ ಗಳಲ್ಲಿ ಪಳಗಿದವರು, ಅನುಭವಸ್ಥರು ಹಾಗೂ ತಿಳುವಳಿಕಸ್ಥರ ಸಹಾಯ ಈ ಸದನಕ್ಕೆ advice ರೂಪದಲ್ಲಿ ಬರಬೇಕು ಎನ್ನುವ ಸದ್ಭಾವನೆಯಿಂದ, ಸದುದ್ದೇಶದಿಂದ ಸದನಕ್ಕೆ ನಾವು ಜನ್ಮ ಕೊಟ್ಟು ಅದನ್ನು ಸಂಖ್ಯಾಬಲಗಳ

ಅಥವಾ ರಾಜಕೀಯ ಕಾರಣಕ್ಕಾಗಿ ನಿಷ್ಕ್ರಿಯ ಮಾಡಿದರೆ ಅದು ನಾವು ಸಂವಿಧಾನಕ್ಕೆ ಮಾಡಿದ ದೊಡ್ಡ ಅಪಚಾರವಾಗುತ್ತದೆ ಅದಕ್ಕೆ ಅವಕಾಶ ಕೊಡಬಾರದು ಹಿಂದೆ ಇವೆಲ್ಲಾ ಆಗಿವೆ ಆದುದರಿಂದ ಈ ವಿಷಯವನ್ನು ಇಷ್ಟರ ಮಟ್ಟಿಗೆ ಇಲ್ಲಿ ನಾವು ಪ್ರಸ್ತಾಪ ಮಾಡುವುದರಲ್ಲಿ ಅದು ಕಾನೂನುಬಾಹಿರವಾಗುವುದಿಲ್ಲ ನಾನು ಮಾನ್ಯ ಪ್ರಕಾಶ್‌ರವರಲ್ಲಿ ನಿವೇದಿಸಿಕೊಳ್ಳುತ್ತೇನೆ ದಯಮಾಡಿ ಇದರ ವಿಚಾರದಲ್ಲಿ ನಾವು ಪಟ್ಟು ಹಿಡಿಯುವುದು ಬೇಡ ಈಗ ಉಳಿದಿರುವುದು ಸಂವಿಧಾನದ ಮಾರ್ಗ ಇದನ್ನು ನೀವು Cabinet ನಲ್ಲಿ ತೀರ್ಮಾನ ಮಾಡಬೇಕು Chairman election fix ಮಾಡಬೇಕು ಅದು ಆಗ ಬೇಕಾದರೆ ಒಬ್ಬರು pro-tem Chairman ಇರಲೇಬೇಕು Pro-tem Chairman ವಿಚಾರವನ್ನು ನೀವು ರಾಜ್ಯಪಾಲರಿಗೆ ಬರೆದು ಕಳುಹಿಸಿದರೆ, ರಾಜ್ಯಪಾಲರು ಒಬ್ಬ Pro-tem Chairman ರನ್ನು appoint ಮಾಡುತ್ತಾರೆ Pro-tem Chairman will conduct the election of the Chairman, then the functioning will go on

ನಾವು ಈ ಸ್ಥಿತಿಯಲ್ಲಿ House summon ಮಾಡಿ, ಅವರು ಇಲ್ಲಿ ಬಂದು Governor's addressನಲ್ಲಿ participate ಮಾಡಿ, ಎರಡು Houseನಲ್ಲಿ Governorಗೆ Motion of Thanks ಅನ್ನು ನಾವು ಮೂವ್ ಮಾಡಬೇಕು ನಮ್ಮ ಗೌರವವನ್ನು ಅವರಿಗೆ ಸಲ್ಲಿಸಬೇಕು ಒಂದು ಸದನದಲ್ಲಿ ಅವರಿಗೆ ಗೌರವವನ್ನು ಸಲ್ಲಿಸಿ, ಇನ್ನೊಂದು ಸದನದಲ್ಲಿ ಗೌರವವನ್ನು ಸಲ್ಲಿಸದೇ ಇರುವುದು ಆಗಿದೆ ಇನ್ನು ಸ್ವಲ್ಪ ದಿವಸದಲ್ಲೇ ಬಜೆಟ್ ಸೆಷನ್ ಬರುತ್ತಿದೆ See, where is the end for this? ಇಡೀ ದೇಶ ನಮ್ಮನ್ನು ನೋಡಿ ನಗುತ್ತಿದೆ, observe ಮಾಡುತ್ತಿದ್ದಾರೆ ಅದುದರಿಂದ ನಾನು ತಮಗೆ ಹೇಳುವುದೆನೆಂದರೆ, ರಾಜಕೀಯ ಕಾರಣಗಳಿಂದ ಒಂದು ಮೆಟ್ಟಿಲು ಮೇಲೆ ಹತ್ತುವಂತಹ ಪ್ರಯತ್ನವನ್ನು ನಾವು ಮಾಡಬೇಕಾಗುತ್ತದೆ ಕೆಲವು ಸಲ ನಮಗೆ ಇರಿಸು, ಮುರಿಸು ಆಗುತ್ತದೆ ದಯಮಾಡಿ ಮಾನ್ಯ ಎಂ ಪಿ ಪ್ರಕಾಶ್‌ರವರು ಅನುಭವಸ್ಥರು, ತಾವು ಆ ಸದನದಲ್ಲೂ ಕೆಲಸವನ್ನು ಮಾಡಿದ್ದೀರಿ ನೀವು ಇದರಲ್ಲಿ you will have to display your commitment to parliamentary democracy It is a situation

where your commitment is called to be displayed so far as parliamentary democracy is concerned It is not the question of who becomes what Otherwise all of us would go on record leaving a very bad impression to the coming generation Such a thing should not happen ನಾನು ತಮ್ಮ ಮುಖಾಂತರ ಮಾನ್ಯ ನಂಸದೀಯ ವ್ಯವಹಾರಗಳ ಸಚಿವರಿಗೆ ಕೈ ಜೋಡಿಸಿ ಬೇಡಿಕೊಳ್ಳತ್ತೇನೆ ಇದರಲ್ಲಿ ಬಲಾಬಲಗಳ ಪ್ರಶ್ನೆ ಅಥವಾ ಪಾರ್ಟಿಗಳ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳುವುದು ಬೇಕಾಗಿಲ್ಲ ಒಂದು, It is a matter of principle ತಾವು I think, ಒಂದು ಉತ್ತಮವಾದ ಮಾರ್ಗದರ್ಶನವನ್ನು ಕೊಡುತ್ತಿರೆಂಬ ವಿಶ್ವಾನವನ್ನು ಇಟ್ಟುಕೊಂಡು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಈಗಾಗಲೇ ಬಹಳಷ್ಟು ಜನರು ಮಾತನಾಡಿದ್ದಾರೆ ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ ಈಗ ಮೇಲ್ಮನೆಯಲ್ಲಿ dead lock create ಆದಾಗ naturally ಕೆಳಮನೆಯಲ್ಲಿ ಅದು ಚರ್ಚೆ ಆಗಲೇ ಬೇಕು, ಏಕೆಂದರೆ ಸರ್ಕಾರದ ಗಮನಕ್ಕೆ ಯಾರಾದರೂ ತರಲೇಬೇಕಲ್ಲಾ, ಇಲ್ಲ ಮಾಧ್ಯಮಗಳ ಮೂಲಕ ಬಂದದ್ದನ್ನು ಅವರು ಗಮನಿಸಿ, ಅವರು ಮುಂದುವರೆಯಬೇಕು ಇಲ್ಲ, ನಾವು Governor ರವರಿಗೆ ಕೊಟ್ಟಂತಹ representation ಮೇಲಾದರೂ ಅವರು act ಮಾಡಬೇಕು, ಇಲ್ಲ, ಸರ್ಕಾರವಾದರೂ suo-motu ಆದರೂ act ಮಾಡಬೇಕು ಈ ಮೂರು ವಿಫಲವಾದಾಗ, ಅನಿವಾರ್ಯವಾಗಿ ನಾವು ಈ ಸದನದಲ್ಲಿ ತಮ್ಮ ಗಮನಕ್ಕೆ ತರಬೇಕು, ಮತ್ತೆ ಏನು ನಡೆದಿದೆ ಎಂಬುದನ್ನು ಕೂಡ ಸ್ವಲ್ಪಮಟ್ಟಿಗೆ ಹೇಳಬೇಕಾಗುತ್ತದೆ ಈಗ ಏನಾಗಿದೆ ಎಂದರೆ ಮೇಲ್ಮನೆಯಲ್ಲಿ, ಈಗಾಗಲೇ ಮಾನ್ಯ ಕೆ ಆರ್ ರಮೇಶ್ ಕುಮಾರ್‌ರವರು ಪ್ರಸ್ತಾಪ ಮಾಡಿದ ಹಾಗೆ ಒಂದು ಕಡೆ ಅಧ್ಯಕ್ಷರ ಸ್ಥಾನ ಖಾಲಿ ಇದೆ ಉಪಾಧ್ಯಕ್ಷರು ಕೆಲಸ ಮಾಡುವ ಸ್ಥಿತಿಯಲ್ಲಿ ಇಲ್ಲ ಇಂತಹ ಸಂದರ್ಭದಲ್ಲಿ ಸದನ ಹೇಗೆ ನಡೆಯಬೇಕು? ಇದು ಬಹಳ ಮುಖ್ಯ ಆದರೆ ದುರ್ದೈವದಿಂದ Presiding Officers list ಮಾಡುವಾಗ, ಒಂದು Presiding Officers list ಏನು ಮಾಡಿದ್ದರು ಅದನ್ನೆ ಇಟ್ಟು ಕೊಂಡು,

ಇವತ್ತು ಮೇಲ್ಮನೆಯಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆಂಬ ಮಾತನ್ನು ಸರ್ಕಾರದವರು ಕೂಡ ಹೇಳುತ್ತಿದ್ದಾರೆ ಅದು ಕಾನೂನು ಬಾಹಿರವೆಂಬ ಮಾತನ್ನು ನಾವು ಪದೇ ಪದೇ ಹೇಳುತ್ತಿದ್ದೇವೆ ಇಲ್ಲಿ ಅಧ್ಯಕ್ಷರ ಚುನಾವಣೆಯನ್ನು ನಡೆಸಬೇಕು ಇಲ್ಲಿ ಯಾರಿಗೆ majority ಇದೆ, ಅವರು ಆಯ್ಕೆಯಾಗುತ್ತಾರೆ ಅವರು ಯಾರೆ ಆಗಿರಬಹುದು, ನಿಮಗೆ majority ಇದ್ದರೆ ನೀವೇ ಆಗಿ, ಅಥವಾ ಬೇರೆಯವರಿಗೆ majority ಇದ್ದರೆ ಬೇರೆ ವ್ಯಕ್ತಿಗಳು ಆಗುತ್ತಾರೆ ಆದರೆ ಇದನ್ನು prestige ಮಾಡಿಕೊಂಡರೆ ಹೇಗೆ? ನಾವು ಪದೇ ಪದೇ ಅವರನ್ನು ಕೇಳುತ್ತೇವೆ ನೀವು ಹಿಂದೆ ಮಾಡಿಲ್ಲವೇ? ಕಾಂಗ್ರೆಸ್ ಸರ್ಕಾರವಿದ್ದಾಗ, ಮಾನ್ಯ ಏ ಆರ್ ಸುದರ್ಶನ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿಲ್ಲವೇನು? ಕಾಂಗ್ರೆಸ್‌ನವರು ಇದ್ದಾಗ ಡೇವಿಡ್ ಸಿಮೆಯೊನ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿಲ್ಲವೇನು? ಶ್ರೀ ಡಿ ಬಿ ಕಲ್ಮಣ್‌ಕರ್‌ರವರನ್ನು ಮಾಡಿಲ್ಲವೇನು? ಶ್ರೀ ಬಿ ಆರ್ ಪಾಟೀಲ್‌ರವರನ್ನು ಮಾಡಿಲ್ಲವೇನು? ಇವೆಲ್ಲವನ್ನು ಹೇಳಿಕೊಂಡು ಹೋದಾಗ, ಇದರಿಂದ ಏನು ಆಗಬಹುದೆಂದರೆ ಕಾಂಗ್ರೆಸ್‌ನವರೇ ಮೇಲ್ಮನೆಯಲ್ಲಿ ಈ ಒಂದು business ಅನ್ನು stall ಮಾಡುತ್ತಿದ್ದಾರೆಂಬ ಪ್ರಚಾರ ನಡೆದಿದೆ ಅಲ್ಲಿ ಒಂಭತ್ತು ದಿವಸಗಳಾಯಿತು ಅವರು ಏನು ಕೆಲಸವನ್ನು ಮಾಡುತ್ತಿಲ್ಲ, ಕೆಲಸ ಮಾಡಲು ಬಿಡುತ್ತಿಲ್ಲವೆಂದು ಆಗುತ್ತಿದೆ ಆದರೆ ಅಲ್ಲಿ ಸಭಾಪತಿಗಳ ಸ್ಥಾನ ಖಾಲಿ ಇದೆ ಅದನ್ನು ಸಂವಿಧಾನದ ಪ್ರಕಾರ ಮಾಡುವುದಕ್ಕೆ ಬರುವುದಿಲ್ಲವೆಂದು, ಏಕೆ highlight ಆಗುತ್ತಿದೆಯೆಂಬುದು ನನಗೆ ಗೊತ್ತಾಗುತ್ತಿಲ್ಲ, ಇಲ್ಲಿ ಏಕೆ ಚುನಾವಣೆ ಮಾಡುತ್ತಿಲ್ಲವೆಂದು ಗೊತ್ತಿಲ್ಲ ನಾವು ಇದನ್ನು amicably settle ಮಾಡಿಕೊಳ್ಳೋಣವೆಂದು ಹೇಳಿ, ನಾವು ಮಾನ್ಯ ಎಂ ಪಿ ಪ್ರಕಾಶ್‌ರವರನ್ನು ಹಾಗೂ ಮಾನ್ಯ ಮುಖ್ಯಮಂತ್ರಿರವರನ್ನು ಕೇಳಿಕೊಂಡೆ, ಈ ಬಗ್ಗೆ ಒಂದು ಸಭೆಯನ್ನು ಕೂಡ ನಡೆಸಿದರು ಇದನ್ನು ಎರಡೇ ದಿವಸಗಳಲ್ಲಿ settle ಮಾಡುತ್ತೇವೆಂದು ಹೇಳಿದರು ಇವರು ಎರಡು ದಿವಸಗಳಲ್ಲಿ ಸೆಟಲ್ ಮಾಡುತ್ತೇವೆಂದು ಹೇಳಿ, ಇನ್ನೂ ಇದರ ಬಗ್ಗೆ ಏನು ನಿರ್ಣಯವಿಲ್ಲ ಇವತ್ತು ಉಳ್ಳ ಏನು ಮಾಡಿದ್ದಾರೆಂದರೆ, ಎಲ್ಲಿ 40 ಜನ ಸದಸ್ಯರು ಕಾಂಗ್ರೆಸ್ ಪಕ್ಷದವರು ಇದ್ದಾರೆ ಅವರನ್ನು ಅಧ್ಯಕ್ಷರು rest of the session suspend ಮಾಡಿದ್ದಾರೆ ಅಂದರೆ, ಮೆಜಾರಿಟಿ ಇಲ್ಲದೇ ಒಬ್ಬ ಅಧ್ಯಕ್ಷರು 40 ಜನ

ಸದಸ್ಯರನ್ನು suspend ಮಾಡಬೇಕೆಂದರೆ, ಅವರು ಅಧ್ಯಕ್ಷರೇ ಅಲ್ಲ ಇಂತಹ illegal ಮತ್ತು against the rules, against the Constitution ನಡೆದುಕೊಳ್ಳವಂತಹ ವ್ಯವಸ್ಥೆ ಇದ್ದರೆ, ಇದನ್ನು ಡೆಮಾಕ್ರಸಿ ಎಂದು ಕರೆಯಬೇಕಾ? He has no locus-standi to do this and he has done ನಾವು ಇಲ್ಲಿ ಅಧ್ಯಕ್ಷರು ಎಂದೇ ಒಪ್ಪಿಕೊಳ್ಳುತ್ತಿಲ್ಲ ಅವರಿಗೆ ಕಾನೂನು ಪ್ರಕಾರ ಸಭಾಪತಿ ಆಗುವುದಕ್ಕೂ ಬರುವುದಿಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್. ಮಾನ್ಯ ಅಧ್ಯಕ್ಷರೆ, ಇದು ಎಷ್ಟು ದೊಡ್ಡ ಅಪರಾಧವೆಂದರೆ, ನಾನು ಮಾನ್ಯ ಎಂ ಪಿ ಪ್ರಕಾಶ್‌ರವರಲ್ಲಿ appeal ಮಾಡಿಕೊಳ್ಳುತ್ತೇನೆ Panel Chairman ಆ ಸೆಷನ್ ಆದ ತಕ್ಷಣ ಆ panel ಹೋಗಿಬಿಡುತ್ತದೆ He is no langer of the Chairman. Chairman ಎಂದು ಹೇಳಿ ಅಲ್ಲಿ ಒಬ್ಬ unauthorized person ಬಂದು ಕುಳಿತುಕೊಳ್ಳುವಂಥಾದ್ದು ನಿಜವಾದ senseನಲ್ಲಿ it amounts to impersonation It is a criminal offence ಯಾರಾದರೂ ಅದನ್ನು pursue ಮಾಡಿದರೆ ಮಾತ್ರ, it acquires dangerous dimensions ಪಾಪ ಆ concerned person himself is a senior advocate, practiced criminal law I don't know ಅವರು ಯಾವ ಪರಿಸ್ಥಿತಿಯಲ್ಲಿ ಇದಕ್ಕೆ ಸಿಕ್ಕಿ ಹಾಕಿಕೊಂಡರೋ ನನಗೆ ಗೊತ್ತಿಲ್ಲ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಎಂ ಪಿ ಪ್ರಕಾಶ್‌ರವರೆ purpose ಹಾಗೆ ಮಾಡಿರಬಹುದು

ಶ್ರೀ ಕೆ ಆರ್ ರಮೇಶ್ ಕುಮಾರ್ ಇಲ್ಲ, ನಾನು ಒಪ್ಪುವುದಿಲ್ಲ, ಬಹಳ ಹೆಚ್ಚು ಎಂದರೆ, ನಮಗೆ ತೊಂದರೆಯಾದಾಗ ನೀವು ಸಹಾಯ ಮಾಡುವುದಕ್ಕೆ ಆಗದೇ ಇರಬಹುದು ನೀವು ತೊಂದರೆ ಮಾಡುತ್ತೀರೆಂಬ ಮಾತನ್ನು ಅವರು ಹೇಳಿದ ಹಾಗೆ ನಾನು ಹೇಳುವುದಿಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ನಾನು houseನಲ್ಲಿ ಏನಾದರು mis-behave ರು ಮಾಡಿದರೆ, mis-conduct ಆಗಿದ್ದರೆ, ನೀವು ಇಲ್ಲಿಂದ ಅಭಿಪ್ರಾಯವನ್ನು ತೆಗೆದುಕೊಂಡು ನನ್ನನ್ನು ಹೊರಹಾಕಬೇಕೆಂದರೆ majority opinion ಪ್ರಕಾರ ಸದನದಿಂದ ಹೊರಹಾಕುತ್ತೀರಿ ಅಲ್ಲಿ majority ಎಲ್ಲಿಂದ ಬಂತು ಹೇಳಿ? 40 ಜನ ಸದಸ್ಯರು ಒಂದು ಕಡೆಯಾಗಿ ಚುನಾವಣೆಯನ್ನು ನಡೆಸಿ ಎಂದು ಕೇಳುವಾಗ, ಮೈನಾರಿಟಿಯಾಗಿದ್ದಂಥ ಜನ

Pm 17

ಯಾರನ್ನು ಅಧ್ಯಕ್ಷರೆಂದು recognition ಮಾಡಿಲ್ಲ, ಅಂಧವರು ಅಧ್ಯಕ್ಷ ಸ್ಥಾನದಲ್ಲಿ ಕುಳಿತು 40 ಜನ ಸದಸ್ಯರನ್ನು suspend ಮಾಡಿದ್ದೆನೆಂದು ಹೇಳಿದರೆ, ಇದಕ್ಕೆ ನಗಬೇಕೋ, ಆಳಬೇಕೋ, ಇದು ಸರ್ಕಾರವೋ, ಏನು ಎನ್ನುವುದೇ ಗೊತ್ತಾಗುವುದಿಲ್ಲ ಇಂತಹ ಘಟನೆಗಳು ನಡೆದಾಗ, ನೀವು ನದನದಲ್ಲಿ ಏಕೆ ಚರ್ಚೆ ಮಾಡುತ್ತೀರಿ? ಕಾನೂನು ಪ್ರಕಾರ ಇದೆ ಕಾನೂನು ಪ್ರಕಾರ ಇಲ್ಲದೇ ಏನು ಇದೆ? ಅದಕ್ಕೆ ಇದು ನಿಜವಾಗಿಯೂ ಅನ್ಯಾಯ, ಮತ್ತು ನಿಮಗೆ ಸಂವಿಧಾನದ ಬಗ್ಗೆ ಗೌರವವಿಲ್ಲ, rules ಬಗ್ಗೆ ಗೌರವವಿಲ್ಲ, ಅಥವಾ ಇವತ್ತು ಪರಸ್ಪರ ವಿಚಾರ ಮಾಡಿಯಾದರೂ ಇದನ್ನು ಬಗೆಹರಿಸುವುದಕ್ಕೆ ಅದರಲ್ಲೂ ನಂಬಿಕೆ ಇಲ್ಲ ಅಂದ ಮೇಲೆ ಹೇಗೆ ನಡೆಸುವುದೆಂದು ಹೇಳಿ? ಈ ರೀತಿಯಾಗಿ ನಾವು ನಡೆದುಕೊಂಡರೆ, ಖಂಡಿತವಾಗಿ ಇದು ಪ್ರಜಾಪ್ರಭುತ್ವವೋ ಅಥವಾ dictatatorship ನಲ್ಲಿ ಇದ್ದೆವೋ ಅಥವಾ ಏನೆಂಬುದು ನನಗೆ ಗೊತ್ತಾಗುತ್ತಿಲ್ಲ ಇದರ ಬಗ್ಗೆ ಮಾನ್ಯ ಎಂ ಪಿ ಪ್ರಕಾಶ್‌ರವರು ಒಂದೆರಡು ದಿವಸಗಳಲ್ಲಿ solve ಮಾಡುತ್ತೇನೆಂದು ಹೇಳಿದ್ದರು ಅವರಿಗೆ ಯಾರು ಅಡ್ಡ ಬಂದರೋ ಗೊತ್ತಿಲ್ಲ ಇಂತಹ sensitive issue, ನೀವು majority ಇಲ್ಲವೆಂದರೆ ಏನಾಯಿತು ಯಾರಾದರೂ ಬೇರೆ ಪಕ್ಷದವರು ಅಧ್ಯಕ್ಷರಾದರೆ ಅವರು ಏನು ಮಾಡುತ್ತಾರೆ? ಅವರು ತತ್ವದ ವಿರುದ್ಧ, rules ವಿರುದ್ಧ, business rules ವಿರುದ್ಧ ಹೋಗುವುದಕ್ಕೆ ಆಗುತ್ತದಾ? ನಮಗೆ ಆಗ , majority ಇತ್ತು, ಆಗ ನಾವು ಅವರೆಲ್ಲರನ್ನು continue ಮಾಡಿದೆವು Yes, ಶ್ರೀ ಡೇವಿಡ್ ಸಿಮೇಯೊನ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿದೆವು ಇಲ್ಲಿ ಬಿ ಜೆ ಪಿ ಯವರು ಅದ್ಯಕ್ಷರಾಗಬಾರದೆಂದು ಹೇಳಿ, ಜೆಡಿ ಎಸ್‌ನವರು ಕಾಂಗ್ರೆಸ್‌ನವರು ಒಂದಾಗಿ, understanding ಮೇಲೆ ಮಾಡಿದರು ಅದೇ ರೀತಿಯಾಗಿ ಮಾನ್ಯ ವಿ ಆರ್ ನುದರ್ಶನ್‌ರವರನ್ನು ಮಾಡಿದೆವು ಅದೇ ರೀತಿಯಾಗಿ ಹಿಂದೆ ಶ್ರೀ ಬಿ ಆರ್ ಪಾಟೀಲ್‌ರವರನ್ನು ಮಾಡಿದ್ದೇವೆ See like minded and like minded parties together they supported their State ಅದನ್ನು ನೀವು ನಿಮ್ಮ ಕಾಲದಲ್ಲಿ ಮಾಡಿದ್ದಾರೆಂದು ಹೇಳಿದರೆ, ಅದು ನಮ್ಮ ಕಾಲದಲ್ಲಿ ಮಾಡಿದ್ದು ನಮಗೆ majority ಇತ್ತು ಇವತ್ತು ನಿಮಗೆ majority ಇದ್ದರೆ ಹೇಳಿ, ಚುನಾವಣೆಯನ್ನು ಮಾಡಿ ಈ ರೀತಿಯಾಗಿ, ನಿಜವಾಗಿಯೂ

ಹೊರಗಡೆ ಏನು ಅಭಿಪ್ರಾಯ ಹುಟ್ಟಿದೆ ಕಾಂಗ್ರೆಸ್‌ನವರು ಪ್ರತಿಯೊಂದಕ್ಕೂ ತಡೆಯುತ್ತಾರೆ ಸದನದಲ್ಲಿ business ಅನ್ನು ನಡೆಸುವುದಕ್ಕೆ ಬಿಡುತ್ತಿಲ್ಲ ಈ ಅಭಿಪ್ರಾಯವನ್ನು ದುರ್ದೈವದಿಂದ ಏಕೆ ಮೂಡಿಸುತ್ತಿದ್ದಾರೋ ನನಗೆ ಗೊತ್ತಿಲ್ಲ ಅದಕ್ಕಾಗಿ ಇಂತಹ ಅಭಿಪ್ರಾಯವೂ ಕೂಡ ಇರಬಾರದು ಇಲ್ಲಿ ತಪ್ಪು ಯಾರದು ಇದೆ, ಅವರು ಒಪ್ಪಿಕೊಳ್ಳಬೇಕು ಇದನ್ನು ಸರಿಪಡಿಸಬೇಕು,ಪ್ರಜಾಪ್ರಭುತ್ವದಲ್ಲಿ ಚುನಾವಣೆ ಆಗಬೇಕು

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ

ಅಧ್ಯಕ್ಷರು ತಡೆಯಿರಿ ಸ್ವಾಮಿ ಈಗಾಗಲೇ ಎರಡು ಗಂಟೆಯಾಯಿತು ಒಂದು subject ತೆಗೆದುಕೊಂಡು, ಅದರ ಮೇಲೆ ಎಲ್ಲರೂ ಮಾತನಾಡುವವರೇ I can't understand ನೀವು senior people ಗೈಡ್ ಮಾಡುವುದರ ಬದಲು ಹೀಗೆ ಮಾಡಿದರೆ ಹೇಗೆ? ಎಲ್ಲರೂ ಹೇಳಿದ್ದಾರೆ, ವ್ಯಾಖ್ಯಾನ ಮಾಡಿದ್ದಾರೆ ಮತ್ತೆಮತ್ತೆ ಎಲ್ಲರೂ ಅವಕಾಶವನ್ನು ಕೇಳಿದರೆ, ಇದೇ ನಡೆಯಬೇಕೇ? ಇದು ಏನೆಂದು ನನಗೆ ಅರ್ಥವಾಗುವುದಿಲ್ಲ

ಶ್ರೀ ಆರ್ ವಿ ದೇಶಪಾಂಡೆ ಒಂದು ಹೊಸ ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ

ಅಧ್ಯಕ್ಷರು ಆಯಿತು ಸ್ವಾಮಿ ಈಗ ಎಲ್ಲರೂ ಹೇಳಲಿಲ್ಲವೇ? ನಿಮ್ಮ ನಾಯಕರುಗಳೆಲ್ಲ ಭಾಷಣ ಮಾಡಲಿಲ್ಲವೇ? ಎಲ್ಲರೂ ಮಾತನಾಡಬೇಕು ಎಂದರೆ ಹೇಗೆ?

ಶ್ರೀ ಆರ್ ವಿ ದೇಶಪಾಂಡೆ ನಾನು ಯಾವಾಗಲೂ ಮಧ್ಯದಲ್ಲಿ ಮಾತನಾಡಲು ಹೋಗುವುದಿಲ್ಲ ಮಾನ್ಯ ಗೌರವಾನ್ವಿತ Parliamentary Affairs Minister ರವರ ಗಮನಕ್ಕೆ ನಾನು ಒಂದು ವಿಷಯವನ್ನು ತರುತ್ತೇನೆ ಒಂದು, creation ಈ ಮನೆ ಮಾಡಿದ್ದೀರಿ ಎಂದು ಒಂದು ವಿಚಾರ ಪ್ರಸ್ತಾಪವಾಯಿತು Constitutional deadlock ಆಗಿದೆ ಎಂದು ಪ್ರಸ್ತಾಪವಾಯಿತು ಮೂರನೆಯದು ಮತ್ತು ಈಗ ನಾನು ಪ್ರಸ್ತಾಪ ಮಾಡುತ್ತಿರುವ ಹೊಸ ವಿಷಯವೆಂದರೆ, ಇವತ್ತಿನ Agenda ದಲ್ಲಿ ನೀವು ಹಲವಾರು Bill ಗಳನ್ನು ಹಾಕಿದ್ದೀರಿ ಈ Bill ಗಳು ಇಲ್ಲಿ ಪಾಸ್ ಆದನಂತರ ಮೇಲ್ಮನೆಗೆ ಹೋಗಬೇಕಲ್ಲವೇ? ಅಲ್ಲಿ ಅದು at least rejectಆಗಿ ಬರಲಿ ಅಥವಾ ಪಾಸ್ ಆಗಲಿ ಅದು ಅಲ್ಲಿಗೆ ಹೋಗಬೇಕಲ್ಲವೇ? ಆದರೆ, ಈಗ

ಅದು ಮೇಲ್ಮನೆಗೆ ಹೋಗುವುದಿಲ್ಲ ಮೇಲ್ಮನೆ function ಆಗುತ್ತಿಲ್ಲ ಅದು unconstitutional ಆಗಿದೆ, illegal ಆಗಿದೆ ಆಗ ಈ Billನ ಪರಿಸ್ಥಿತಿ ಏನಾಗುತ್ತದೆ? Parliamentary Affairs Minister ಇದರ ಬಗ್ಗೆ ವಿಚಾರ ಮಾಡಬೇಕೋ, ಬೇಡವೋ? ಇವತ್ತಿನ Agenda ದಲ್ಲಿ ಹಲವಾರು Billಗಳನ್ನು slate ಮಾಡಿದ್ದೀರಿ Education Bill ಇದೆ, Civil Service Bill ಇದೆ ಆ Billಗಳ ಪರಿಸ್ಥಿತಿ ಏನು? ಹಾಗಾಗಿ ಅಲ್ಲಿ ಏನು deadlock ನಿರ್ಮಾಣವಾಗಿದೆ, ಅದರ ಪರಿಣಾಮ ಈ ಮನೆಯಲ್ಲಿ ಸಹಾ ಆಗುತ್ತಿದೆ, ಇಲ್ಲಿಯೂ ಸಹ ಒಂದು Constitutional crisis create ಆಗಬಹುದು ಆ procedure ತಾನೇ ಮಾಡಬೇಕು ಹೀಗಿರುವಾಗ, ಇಲ್ಲಿ Bill pass ಮಾಡಿದರೂ ಸಹ ಉಪಯೋಗವೇನು? ಹಾಗಾಗಿ, ಆ Bill ಗಳನ್ನು move ಮಾಡುವುದಕ್ಕಿಂತ ಮುಂಚೆ, ಆ Billಗಳ ಪರಿಸ್ಥಿತಿ ಏನಾಗಬಹುದು ಎನ್ನುವುದನ್ನು ಮಾನ್ಯ Parliamentary Affairs Minister ವಿಚಾರ ಮಾಡಬೇಕು ಕೊನೆಯದಾಗಿ, ಈಗಾಗಲೇ ನಮ್ಮ ಪಕ್ಷದ ಅಧ್ಯಕ್ಷರು ಹೇಳಿದ ಹಾಗೆ, ಅಲ್ಲಿ ನಮ್ಮದು majority ಇದ್ದರೂ ಸಹ 40 ಜನ ಶಾಸಕರನ್ನು suspend ಮಾಡಿದ್ದಾರೆ ಅಲ್ಲಿ ಅಧ್ಯಕ್ಷರ ಮೇಲೆ No confidence motion move ಆಗಿದೆ ಆ No Confidence Motion ಚರ್ಚೆಗೆ ಬರಬೇಕು, slate ಆಗಬೇಕು ಹಾಗಾಗಿ, ಅದನ್ನು avoid ಮಾಡಲೂ ಈ ರೀತಿ ಮಾಡಿರಬಹುದು ಇದು ಸರಿಯೇನು? ಇದು ನಿಜವಾದ ಪ್ರಜಾಪ್ರಭುತ್ವವೇನು? It is the murder of Democracy Unconstitutional ಆಗಿ ಈ ರೀತಿ ಮಾಡಿರುವುದು ಸರಿಯಲ್ಲ ಇಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿರಬೇಕಾಗಿತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ, ಅವರು ಬರುತ್ತೇನೆ ಎಂದು ಹೇಳಿ ಹೋದರು ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಬಹಳ ಜಬಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ, ಜವಾಬ್ದಾರಿಯಿಂದ ಉತ್ತರ ಕೊಡಬೇಕಾಗುತ್ತದೆ ಇವತ್ತು ಅಲ್ಲಿ ನಮ್ಮದು majority ಇದ್ದರೂ ಸಹ ತಾವು ಚುನಾವಣೆ ಮಾಡುವುದಿಲ್ಲವೆಂದರೆ ಅದು ಸರಿಯಲ್ಲ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಅಧ್ಯಕ್ಷರೇ ಒಂದು ನಿಮಿಷ ಅವಕಾಶ ಕೊಡಿ

ಅಧ್ಯಕ್ಷರು ಆಯಿತು, ಎಲ್ಲರೂ ಮಾತನಾಡಿದ್ದಾರೆ ಈಗಾಗಲೇ ಎರಡು ಗಂಟೆ ಯಾಯಿತು ಮತ್ತೆಮತ್ತೆ ಅದನ್ನೇ ಮಾತನಾಡಿಕೊಂಡು ಕುಳಿತರೆ ಹೇಗೆ? ಇದೇನು ಎಂದು ನನಗೆ ಅರ್ಥವಾಗುತ್ತಿಲ್ಲ ಚರ್ಚಿಸಲು ಇನ್ನೂ ಬೇರೆಬೇರೆ ವಿಷಯಗಳಿವೆ

ಶ್ರೀ ಎನ್ ಧರಂಸಿಂಗ್ ಮಾನ್ಯ ಅಧ್ಯಕ್ಷರೇ, ನಾನು ಪ್ರಸ್ತಾಪ ಮಾಡಿರುವ ವಿಷಯವನ್ನು ಏಕಾಏಕಿಯಾಗಿ ಪ್ರಸ್ತಾಪ ಮಾಡಿಲ್ಲ ಅಲ್ಲಿ ಒಂಭತ್ತು ದಿನಗಳ ಕಾಲ ಕಾರ್ಯಕಲಾಪ ನಡೆದಿಲ್ಲ ಈ ಬಗ್ಗೆ ಈಗಾಗಲೇ, ನಾವು, ಖರ್ಗೆಯವರು, ಹೆಚ್ ಕೆ ಪಾಟೀಲರು ಮತ್ತು ಚಂದ್ರಶೇಖರ್‌ರವರು ಎಲ್ಲರೂ ಕೂಡಿ ಪ್ರಕಾಶ್‌ರವರ ಜೊತೆಯಲ್ಲಿ ಮತ್ತು ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇವೆ ಸಭಾಪತಿಗಳು ಕೂಡ ಅಲ್ಲಿ ಇದ್ದರು ನಮ್ಮ ವಾದ ಏನಿತ್ತು ಎಂದರೆ, ತಿಪ್ಪಣ್ಣನವರಿಗೆ ಆ ಪೀಠದ ಮೇಲೆ ಕೂಡತಕ್ಕಂಥ ಹಕ್ಕಿಲ್ಲ ಏಕೆಂದರೆ ಅವರಿಗೆ ಬಹುಮತ ಇಲ್ಲ ಜಂಟಿ ಅಧಿವೇಶನದಲ್ಲಿ, ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ Panel of namesನಲ್ಲಿ ಬಂದು ಕೂಡತಕ್ಕಂಥ ಹಕ್ಕಿತ್ತು He can't preside over the House ಇದು ನಮ್ಮ ವಾದ ಅಲ್ಲಿ ಇವತ್ತು No Confidence Motion ಕೂಡಾ ಇದೆ ಏಕಾಏಕಿ ತಿಪ್ಪಣ್ಣನವರು ಅಲ್ಲಿ ಕುಳಿತು suspend ಮಾಡಿದರೆ ಹೇಗೆ? ಇಲ್ಲಿ ನಿಮಗೆ ನಾವು ಎಷ್ಟು ಸವಾಲು ಹಾಕುತ್ತೇವೆ, ನೀವು ಎಂದಾದರೂ suspend ಮಾಡಿರುವಿರಾ? ಎಷ್ಟು ಸವಾಲು ಹಾಕಿಲ್ಲ ನಿಮಗೆ ನಿಮ್ಮ ಮೇಲೆ No Confidence Motion ಅನ್ನೂ ತಂದಿದ್ದೇವೆ ಅದು ಯಾವಾಗ ಬರುತ್ತದೆ ಎನ್ನುವುದನ್ನೂ ಹೇಳಬೇಕು ಆದರೆ ನೀವು ಅಂಥ drastic step ತೆಗೆದುಕೊಳ್ಳಲು ಹೋಗಿಲ್ಲ ತಿಪ್ಪಣ್ಣನವರಿಗೆ preside ಮಾಡತಕ್ಕಂಥ ಅಧಿಕಾರವಿಲ್ಲವೆಂದು ಹೇಳಿ ಅದನ್ನು question ಮಾಡಿದ್ದೇವೆ ಆ ಪೀಠದಲ್ಲೇ ಕುಳಿತು ಅವರು suspend ಮಾಡುತ್ತಾರೆ ಎಂದರೆ ಹೇಗೆ? ಪ್ರಕಾಶ್‌ರವರೇ ಇದಕ್ಕೆ ನೀವು ಉತ್ತರ ಕೊಡಲಿಕ್ಕೇ ಸಾಧ್ಯವಿಲ್ಲ ಕರ್ನಾಟಕದ ಇತಿಹಾಸದಲ್ಲಿ ಮೊಟ್ಟಮೊದಲನೆಯದಾಗಿ ವಿಧಾನ ಪರಿಷತ್ತಿನಲ್ಲಿ ಬಹುಮತ ಹೊಂದಿರತಕ್ಕಂಥ 40 ಶಾಸಕರನ್ನು ಅಮಾನತ್ತು ಮಾಡಿದ್ದಾರೆ ಇದಕ್ಕೆ ನಮಗೆ ಉತ್ತರವೇನೂ ಬೇಕಾಗಿಲ್ಲ ಇವತ್ತು ಸರ್ಕಾರದ

ಉದ್ಧಟತನವೇನಿದೆ? Undemocratic act ಆಗಿ ತಾವೇನು ಮಾಡುತ್ತಿದ್ದೀರಿ, ಮನಸ್ಸಿಗೆ ಬಂದ ಹಾಗೆ ಸರ್ಕಾರವನ್ನು ನಡೆಸತಕ್ಕಂಥ ಮನೋಭಾವನೆ ಏನಿದೆ, ಅದನ್ನು ನಾವು ಧಿಕ್ಕರಿಸುತ್ತಿದ್ದೇವೆ ಮತ್ತು ನಿಮ್ಮ ಉತ್ತರವಾದ ಮೇಲೆ ನಮ್ಮ ಮುಂದಿನ ಕ್ರಮ ಏನೆನ್ನುವುದನ್ನು ಹೇಳುತ್ತೇವೆ

ಶ್ರೀ ಎಂ ಪಿ ಪ್ರಕಾಶ್ ಸಭಾತ್ಯಾಗ ಮಾಡುವಿರಾ?

ಶ್ರೀ ಎನ್ ಧರಂಸಿಂಗ್ ಸಭಾತ್ಯಾಗವಲ್ಲ, ನಂತರ ನಾವು ಏನು ಮಾಡುತ್ತೇವೆ ಎನ್ನುವುದನ್ನು ಹೇಳುತ್ತೇವೆ

ಶ್ರೀ ಎಂ ಪಿ ಪ್ರಕಾಶ್ ಮುಂದೆ ಅಲ್ಲ, ಈಗಲೇ ಸಭಾತ್ಯಾಗ ಮಾಡಿ ಹೋಗುವಿರೇನೋ ಎಂದು ನನಗೆ ಗಾಬರಿಯಾಯಿತು

ಶ್ರೀ ಎನ್ ಧರಂಸಿಂಗ್ 40 ಶಾಸಕರನ್ನು ಅಮಾನತ್ತು ಮಾಡತಕ್ಕಂಥ ವಿಷಯದಲ್ಲಿ ನಿಮಗೆ ಯಾವ ಪರಿಜ್ಞಾನವೂ ಇಲ್ಲ ನಂತರ ನಾವು ಏನು ಮಾಡುತ್ತೇವೆ ಎನ್ನುವುದನ್ನು ಹೇಳುತ್ತೇವೆ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಅಧ್ಯಕ್ಷರೇ, ಹಿಂದೆ ನಾನು ಮೇಲ್ಮನೆಯ ಉಪಾಧ್ಯಕ್ಷ ನಾಗಿದ್ದೆ ಒಂದು ವಿಶಿಷ್ಟವಾದ ಸಂದರ್ಭದಲ್ಲಿ ನಾನೂ ಕೂಡ ಏಳು ತಿಂಗಳು In charge Chairman ಆಗಿ ಕೆಲಸ ಮಾಡಿದ್ದೇನೆ ಆ ಹಿನ್ನೆಲೆಯಲ್ಲಿ ತಾವು ನನಗೆ ಒಂದೆರಡು ನಿಮಿಷ ಮಾತನಾಡಲು ಅವಕಾಶ ಕೊಡಬೇಕು Upper House is created through Legislation by the Lower House ಈ ಸದನದ ನಿರ್ಣಯದ ಮುಖಾಂತರ, ಇಲ್ಲಿ ಒಂದು Bill pass ಮಾಡಿ ನಾವು Upper House ಅನ್ನು create ಮಾಡಿದ್ದೇವೆ ನಾವು ಇಲ್ಲಿಂದ ನಮ್ಮ ಪ್ರತಿನಿಧಿಗಳನ್ನು ಕೂಡ Upper Houseಗೆ ಕಳುಹಿಸಿದ್ದೇವೆ ನನ್ನ ಅನುಭವದ ಹಿನ್ನಲೆಯಲ್ಲಿ ಒಂದೆರಡು ಮಾತುಗಳನ್ನು ಹೇಳುವುದಾದರೆ, ಆಗ ಸನ್ಮಾನ್ಯ ಮಂಜುನಾಥ್‌ರವರು ಸಭಾಪತಿಗಳಾಗಿದ್ದರು ಮಂಜುನಾಥ್‌ರವರ ಅವಧಿ ಮುಗಿದ ಮೇಲೆ ಚುನಾವಣೆ ನಡೆಯಲಿಲ್ಲ ಆಗ ನಾನು ಸುಮಾರು ಏಳು ತಿಂಗಳ ಕಾಲ In charge Chairman ಆಗಿ, ಎರಡು ಸಲ ಸದನವನ್ನು ನಡೆಸುವಂಥ ಸಂದರ್ಭ ಬಂದಿತ್ತು ಆವತ್ತು ಇನ್ನಾನಪ್ಪ ಎನ್ನುವವರು ವಿಧಾನ ಮಂಡಲದ ಕಾರ್ಯದರ್ಶಿಯಾಗಿದ್ದರು ಅವರೂ ಕೂಡ judiciary ಯಿಂದ ಬಂದಂಥವರು ಆವತ್ತು ನಾವು ಒಂದು legal opinion ತೆಗೆದುಕೊಂಡು, ಯಾರು ಉಪಾಧ್ಯಕ್ಷರಾಗಿರುತ್ತಾರೆ ಅವರೇ ಬಂದು ಸಭೆಯನ್ನು ಪ್ರಾರಂಭ

ಮಾಡಬೇಕು, ಬೇರೆಯವರು, ಅಂದರೆ ಯಾರು panel ನಲ್ಲಿರುತ್ತಾರೆ ಅವರು ಸಭೆಯನ್ನು ಪ್ರಾರಂಭ ಮಾಡುವುದಕ್ಕಾಗುವುದಿಲ್ಲ ಈ ರೀತಿಯ ಸ್ಪಷ್ಟವಾದ ಅಭಿಪ್ರಾಯವನ್ನುತೆಗೆದುಕೊಂಡು, ಉಪಾಧ್ಯಕ್ಷ ಸ್ಥಾನ ಹೊಂದಿದ್ದ ನಾನೇ In charge Chairman ಆಗಿ ಸಭೆಯನ್ನು ಪ್ರಾರಂಭ ಮಾಡುತ್ತಿದ್ದೆ ಮತ್ತು ಮಧ್ಯದಲ್ಲಿ panel ನಲ್ಲಿದ್ದವರಿಗೆ ಬಂದು ಕೂಡುವುದಕ್ಕೆ ಅವಕಾಶ ಕೊಡುತ್ತಿದ್ದೆ ಈ ರೀತಿ ನಾನು ಎರಡು ಸಲ ಸದನವನ್ನು ನಡೆಸಿದ್ದೇನೆ ಇವತ್ತು ನಾನು ತಲೆ ತಗ್ಗಿಸಿ ಹೇಳಬೇಕಾಗುತ್ತದೆ, ನಾವು democracyಯನ್ನು ಏನು maintain ಮಾಡಿಕೊಂಡು ಬಂದಿದ್ದೇವೆ, through practice, traditions, customs ಗಳನ್ನೇನು ನಡೆಸಿಕೊಂಡು ಬಂದಿದ್ದೇವೆ, ಅದಕ್ಕೆ ಧಕ್ಕೆಯಾಗಿದೆ ಯಾರಾದರೂ ಹಿಂಬಾಗಿಲಿನಿಂದ ಬಂದು ನಿಮ್ಮ ಜಾಗದಲ್ಲಿ ಕೂಡಬಹುದೇ ಅಧ್ಯಕ್ಷರೇ? ತಾವು ರಾಜೀನಾಮೆ ಕೊಟ್ಟಿರಿ ಅಥವಾ ತಾವು ವಿದೇಶಕ್ಕೆ ಹೋದಿರಿ, ಆ ಸಂದರ್ಭದಲ್ಲಿ ಉಪಾಧ್ಯಕ್ಷರ ಆರೋಗ್ಯ ಕೂಡ ಹಾಳಾಗಿತ್ತು ಎಂದಾಗ ಯಾರಾದರೂ ಹಿಂಬಾಗಿಲಿನಿಂದ ಬಂದು ನಿಮ್ಮ ಜಾಗದಲ್ಲಿ ಕೂಡಲು ಸಾಧ್ಯವಿಲ್ಲ ಸದನದ ಬಹುಮತದ ಮೇಲೆ ಅಥವಾ ಒಪ್ಪಂದದ ಮೇಲೆ ಯಾರಾದರೂ ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳಬಹುದು ಅಥವಾ, ಇಂಥ ವಿಶಿಷ್ಟವಾದ ಸಂದರ್ಭದಲ್ಲಿ ರಾಜ್ಯಪಾಲರು, ಯಾರಾದರೊಬ್ಬ ಹಿರಿಯ ಸದಸ್ಯರನ್ನು ಆ ಸ್ಥಾನಕ್ಕೆ ಅಧ್ಯಕ್ಷರನ್ನಾಗಿ ನೇಮಕ ಮಾಡಬಹುದು ಇವೆರಡು ಪದ್ಧತಿಯನ್ನು ಬಿಟ್ಟು, ಬೇರೆ ರೀತಿಯಲ್ಲಿ ಯಾರನ್ನಾದರೂ ಸಭೆಯ ಅಧ್ಯಕ್ಷರನ್ನಾಗಿ ಮಾಡಬೇಕೆಂದರೆ ಅದು ಸಾಧ್ಯವಿಲ್ಲ ಇವತ್ತು ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನಾವು ಈ ಸದನದಿಂದ ಕೆಲವು ಸದಸ್ಯರನ್ನು ಚುನಾಯಿಸಿ ಮೇಲ್ಮನೆಗೆ ಕಳುಹಿಸಿದ್ದೇವೆ ಇವತ್ತು ಅವರನ್ನು name ಮಾಡಿ ಹೊರಗೆ ಹಾಕಿದ್ದಾರೆ ಇದು ಈ ಸದನಕ್ಕೂ ಕೂಡ ಅಪಮಾನ ಈ ಸಭೆಯ ಮೂಲಕ ಚುನಾಯಿತರನ್ನಾಗಿ ಮಾಡಿ ಆ ಸಭೆಗೆ ಕಳುಹಿಸಿರುವವರನ್ನು ವಿನಾ ಕಾರಣ, ಅವರು ಪ್ರಸ್ತಾಪಿಸಿದ ಒಂದು ತಾತ್ವಿಕ ಪ್ರಶ್ನೆಗೆ ಅವರನ್ನು ಸಭೆಯಿಂದ ಹೊರಹಾಕಿರುವುದು ಅಕ್ಷಮ್ಯ ಅವರಾದ ಮತ್ತು ಈ ಸಭೆಗೆ ಕೂಡ ಅಗೌರವ ತಂದಂಥಾದ್ದು ಇಂಥ ಒಂದು ಕೆಟ್ಟ ಕೆಲಸ ಮೇಲ್ಮನೆಯಲ್ಲಿ ನಡೆದ ಕಾರಣ, ಈ ಸಭೆಗೆ ಅಪಮಾನ ಮಾಡಿದುದನ್ನು ನಾನು ಖಂಡಿಸುತ್ತೇನೆ ಮತ್ತು ಆ ಸದಸ್ಯರನ್ನು ಹೊರಗೆ ಹಾಕಿದುದನ್ನೂ ಖಂಡಿಸುತ್ತೇನೆ ದಯಮಾಡಿ ಸರ್ಕಾರ

ಇದಕ್ಕೆ ಒಂದು ವಿರಾಮ ಹಾಕಬೇಕು ಇಲ್ಲದಿದ್ದರೆ, ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಗೊಂದಲ ಸೃಷ್ಟಿ ಮಾಡುವುದಕ್ಕೆ ಕರ್ನಾಟಕ ಮುಂದಾಗಿ ನಿಂತ ಅಪರಾಧವಾಗುತ್ತದೆ ಆದ್ದರಿಂದ, ಸರ್ಕಾರದವರು ದಯಮಾಡಿ ಇದನ್ನು ಬಗೆಹರಿಸಬೇಕು ಎಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್(ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೇ, ಬಹಳ ಮಹತ್ವವಾದಂಥ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಹಿರಿಯರು ಪ್ರಸ್ತಾಪ ಮಾಡಿದ್ದಾರೆ ಇದು ಯಾರಿಗೂ ಸಂತೋಷ ಮತ್ತು ಭೂಷಣ ತರತಕ್ಕಂಥ ಘಟನೆ ಎಂದು ನಾವ್ಯಾರೂ ಭಾವಿಸಿಲ್ಲ ಅದು ಹಿರಿಯರ ಮನೆ, ಅಂದರೆ ನಮಗೆ ಮಾರ್ಗದರ್ಶನ ಮಾಡತಕ್ಕಂಥ ಮನೆ ಕೂಡ ಅದು ನಮ್ಮ ನಿಯಮಾವಳಿಗಳಿಂದ ಸೃಷ್ಟಿಯಾಗಿರತಕ್ಕಂಥಾದ್ದು ಈ ಮನೆ ಮೇಲ್ಮನೆಯನ್ನು ಸೃಷ್ಟಿ ಮಾಡಿದೆ ರಾಜ್ಯಸಭೆಗೂ ಮತ್ತು ವಿಧಾನ ಪರಿಷತ್ತುಗಳಿಗೂ ವ್ಯತ್ಯಾಸವಿದೆ ರಾಜ್ಯಸಭೆಯನ್ನು ಸಂವಿಧಾನವೇ ಸೃಷ್ಟಿ ಮಾಡಿರುವುದರಿಂದ, ಲೋಕಸಭೆ ಮತ್ತು ರಾಜ್ಯ ಸಬೆಗಳೆರಡೂ ಸಂವಿಧಾನಾತ್ಮಕ ವಾಗಿರತಕ್ಕಂಥ ಅಧಿಕಾರದ ವ್ಯಾಪ್ತಿಯಲ್ಲಿ ಇರುತ್ತವೆ ಆದರೆ ವಿಧಾನ ಪರಿಷತ್ತುಗಳನ್ನು ಆಯಾ ರಾಜ್ಯಗಳಲ್ಲಿರತಕ್ಕಂಥ ವಿಧಾನಸಭೆಗಳು ಸೃಷ್ಟಿ ಮಾಡಬೇಕಾಗುತ್ತದೆ ಆದರೆ ಇತ್ತೀಚಿನ ದಿನಮಾನಗಳಲ್ಲಿ, ಅನೇಕ ಸಂದರ್ಭಗಳಲ್ಲಿ ರಾಜಕೀಯ ನಿರ್ಧಾರಗಳಲ್ಲಿ ತೋರಿಸಬೇಕಾದಂಥ ನಿಜವಾದಂಥ ಪ್ರಭುತ್ವವನ್ನಾಗಲೀ ಅಥವಾ ಅದಕ್ಕೆ ಬೇಕಾಗಿರತಕ್ಕಂಥ in spirit ಎಂದು ಏನು ಹೇಳುತ್ತೇವೆ, ಅದರ ನಿಜವಾದ ಆಶಯದಂತೆ ನಡೆದುಕೊಳ್ಳಲು ಸಾಧ್ಯವಾಗಿಲ್ಲದ್ದರಿಂದ, ತಮಿಳುನಾಡಿನಲ್ಲಿಂಥ ವಿಧಾನ ಪರಿಷತ್ತಿಗೆ ಒಬ್ಬ ಚಿತ್ರನಟಿಯನ್ನು ನೇಮಕಾತಿ ಮಾಡಲಿಲ್ಲ ಎನ್ನುವ ಸಿಟ್ಟಿಗಾಗಿಯೇ, ಅದಕ್ಕೆ ರಾಜ್ಯಪಾಲರು ಒಪ್ಪಿಗೆ ಕೊಡಲಿಲ್ಲ ಎನ್ನುವ ಕಾರಣಕ್ಕಾಗಿಯೇ, ಬಹಳ ಪ್ರಬಲವಾಗಿದ್ದಂಥ ಮುಖ್ಯಮಂತ್ರಿ ವಿಧಾನ ಪರಿಷತ್ತನ್ನೇ ರದ್ದು ಮಾಡಿ ಹಾಕಿದರು

ಅದಾದನಂತರ ಇಂಥಹದೇ ಒಂದು ಸನ್ನಿವೇಶ ಆಂಧ್ರಪ್ರದೇಶದಲ್ಲಿ ಆಯಿತು ಅವರಿಗೆ ಯಾರೋ ಇಷ್ಟ ಇದ್ದಂಥವರನ್ನು ಈ ಸಮಾಜ ಕಾರ್ಯಕರ್ತರ ನೆಪದಲ್ಲಿ ನಾಮಕರಣ ಮಾಡಿಲ್ಲವೆನ್ನುವ ಕಾರಣಕ್ಕಾಗಿಯೇ ಅಲ್ಲಿ

ವಿಧಾನಪರಿಷತ್ತು ರದ್ದಾಯಿತು ಮತ್ತೆ ಅಲ್ಲಿ ವಿಧಾನಪರಿಷತ್ತನ್ನು ಮನರ್ ನೇಮಕಾತಿ ಮಾಡಬೇಕಾಗಿದೆನ್ನುವಂಥ - ಗೊತ್ತುವಳಿಯನ್ನು ಈಗ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ತರತಕ್ಕಂಥ ಪ್ರಯತ್ನವನ್ನು ಕೂಡ ಮಾಡಲಾಗುತ್ತಿದೆ ಆದರೆ, ಒಟ್ಟಿನಲ್ಲಿ ನಾವು ಅನುಸರಿಸಬೇಕಾದಂಥ ಕ್ರಮ ಏನೆಂದರೆ, ವಿಧಾನ ಪರಿಷತ್ತು ಇರಬೇಕೋ ಅಥವಾ ಇರಬಾರದೆನ್ನತಕ್ಕಂಥದ್ದು ಪ್ರಜಾಪ್ರಭುತ್ವದ ಆಶಯಗಳ ಅನುಗುಣವಾಗಿಯೇ ಇರಬೇಕೇ ವಿನ ಒಬ್ಬ ಪ್ರಭಾವಿ ನಾಯಕನ ಮುಲಾಜಿಗಳಲ್ಲಿ ನಡೆಯಬಾರದು ಆ ಪ್ರಭಾವಿ ನಾಯಕರ ಮುಲಾಜುಗಳಲ್ಲಿ ನಡೆಯುತ್ತಿರುವುದರಿಂದ ಈ ಒಂದು ಉತ್ತಮವಾಗಿರತಕ್ಕಂಥ ಪ್ರಶ್ನೆ ತನ್ನ ಘನತೆಯನ್ನು ಕಳೆದುಕೊಳ್ಳುತ್ತದೆ ಆದರೂ ಕೂಡ ಇಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ರಮೇಶ್‌ಕುಮಾರ್‌ರವರು, ಇನ್ನಿತರ ಹಿರಿಯರೆಲ್ಲರು ಪ್ರಸ್ತಾಪ ಮಾಡಿದಂತೆ ಅಲ್ಲಿ ಆಗಬೇಕಾಗಿದ್ದಂಥ ಚುನಾವಣೆ ಮುಂದಿನ session ಅಧಿವೇಶನ ಕರೆದ ತಕ್ಷಣ ಆಗಬೇಕು ಯಾವುದೇ ಕಾರಣಕ್ಕಾಗಿ ಅದು ಸಾವಿನ, ರಾಜಿನಾಮೆಯ ಅಥವಾ ಇನ್ಯಾವುದೋ ಕಾರಣಕ್ಕಾಗಿ ಸಭಾಪತಿ ಮತ್ತು ಉಪ ಸಭಾಪತಿಯ ಹುದ್ದೆಗಳು ಖಾಲಿ ಇದ್ದಾಗ ಅವುಗಳನ್ನು ಮುಂದೆ ಬಂದಂಥ ಅಧಿವೇಶನದಲ್ಲಿ ಚುನಾವಣೆ ನಡೆಸಬೇಕೆಂದು ನಮ್ಮ ನಿಯಮಾವಳಿಯಲ್ಲಿದೆ ಆದರೆ ಈ ನಿಯಮಾವಳಿಗಳನ್ನು ನಾವು ನಮ್ಮ ನಮ್ಮ ಅನುಕೂಲಕ್ಕೆ ತಕ್ಕಂತೆ ಅರ್ಥೈಸುವ ಪ್ರಯತ್ನ ಮಾಡುತ್ತೇವೆ, ಇಲ್ಲದಿದ್ದರೆ ಕಡೆಗಣಿಸುವ ಪ್ರಯತ್ನ ಮಾಡುತ್ತೇವೆ ಈ ಕಾರಣದಿಂದ ಈ ಎಲ್ಲಾ ಲೋಪದೋಷಗಳು ಆಗಲಿಕ್ಕೂ ಅದು ಕಾರಣವಾಗಿದೆ ಮಾನ್ಯ ಬಿ ಆರ್ ಪಾಟೀಲ್‌ರವರು ಹೇಳಿದರು ಹಿಂದೆ ಇದೆಲ್ಲ ಶ್ರೀ ಸುದರ್ಶನ್‌ರವರ ಕಾಲದಲ್ಲಿ ಆಯಿತು ಆ ನನ್ನಿವೇಶದಲ್ಲಿ ರಾಜಕೀಯ ಪಕ್ಷಗಳು, ಇವತ್ತೇನು ಈ ವಿಚಾರವನ್ನು ಪ್ರಸ್ತಾಪ ಮಾಡತಕ್ಕಂಥ ನಾವೆಲ್ಲರೂ ಕೂಡ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ ಉದಾಹರಣೆಗೆ ಹೇಳುವುದಾದರೆ, ಈ ಚುನಾವಣೆಯನ್ನು ತತಕ್ಷಣದಲ್ಲಿ ನೀವು ಮಾಡಿದ್ದರೆ ಯಾರು ಅಧ್ಯಕ್ಷರಾಗಿರತಕ್ಕಂಥವರು ಅಥವಾ Speaker ಆಗಿರತಕ್ಕಂಥವರು ಅವರು ಪಕ್ಷಾತೀತರಾಗಿರುತ್ತಾರೆ ಎನ್ನುವಂಥ ಕಾರಣ ಇರುವುದರಿಂದ, ಅವರು ತೀರ್ಮ ಕೊಡುವಾಗ ಪಕ್ಷಪಾತತನದಿಂದ ವರ್ತಿಸುತ್ತಾರೆಂದು ನಾವು ಪರಿಭಾವಿಸಿಕೊಳ್ಳತಕ್ಕಂಥದ್ದೇ ನಾಚಿಕೆಗೇಡಿನ ಸಂಗತಿಯಾಗಿದೆ ಆ ರೀತಿ

ಯೋಚನೆ ಮಾಡುವುದೇ ತಪ್ಪು ಇನ್ನು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಹೇಳುವ ಮಾತೇನೆಂದರೆ, ಅನೇಕ ಸಂದರ್ಭಗಳಲ್ಲಿ ಯಾರು ಅಧ್ಯಕ್ಷರಾಗಿರುತ್ತಾರೆ, ಅವರಿಗೆ ಚುನಾವಣೆಯ ಭಯ ಅಥವಾ ಆ ಪಕ್ಷದ ticket ನ ಭಯ ಇರಬಾರದು England ನ House of commons ಅನ್ನು ನಾವು ಪ್ರಜಾಪ್ರಭುತ್ವದ ತಾಯಿ ಸ್ವರೂಪ England ಎಂದು ಪ್ರಸ್ತಾಪ ಮಾಡುತ್ತೇವೆ House of Commons ನಲ್ಲಿರುವಂಥ Speaker ವಿರುದ್ಧವಾಗಿ ಯಾವ ಪಕ್ಷದವರೂ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸುವುದಿಲ್ಲ ಯಾರ ಪಕ್ಷದವರ ಮುಲಾಜು ಇಲ್ಲದೆ ticket ಇಲ್ಲದೇ ಗೆದ್ದು ಬರಬಹುದು ಎಂದಾಗ, ಅವರ ಮುಲಾಜಿನಲ್ಲಿ ಕೆಲಸ ಮಾಡಬೇಕಾದಂಥ ಅಗತ್ಯ ಇಲ್ಲವೆಂದಾದಾಗ, Speaker ಆಗಿರತಕ್ಕಂಥವರು ನಿಷ್ಪಕ್ಷಪಾತವಾಗಿ ವರ್ತಿಸಲಿಕ್ಕೆ ಎಲ್ಲ ತರವಾದಂಥ ನೈತಿಕ ಸ್ಥೈರ್ಯ ಬರುತ್ತದೆ Speaker ರವರು ರಾಜಕೀಯ ಪಕ್ಷಕ್ಕೆ ಸಂಬಂಧವಿಲ್ಲದಂಥವರು, ಪಕ್ಷಾತೀತವಾಗಿರಬೇಕೆಂದು ಬರೀ ನಿಯಮಾವಳಿಗಳಲ್ಲಿ ಮಾತನಾಡುತ್ತೇವೆ ಅದು ನಿಜ ಅದೆಲ್ಲೋ ಒಬ್ಬ ಮಡಗಾಂವಕರ್ ಅಂಥವರೊಬ್ಬರು ಪಕ್ಷಾತೀತರಾಗಿರಬಹುದು ಅಥವಾ ಬಾಳಿಗಾರ್ ಅಂಥವರು ಒಬ್ಬರು ಯಾರಾದರೂ ಬಂದಿರಬಹುದು ಆದರೆ, ಇವತ್ತಿನ ವಾಸ್ತವ ಪ್ರಸಂಗದಲ್ಲಿ ನಿಮ್ಮನ್ನು ನಾವು Speaker ಸ್ಥಾನದಲ್ಲಿ ಕೂರಿಸಿ ಮುಂದೆ ಚುನಾವಣೆಯಲ್ಲಿ ಪ್ರತಿಯೊಬ್ಬರೂ ನಿಮ್ಮ ವಿರುದ್ಧವಾಗಿ ಸ್ಪರ್ಧಿಸುವಂಥ ರೀತಿ ಮಾಡಿ, ಅದರ ಜೊತೆಗೆ ಬಹುಮತದ ಕಾರಣಕ್ಕಾಗಿ ಯಾವ ಪಕ್ಷದ ಮೂಲಕ ತಾವು ಆಯ್ಕೆಯಾಗಿರುತ್ತೀರಿ, ಆ ಪಕ್ಷದವರು ticket ಕೊಡುತ್ತಾರೋ, ಕೊಡುವುದಿಲ್ಲವೋ ಇಂಥ ಎಲ್ಲ ಆತಂಕಗಳು ಇದ್ದಾಗ, ಬಹಳ ಮಟ್ಟಿಗೆ, ಅಂದರೆ ಎಲ್ಲೋ ಒಬ್ಬ ದೊಡ್ಡ ವ್ಯಕ್ತಿ ಈ ತರಹದ ತತ್ವಗಳನ್ನು, ಆದರ್ಶಗಳನ್ನು ಎತ್ತಿಹಿಡಿಯಬಹುದು ಆದರೆ, ನಾವೆಲ್ಲರೂ ಕೂಡ ಮಾನವರೇ ಆಗಿರುವುದರಿಂದ, ಸಹಜ ದೌರ್ಬಲ್ಯಗಳಿಗೆ ಒಳಗಾಗುತ್ತೇವೆ ಇದು ವಸ್ತು ಸ್ಥಿತಿ ಆವತ್ತಿನ ಕಾಲಕ್ಕೆ ಚುನಾವಣೆಗಳು ಸಕಾಲದಲ್ಲಿ ನಡೆಯಲಿಲ್ಲ, ಅಂದರೆ 14 ತಿಂಗಳ ಕಾಲ ಶ್ರೀ ಡೇವಿಡ್ ಸಿಮೆಯಾನ್‌ರವರ ಕಾಲದಲ್ಲಿ ಆಯಿತು, 13 ತಿಂಗಳ ಕಾಲ ಮಾನ್ಯ ಸುದರ್ಶನ್‌ರವರ ಕಾಲದಲ್ಲಿ ಆಯಿತು ಸುಮಾರು 6–8 ತಿಂಗಳುಗಳ ಕಾಲ ಮಾನ್ಯ ಬಿ ಆರ್ ಪಾಟೀಲರ ಕಾಲದಲ್ಲಿ ಆಯಿತು ದಿವಂಗತ ಕಲ್ಮಣ್‌ರವರ ಕಾಲದಲ್ಲಿ ಸುಮಾರು 6 ತಿಂಗಳ ಕಾಲ ಆಯಿತು

ಏಕೆಂದರೆ, ನಿಮಗೆ ಅಲ್ಲಿ ಅನುಕೂಲಗಳು ಆಗಲಿಲ್ಲ ಮಾನ್ಯ ಡಿ ಕೆ ಶಿವಕುಮಾರ್‌ರವರು ಇಲ್ಲಿಯೇ ಇದ್ದರು ಅವರಿಗೆ ಹೆಚ್ಚು ಗೊತ್ತಾಗುತ್ತಿತ್ತು ಎಂದು ಅಂದುಕೊಂಡಿದ್ದೇನೆ ಮತ್ತು ತಾವೆಲ್ಲ ಹಿರಿಯರಿದ್ದೀರಿ, ತಮಗೆಲ್ಲ ಗೊತ್ತಿರಬಹುದು ಒಂದೊಂದು ಸಲ ಬಹುಮತವಿದ್ದಾಗಲೂ ಕೂಡ, majority ಇದ್ದಂಥ ಸಂದರ್ಭದಲ್ಲಿಯೂ ಕೂಡ ಯಾರೋ ಒಬ್ಬರನ್ನು Chairman ರಾಗಿ ಮಾಡಬೇಕೆನ್ನುವ ಕಾರಣಕ್ಕಾಗಿಯೇ ಆವತ್ತು majority ಇದ್ದಾಗಲೂ ಕೂಡ ಸಭಾಪತಿ ಚುನಾವಣೆ ಆಗಲಿಲ್ಲ ಮುಂದೆ ಆ ಚುನಾವಣೆಯಲ್ಲಿ ಅವರು ಸೋತರು ಆದ್ದರಿಂದ ಅವರು ಅಧಿಕಾರಕ್ಕೆ ಬರಲಿಲ್ಲ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಈ ಮಾತನ್ನು ನಾವೇ ಹೇಳಿದ್ದೇವೆ ಮಾನ್ಯ ಬಿ ಆರ್ ಪಾಟೀಲರನ್ನು ಏಕೆ ಇಟ್ಟಿದ್ದೆವು? ನೀವು, ನಾವು ಸೇರಿ ಬಿ ಜೆ ಪಿ ಯವರು ಆಗಬಾರದೆನ್ನುವ ದೃಷ್ಟಿಯಿಂದ ನಮಗೆ Majority ಇರಲಿಲ್ಲವೇ? Majority ಇತ್ತು ಮಾನ್ಯ ಸುದರ್ಶನ್‌ರವರು ಇದ್ದಾಗಲೂ majority ಇತ್ತು ಆದರೆ, ಈಗ ನಿಮಗೆ majority ಇದೆಯೇ? ಬಹುಮತ ಇದೆಯೇ? ಇದ್ದರೆ ನೀವು ಮಾಡಿ ಬಹುಮತ ಇದ್ದು ಹೀಗೆ ಮಾಡಿದ್ದರೆ ಅದು ಬೇರೆ ಮಾತು ನಿಮಗೆ ಅನಾನುಕೂಲವಾಗುತ್ತದೆಂದು ತಿಳಿದುಕೊಂಡು ನೀವು ಮಾಡುತ್ತಿದ್ದೀರಲ್ಲಾ, ಇದು ಸರಿ ಇಲ್ಲ ನಗೆಪಾಟಲೇನೆಂದರೆ, ನಿಮಗೆ majority ಇಲ್ಲದೆಯೇ majority ಇದ್ದಂಥ 40 ಜನರನ್ನು ಹೊರಗೆ ಹಾಕಿರುವಂಥದ್ದು

ಶ್ರೀ ಎಂ ಪಿ ಪ್ರಕಾಶ್ ಚುನಾವಣೆ ಆಗದಿರತಕ್ಕಂಥದ್ದು ತಪ್ಪು ಎನ್ನುವುದರ ಬಗ್ಗೆ ನಾನು ಹೇಳುತ್ತೇನೆ ಅದರ ಬಗ್ಗೆ ಬಹಳ ಸ್ಪಷ್ಟವಾದ ನಮ್ಮ ನಿಲುವು ಇದೆ ನಾವು ಮಾಡಬೇಕಾದ ಕರ್ತವ್ಯದಲ್ಲಿ ತಪ್ಪುತ್ತಿದ್ದೇವೆ ಆದರೆ, ಅದನ್ನು ನಾವು ಸರಿಪಡಿಸಬೇಕಲ್ಲವೇ? ಆ ಕಾಲದಲ್ಲಿ ನಮ್ಮ ಪಕ್ಷದ ನಿಲುವಿನ ಪ್ರಕಾರವಾಗಿಯೂ ಕೂಡ ನಾವು, ಭಾರತೀಯ ಜನತಾ ಪಕ್ಷದವರು ಸ್ವಲ್ಪ ಹೆಚ್ಚು ಕಡಿಮೆ ಹೆಸರು ಹೇಳದಿದ್ದರೂ ಕೂಡ ಇವತ್ತಿನ ಸಭಾನಾಯಕರ ಹೆಸರೇ ಆವತ್ತು ಸೂಚಿಸಲ್ಪಟ್ಟಿತ್ತು ವಿಧಾನಪರಿಷತ್ತಿನ ಸಭಾ ನಾಯಕರ ಹೆಸರನ್ನೇ ಸೂಚಿಸಲ್ಪಟ್ಟಿತ್ತು ಆಗ ನಾವೆಲ್ಲ ಕಲೆತು ಮಾತನಾಡಿ, ಈಗ ನಿಮ್ಮ ಜೊತೆಗೇ ಇದ್ದಾರೆ ಮಾನ್ಯ ಸಿದ್ದರಾಮಯ್ಯನವರು, ನಾವೆಲ್ಲ ಕಲೆತು ಅದಕ್ಕೆ ಬೆಂಬಲ ಕೊಡಬಾರದೆನ್ನುವ ಕಾರಣಕ್ಕಾಗಿಯೇ ಆ ರೀತಿ ಮಾಡಿದ್ದು ನಿಜ ಅದು

majority ಅಲ್ಲ ಆದರೆ, ನಿಮ್ಮಲ್ಲಿ ಒಳಮರ್ಮ ಏನಿತ್ತು? ಚುನಾವಣೆ ಮಾಡಿ ಯಾರೋ ಒಬ್ಬರನ್ನು ಸಭಾಪತಿಗಳನ್ನಾಗಿ ಮಾಡಬೇಕಾಗಿತ್ತು ಮಾನ್ಯ ಸುದರ್ಶನ್‌ರವರನ್ನು ಮಾಡಲಿಕ್ಕೆ ಇಷ್ಟವಿರಲಿಲ್ಲ ಆ ಕಾರಣಕ್ಕಾಗಿಯೇ ಆ ಚುನಾವಣೆಗಾಗಿ ಕಾದಿರಿ ಚುನಾವಣೆಯಲ್ಲಿ ಅವರು ಗೆದ್ದು ಬರಲಿಲ್ಲ

ಶ್ರೀ ಎನ್ ಧರ್ಮಸಿಂಗ್ ಕೊನೆಗೆ ಯಾರನ್ನು ಮಾಡಿದರೆಂದು ನಿಮಗೆ ಚೆನ್ನಾಗಿ ಗೊತ್ತು

ಶ್ರೀ ಎಂ ಪಿ ಪ್ರಕಾಶ್ ಮಾಡಿದ್ದೀರಿ ಇಲ್ಲವೆಂದಲ್ಲ 13 ತಿಂಗಳು ಆದಮೇಲೆ ಅವರನ್ನು ಮಾಡಿದಿರಿ ಅಂದರೆ, ಅದರ ನಡುವೆ 4 ಅಧಿವೇಶನಗಳು ನಡೆದವು ಅಂದರೆ, ನಾನು ಹೇಳಿದ್ದು, ನೀವು ಮಾಡಿದ್ದು ತಪ್ಪಾಗಿದೆ ಆ ಕಾರಣಕ್ಕಾಗಿ ನಾವೂ ತಪ್ಪು ಮಾಡಬೇಕೆನ್ನುವುದನ್ನು ನಾವು ಒಪ್ಪುವುದಿಲ್ಲ

(ಗೊಂದಲ)

ಶ್ರೀ ಕೆ ಆರ್ ರಮೇಶ್‌ಕುಮಾರ್ ತಾವು yield ಆಗುವುದಾದರೆ, ನಾನು ಏನು ಹೇಳುತ್ತಿದ್ದೆ ಎಂದರೆ, ನಾನು ಮಾತನಾಡುವಾಗ ತಮ್ಮಲ್ಲಿ ಅದನ್ನೇ represent ಮಾಡಿಕೊಂಡೆ We are not talking about the individuals ಎರಡೂ ಸ್ಥಾನ ಖಾಲಿ ಇದ್ದಾಗ Chairman ರವರ post vacant ಇದೆ, Deputy Chairman ರವರು incapacitate ಆಗಿದ್ದಾರೆ House function ಮಾಡಬೇಕು Governor's Address ಆಗಿದೆ ಎರಡೂ ಸದನ ಕುಳಿತು ಕೆಲಸ ಮಾಡಬೇಕು That is all the issue ಹಿಂದೆ ಎಲ್ಲಾ ಸಂದರ್ಭಗಳಲ್ಲೂ ಕೂಡ they might have delayed holding election to the office of the Chairman At least Deputy Chairman was there House was not remaining in this state

ಶ್ರೀ ಡಿ ಆರ್ ಪಾಟೀಲ್ ಒಂದ್ನಿಮಿಷ ಸರ್, ಈಗ ಅಲ್ಲಿ Chairman ರವರಿಲ್ಲ ಮತ್ತು Deputy Chairman ರವರು attend ಆಗುತ್ತಿಲ್ಲ ಮಾನ್ಯ ತಿಪ್ಪಣ್ಣವರು ಆ ಕುರ್ಚಿ ಮೇಲೆ ಕುಳಿತುಕೊಳ್ಳಲಿಕ್ಕೆ ಕಾನೂನಿನಲ್ಲಿ ಅರ್ಹತೆಯೇ ಇಲ್ಲ ಅದು ತಪ್ಪು ಎಂದು ನಾವು ಹೇಳುತ್ತಿದ್ದೇವೆ ಅದು ತಪ್ಪು ಎನ್ನುವುದು ಹೌದೋ ಅಥವಾ ಅಲ್ಲವೋ? ಅದರ ಮೇಲೆ ಸರಿಯಾಗಿ ನೀವು ಬೆಳಕು ಚೆಲ್ಲಬೇಕು

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೆ, ಆ ವಿಷಯಕ್ಕೆ ನಾನು ಈಗ ಬರುತ್ತೇನೆ ಅದರಲ್ಲಿ ಯಾವುದು, ನಿಯಮಾವಳಿಗಳು ಹೇಗಿವೆ, ಮತ್ತೆ ಮಾಡಿರತಕ್ಕಂಥದ್ದು ಏನೇನು ಎಂಬುದರ ಬಗ್ಗೆ ಆಧಾರಪೂರ್ಣಕವಾಗಿ ನಾವು ಪ್ರಸ್ತಾಪ ಮಾಡುತ್ತೇವೆ ಆದರೆ, ನಾನು ಮಾನ್ಯ ರಮೇಶ್ ಕುಮಾರ್‌ರವರಲ್ಲಿ ವಿನಂತಿ ಮಾಡುವುದೇನೆಂದರೆ, substantial issue is with regard to the election of the Chairman Other things are incidental

ಶ್ರೀ ಸಿದ್ದರಾಮಯ್ಯ ಈ ಪ್ರಶ್ನೆ ಉದ್ಭವವಾಗುತ್ತಲೇ ಇರಲಿಲ್ಲ ಈಗ ಉದ್ಭವ ಏಕೆ ಆಗಿದೆಯೆಂದರೆ, Deputy Chairman ಅಲ್ಲಿದ್ದು ಸಭೆ ನಡೆಸುತ್ತಿದ್ದರೆ ಈ ಪ್ರಶ್ನೆಯೇ ಬರುತ್ತಿರಲಿಲ್ಲ ಈ ಪ್ರಶ್ನೆ ಉದ್ಭವವಾಗಿದ್ದೇಕೆಂದರೆ, Deputy Chairman ರವರು ಅನಾರೋಗ್ಯದಿಂದ ಸದನಕ್ಕೆ ಬರಲಾಗುತ್ತಿಲ್ಲ ಮಾನ್ಯ ತಿಪ್ಪಣ್ಣರವರನ್ನು ಯಾವ provision ಕೆಳಗಡೆ nominate ಮಾಡಿದ್ದಾರೆ? ಕಾನೂನು ಪ್ರಕಾರವಾಗಿ ಅವರನ್ನು ಸಭಾಪತಿಯನ್ನಾಗಿ ಮಾಡುವುದಕ್ಕೆ ಬರುವುದೇ ಇಲ್ಲ ಕಾನೂನು ಪ್ರಕಾರವಾಗಿ ಯಾರನ್ನು ಮಾಡುವುದಕ್ಕಾಗುವುದಿಲ್ಲವೋ, ಅವರನ್ನು unconstitutional ಆಗಿ ಕೂರಿಸಿ, ನಿಯಮಾವಳಿಗಳ ವಿರುದ್ಧವಾಗಿ ಕೂರಿಸಿ, ಅವರ ಕೈಯಲ್ಲಿ majority ಇದ್ದವರನ್ನು expel ಮಾಡಿಸುವುದೆಂದರೆ ಇದು ಪ್ರಜಾಪ್ರಭುತ್ವಕ್ಕೆ ಮಾಡತಕ್ಕಂಥ ಅಪಚಾರ ಅಲ್ಲವೇ? Parliamentary Democracy ಗೆ ಮಾಡತಕ್ಕಂಥ ಅಪಚಾರವಲ್ಲವೇ?

ಶ್ರೀ ಎಂ ಪಿ ಪ್ರಕಾಶ್ I will come back to you Sir

ಶ್ರೀ ಸಿದ್ದರಾಮಯ್ಯ ಒಂದ್ನಿಮಿಷ ಕುಳಿತುಕೊಳ್ಳಿ ನೀವು ಉತ್ತರ ಕೊಡುತ್ತೀರೆನ್ನುವುದು ಗೊತ್ತು ಬಹಳಷ್ಟು ಪುಸ್ತಕಗಳನ್ನು ಹೊತ್ತುಕೊಂಡು ಬಂದಿದ್ದು ಏನೇನೋ ಈಗ ಹೇಳುತ್ತೀರಿ ಗೊತ್ತಿದೆ ಶ್ರೀ ಡಿ ಹೆಚ್ ಶಂಕರಮೂರ್ತಿಯವರು ಬಂದು ಒಂದು ಕಡೆ instructions ಕೊಡುತ್ತಿದ್ದಾರೆ ನೀವು ಏನು ಹೇಳುತ್ತೀರೆನ್ನುವುದು ನಮಗೆ ಗೊತ್ತಿದೆ ಇದು Parliamentary Democracy ಯಲ್ಲಿ ನಡೆಯತಕ್ಕಂಥ ವಿಧಿವಿಧಾನಗಳೇ? ಇದನ್ನು ಯಾರಾದರೂ ಒಪ್ಪಿಕೊಳ್ಳುವುದಕ್ಕಾಗುತ್ತದೆಯೇ? Majority ಇದ್ದೂ ಕೂಡ ಇವರನ್ನು ತೆಗೆದು ಆಚೆಗೆ ಹಾಕಿ ನಾವು House ನಡೆಸುತ್ತೇವೆಂದು ಹೇಳುವುದಾದರೆ, ಯಾವ ನಿಯಮದಲ್ಲಿದೆ ಹೇಳಿ, ನೋಡೋಣ ಇದನ್ನು

ಒಪ್ಪಿಕೊಳ್ಳುವುದಕ್ಕಾಗುತ್ತದೆಯೇ? ಏನಾಗಿದೆ ಎಂದರೆ, ಏನು ಕಾಂಗ್ರೆಸ್‌ನವರು ವಿರೋಧ ಪಕ್ಷದವರಾಗಿ ಅಲ್ಲಿ ಕುಳಿತುಕೊಂಡು ಏನೋ ತಪ್ಪು ಮಾಡುತ್ತಿದ್ದಾರೆ, ಇವರೇನೋ ಅಲ್ಲಿ ಮಾಡುತ್ತಿದ್ದಾರೆ, ಸರ್ಕಾರದಲ್ಲಿ ಅಷ್ಟು ಖರ್ಚಾಗುವುದಕ್ಕೆ ಕಾಂಗ್ರೆಸ್‌ನವರೇ ಜವಾಬ್ದಾರರು, ಹೊಣೆಗಾರರು ಎಂದು ದೊಡ್ಡ ಪ್ರಚಾರವಾಗುವುದಕ್ಕೆ ಪ್ರಾರಂಭವಾಗಿದೆ ಇದು ಸರ್ಕಾರ ಮಾಡಿರುವ ತಪ್ಪಾಗಿರುತ್ತದೆ ಯಾವಾಗ Deputy Chairman ರವರು ಯಾವಾಗ ಅನಾರೋಗ್ಯದಿಂದ ಕೆಲಸ ಮಾಡಲಿಕ್ಕಾಗಲಿಲ್ಲ ಕೂಡಲೆ ಸರ್ಕಾರ election ಮಾಡಬೇಕಾಗಿತ್ತು ಆ election ಮಾಡದೆಯೇ ನಮ್ಮ ಮೇಲೆ ಗೂಬೆ ಕೂರಿಸುವ ಕೆಲಸ ನಡೆಯುತ್ತಿದೆ This is very bad This is unconstitutional

ಶ್ರೀ ಕೆ ಎಸ್ ಈಶ್ವರಪ್ಪ(ಜಲ ಸಂಪನ್ಮೂಲ ಸಚಿವರು) ಇಷ್ಟೆಲ್ಲಾ ಹೇಳುತ್ತಿದ್ದಾರೆ ತುಂಬಾ ಸಂತೋಷ ಈಗ ನಮಗೆ ಇಲ್ಲಿ ಬಹುಮತ ಇದೆ ಉಪಾಧ್ಯಕ್ಷ ಸ್ಥಾನಕ್ಕಾದರೂ ನೀವು ರಾಜೀನಾಮೆ ಕೊಡಿಸಿದ್ದರೆ ತುಂಬಾ ಚೆನ್ನಾಗಿತ್ತು ಅದು ಬಿಟ್ಟು, ಕೇವಲ ಅದರ ಬಗ್ಗೆಯೇ ಮಾತನಾಡುತ್ತಾ ಕುಳಿತುಕೊಂಡರೆ ಹೇಗೆ?

ಶ್ರೀ ಸಿದ್ದರಾಮಯ್ಯ Elect ಆಗಿರುವವರು ಹೇಗೆ ರಾಜೀನಾಮೆ ಕೊಡುವುದಕ್ಕಾಗುತ್ತದೆ? He was elected How can he resign?

ಶ್ರೀ ಕೆ ಎಸ್ ಈಶ್ವರಪ್ಪ ಇವರೂ ಅಲ್ಲಿ ರಾಜಕಾರಣ ಮಾಡಬಹುದು ಇವರು ಇಲ್ಲಿಯೂ ರಾಜಕಾರಣ ಮಾಡಬಹುದು ನಾವು ರಾಜಕಾರಣ ಮಾಡುವ ಹಾಗಿಲ್ಲ

ಶ್ರೀ ಸಿದ್ದರಾಮಯ್ಯ We are not playing politics

ಶ್ರೀ ಆರ್ ವಿ ದೇಶಪಾಂಡೆ He is elected Sir ಅವರು ಚುನಾಯಿತ ಉಪಾಧ್ಯಕ್ಷರಾಗಿದ್ದಾರೆ

ಅಧ್ಯಕ್ಷರು ಆಯಿತು ಈಗ ಅವರು ಉತ್ತರ ಕೊಡುತ್ತಾರೆ

ಶ್ರೀ ಕೆ ಶ್ರೀನಿವಾಸಗೌಡ ಈಶ್ವರಪ್ಪನವರು ಹೇಳುವುದು ಹೇಗಿದೆ ಎಂದರೆ, ನುಬಾನ್ ನಾಬಿಗೂ, ಗೋಕುಲಾಷ್ಟಮಿಗೂ ಏನು ಸಂಬಂಧವಿದೆ ಎನ್ನುವ ಹಾಗೆ ಕಾಣುತ್ತದೆ

ಅಧ್ಯಕ್ಷರು ಆಯಿತು ಬಹಳ ಹೊತ್ತಾಯಿತು

ಶ್ರೀ ಎಂ ಪಿ ಪ್ರಕಾಶ್ ಸುಮ್ಮನೆ ಲಘುವಾಗಿ ಕೆಲವು ವಿಷಯಗಳನ್ನು ಹೇಳಿದರೇ ವಿನಃ ಆ ಉದ್ದೇಶದಿಂದ ಅಲ್ಲ ತಾವು ಮುಖ್ಯವಾಗಿರುವಂಥದ್ದನ್ನು ಪ್ರಸ್ತಾಪ ಮಾಡಿದ್ದೀರಿ ಚುನಾವಣೆಗಳನ್ನು ಕಾಲಕಾಲಕ್ಕೆ ನಿಯಮಿತವಾಗಿ ನಮಗೆ ಅನುಕೂಲವಿಲ್ಲದಿದ್ದರೂ ಕೂಡ ನಾವು ಮಾಡಿದ್ದರೆ, ನಾವು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡತಕ್ಕಂಥ ಎಲ್ಲ ಅರ್ಹತೆಯನ್ನು ಪಡೆಯುತ್ತಿದ್ದೆವು ಅದು ಯಾವ್ಯಾವುದೋ ಕಾರಣಕ್ಕಾಗಿ, ಒಂದು ತಪ್ಪಿನಿಂದ ಎಷ್ಟು ತಪ್ಪುಗಳಾಗುತ್ತವೆ ಎನ್ನುವುದಕ್ಕೆ ಇದೊಂದು ಉದಾಹರಣೆಯನ್ನು ನಾನು ಹೇಳಿದೆ ಆ ಕಾಲದಲ್ಲಿಯೂ ಕೂಡ ಈ ತರಹದ ತಪ್ಪುಗಳನ್ನು ನಾವು ಮಾಡಿದ್ದೇವೆ ಅದೇನಾದರೂ ಇರಲಿ ಅದಾಗಿದೆ ಎನ್ನುವುದಿದೆ ಈಗೇನು ~ ತಾವು ಹೇಳುತ್ತಿದ್ದೀರಿ, ತಿಪ್ಪಣ್ಣನವರ ಆಯ್ಕೆ

ಶ್ರೀ ಪಿ ಜಿ ಆರ್ ಸಿಂಧ್ಯ ದಯವಿಟ್ಟು, ಮಾನ್ಯ ಗೃಹ ಸಚಿವರು yield ಆಗುವುದಾದರೆ ಒಂದು ಮಾತು ಹೇಳುತ್ತೇನೆ ನೀವು ಮಾತನಾಡುತ್ತಾ ಇರತಕ್ಕಂಥದ್ದು ಹೇಗಿದೆ ಎಂದರೆ, Is this House or the system property of any two political parties? Are we discussing only on the basis of that? If that is so, if you want to respect the system, then you do the elections immediately

ಶ್ರೀ ಎಂ ಪಿ ಪ್ರಕಾಶ್ That is what I am telling ತಾವು ಆಗಲೇ ಪ್ರಾರಂಭ ಮಾಡಿದಂಥ ಸಂದರ್ಭದಲ್ಲಿ ಬಂದಿದ್ದಿರಿ ಎಂಬುದು ನನಗೆ ಗೊತ್ತಿಲ್ಲ ತಾವು ಇದ್ದಿರಿ ಅಲ್ಲವೇ? ನಮ್ಮ ಕೆಲವು ಈ ನಿಯಮಾವಳಿಗಳನ್ನು ಕಾಲ ಕಾಲಕ್ಕೆ ನಮಗೆ ಅನುಕೂಲವಾಗುವಂಥ ರೀತಿಯಲ್ಲಿ ತಿದ್ದುವಡಿ ಮಾಡತಕ್ಕಂದ, ವಿಕೃತಗೊಳಿಸುವಂಥ, ನಿರ್ಣಯ ತೆಗೆದುಕೊಳ್ಳಬೇಕಾದಂಥ ಸಂದರ್ಬದಲ್ಲಿ ನಿರ್ಣಯವನ್ನೇ ತೆಗೆದುಕೊಳ್ಳದಿರತಕ್ಕಂಥದ್ದು ಇಂಥ ಅಪಾಯಕಾರಿಯಾದಂಥ ವ್ಯವಸ್ಥೆಗೆ ಕಾರಣವಾಗುತ್ತದೆನ್ನತಕ್ಕಂದ ಮಾತನ್ನು ಹೇಳಿದೆ This House should also be dispassionate to act ಆದರೆ, ಅದನ್ನು ನಾವು ಮಾಡಿಲ್ಲ ರಾಜಕಾರಣ ಮಾಡಿದ್ದೇವೆ ಇವತ್ತು ನಾವು ರಾಜಕಾರಣದ ವಿಷಯ ಹೇಳದೇ ಇರಬಹುದು ಆದರೆ, ರಾಜಕಾರಣ ಮಾಡಿರತಕ್ಕಂದದ್ದು ಕೂಡ ನತ್ಯ ಸಂಗತಿಯೇ ಅವತ್ತು ನಾವು ಮಾಡಬೇಕಾದಂಥ ಸಮಯದಲ್ಲಿ ಮಾಡಿಲ್ಲ ಅದು ಬಿಡಿ ಇವತ್ತು

ತಿಪ್ಪಣ್ಣನವರನ್ನು ನೇಮಕ ಮಾಡಕತಕ್ಕಂಧದ್ದು ಹೇಗಿತ್ತು ಎಂದು ತಾವು ಮೂಲಭೂತವಾದ ಪ್ರಶ್ನೆ ಎತ್ತಿದ್ದೀರಿ ತಮಗೂ ಕೂಡ ಗೊತ್ತಿದೆ Pro tem Chairman ಮಾಡಬೇಕಾಗಿದ್ದರೆ, ಎರಡೂ ಸ್ಥಾನಗಳು ಖಾಲಿ ಯಾಗಿರಬೇಕು ಅಲ್ಲಿ ಸಭಾಪತಿಯವರ ಸ್ಥಾನ ಖಾಲಿ ಇದೆ ಆದರೆ, ಉಪ ಸಭಾಪತಿಯವರ ಸ್ಥಾನ ಖಾಲಿ ಇಲ್ಲ ಆದ್ದರಿಂದ, ರಾಜ್ಯಪಾಲರು ನೇಮಕಾತಿ ಮಾಡಿ ಅಧವಾ ಇಂಧವರನ್ನು ನಾನು pro tem Chairman ಮಾಡಿದ್ದೇನೆಂದು ಹೇಳಲಿಕ್ಕೆ ಬರುವುದಿಲ್ಲ ಏಕೆಂದರೆ, ಉಪಸಭಾಪತಿಯವರ ಸ್ಥಾನ ಖಾಲಿ ಇಲ್ಲ ಆ ಕಾರಣಕ್ಕಾಗಿಯೇ, ಎರಡನೆಯ ಪ್ರಶ್ನೆ ಏನು ಬರುತ್ತದೆ? ಅವರು ಇನ್ಯಾವುದೋ ಕಾರಣಕ್ಕಾಗಿಯೇ ಸದನಕ್ಕೆ ಬಂದು ಕಾರ್ಯ ಕಲಾಪಗಳನ್ನು ನಡೆಸಲಿಕ್ಕೆ ಸಾಧ್ಯವಾಗದೇ ಇದ್ದರೆ, ಅದಕ್ಕಾಗಿ ಒಂದು panel of the Chairman ಇರತಕ್ಕಂಧ ಪಟ್ಟಿ ಆ ಕೂಡಲೇ ಮುಗಿದು ಹೋಗುತ್ತದೆಂದು ತಾವು ಹೇಳಿದ್ದೀರಿ ಆದರೆ, ಅದಲ್ಲ ನಿಯಮಾವಳಿಗಳು ಬಹಳ ಸ್ಪಷ್ಟವಾಗಿರತಕ್ಕಂಧದ್ದಿವೆ ಪರಿಷತ್ತಿನ ನಿಯಮ 9ರ ಕೆಳಗೆ

<u>ಸಭಾಪತಿಯವರ ಪದಧಾರಣ ಮಾಡುವವರ ಹೆಸರುಗಳ ಪಟ್ಟಿ</u>

"ಸಭಾಪತಿಯವರು ಕಾಲ ಕಾಲಕ್ಕೆ ಪರಿಷತ್ತಿನ ಸದಸ್ಯರ ಪೈಕಿ 4 ಸದಸ್ಯರಿಗೆ ಮೀರದಂತೆ ಸಭಾಪತಿಗಳಾಗಿ ಕಾರ್ಯನಿರ್ವಹಿಸುವ ಸದಸ್ಯರ ನಾಮ ನಿರ್ದೇಶನ ಮಾಡತಕ್ಕದ್ದು ಸಭಾಪತಿಯವರು ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರಿಂದ ಪದಧಾರಣ ಮಾಡಲು ನಾಮ ನಿರ್ದೇಶನಗೊಂಡ ಸದಸ್ಯರ ಪೈಕಿ ಯಾರಾದರೊಬ್ಬರು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಪಟ್ಟಿಯಲ್ಲಿರುವ ನಾಮ ನಿರ್ದೇಶಿತ ಸದಸ್ಯರು ಮತ್ತೊಂದು ಹೊಸ ಪಟ್ಟಿಯನ್ನು ತಯಾರಿಸುವವರೆಗೆ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಪದಧಾರಣ ಮಾಡತಕ್ಕದ್ದು" ಎಂದಿದೆ

ಬೆಳಗಾವಿ ಅಧಿವೇಶನದಲ್ಲಿ ಮಾನ್ಯ ಉಪ ಸಭಾಪತಿಗಳು ಈ ಪಟ್ಟಿಯನ್ನು ತಯಾರು ಮಾಡಿದ್ದರು ಆ ಪಟ್ಟಿಯನ್ನು ಮತ್ತೆ supercede ಮಾಡಿ ಅಥವಾ ಪಟ್ಟಿಯನ್ನು ರದ್ದು ಮಾಡಿ

ಶ್ರೀ ಕೆ ಆರ್ ರಮೇಶ್‌ಕುಮಾರ್ ನೀವು ಏನು ಬೇಕಾದರೂ ಮಾಡಿಕೊಳ್ಳಿ My very honest feeling, is that you should not go on record in this House taking advantage of these things ಇದು ನಮ್ಮ Rules and Procedure

ಶ್ರೀ ಎಂ ಪಿ ಪ್ರಕಾಶ್ ಇದು ನಮ್ಮ ವಿಧಾನ ಪರಿಷತ್ತಿನ ನಿಯಮಾವಳಿ

ಶ್ರೀ ಕೆ ಆರ್ ರಮೇಶ್‌ಕುಮಾರ್ Exactly, ಅದನ್ನು ನಾನು ಹೇಳುವುದು ನಮ್ಮ House ನ ನಡವಳಿಕೆಗಳನ್ನು ನಾವು ಮಾಡಿಕೊಂಡಿದ್ದೇವೆ Kindly go back to the explanation either under Kaul and Shakdhar or May's Parliamentary Practice ನಾವು panel ಅನ್ನು Session ಅನ್ನು convene ಮಾಡಿದಮೇಲೆ during the course of the session, till the closure of that session

ಶ್ರೀ ಎಂ ಪಿ ಪ್ರಕಾಶ್ ಆ ತರಹ ಇಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ Please you kindly go to the definition ತಾವು Kaul and Shakdhar ಪುಸ್ತಕ ಓದಿ May's Parliamentary Practice ಆ ಸೀಮಿತ ಉದ್ದೇಶಕ್ಕೆ panel ಅನ್ನು constitute ಮಾಡಿರುತ್ತೇವೆ The House is adjourned *sine die*, automatically the panel lapses

ಶ್ರೀ ಎಂ ಪಿ ಪ್ರಕಾಶ್ I think Sir, if you show me any of the rulings which the Hon'ble Chairmen or other Speakers have given I will be very grateful to get myself apprised about it But, ನನಗೆ ಇಲ್ಲಿ ಗೊತ್ತಿರತಕ್ಕಂಥದ್ದು ಇದು ನಿಜವಾಗಿ

ಶ್ರೀ ಕೆ ಆರ್ ರಮೇಶ್‌ಕುಮಾರ್. ಪ್ರತಿ ಸಲ ನಾವು ವಿಧಾನ ಸಭೆಯ ಅಧಿವೇಶನವನ್ನು ಹೊಸದಾಗಿ ಕರೆದಾಗ ಅನಿರ್ದಿಷ್ಟ ಕಾಲದವರೆಗೆ ಸದನವನ್ನು ಮುಂದಕ್ಕೆ ಹಾಕಿರುತ್ತೇವೆ ಅದಾದಮೇಲೆ, ರಾಜ್ಯಪಾಲರ ಆದೇಶದ ಮೇರೆಗೆ

P2
19

ನಾವು ವಿಧಾನಸಭೆಯ ಅಧಿವೇಶನವನ್ನು ಪುನ ಕರೆಯುತ್ತೇವಲ್ಲ, ಆ ಅಧಿವೇಶನ ಪ್ರಾರಂಭವಾದ ದಿವಸ ಮತ್ತು ಮುಕ್ತಾಯವಾಗುವುದರ ಮಧ್ಯೆ ವೇಳೆಗೆ ಸಾಮಾನ್ಯವಾಗಿ ನಾವು panel ಅನ್ನು constitute ಮಾಡುತ್ತೇವೆ

ಶ್ರೀ ಎಂ ಪಿ ಪ್ರಕಾಶ್ ಸಾಮಾನ್ಯವಾಗಿರತಕ್ಕಂಥದ್ದು ಇರಬಹುದು ಆದರೆ,

ಶ್ರೀ ಕೆ ಆರ್ ರಮೇಶ್‌ಕುಮಾರ್ It is implied.

ಶ್ರೀ ಎಂ ಪಿ ಪ್ರಕಾಶ್ ಆಯಿತು ಈಗ ತಾವು, ಇನ್ನೊಂದು ಅಧಿವೇಶನ ಬಂದಾಗ ಹೊಸ ಪಟ್ಟಿ ಜಾರಿಗೆ ಬಂದು ಅಲ್ಲಿಗೆ ಹಳೆ ಪಟ್ಟಿಗೆ ಅದು ನಿಷ್ಕ್ರಿಯ ಆಗುತ್ತದೆಂದು ತಾವು ಹೇಳುತ್ತೀರಿ ಆದರೆ, ಇಲ್ಲಿರತಕ್ಕಂಥ plain reading of this particular rules ಹೊಸ ಪಟ್ಟಿ ತಯಾರಾಗುವವರೆಗೂ ಎಂಬುದಿದೆ ಇದರ ಬಗ್ಗೆ ಏನಾದರೂ ತೀರ್ಮಾನಗಳು ಇದ್ದರೆ,

ಶ್ರೀ ಕೆ ಆರ್ ರಮೇಶ್‌ಕುಮಾರ್ ಹಾಗಾದರೆ, ನಮ್ಮ House summon ಆಗಬೇಕಲ್ಲವೇ? ಬೆಳಗ್ಗೆ House commence ಆಗಬೇಕಾದರೆ ಏನು procedure ಇದೆ ಓದಿ ಅದರಲ್ಲೇ ಓದಿ Who has to convene the House?

ಶ್ರೀ ಎಂ ಪಿ ಪ್ರಕಾಶ್ ಈಗ ಅದರ ಜೊತೆಗೆ, ತಾವು ಮೂಲಭೂತವಾದ ಪ್ರಶ್ನೆಯನ್ನು ಎತ್ತಿರುವುದರಿಂದ ನಾನು ಹೇಳುತ್ತೇನೆ, Is it the parliamentary etiquette to discuss about the proceedings of the Upper House?

ಶ್ರೀ ಕೆ ಆರ್ ರಮೇಶ್‌ಕುಮಾರ್ We are not discussing proceedings

(ಗೊಂದಲ)

ಶ್ರೀ ಸಿದ್ದರಾಮಯ್ಯ ಆಗಿರುವುದರಿಂದ ಸರ್ಕಾರದ ಗಮನ ಸೆಳೆಯಬೇಕೆಲ್ಲವೇ? ಯಾರು ಮಾಡುವುದು? ಅವರು ಅಲ್ಲಿ ಇಲ್ಲ ನಾವು ಮಾಡಬೇಕಲ್ಲ?

ಶ್ರೀ ಎಂ ಪಿ ಪ್ರಕಾಶ್ Generally, Parliamentary etiquette ಏನು ಹೇಳುತ್ತದೆಂದರೆ, ಬೇರೆ Upper Houseನ ಯಾವುದೇ ನಡವಳಿಕೆಗಳನ್ನು ಇಲ್ಲಿ ಚರ್ಚೆ ಮಾಡಬಾರದು

ಶ್ರೀ ಕೆ ಆರ್ ರಮೇಶ್‌ಕುಮಾರ್ ಅವರು defunct ಆಗಿಬಿಟ್ಟಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ದಯಮಾಡಿ ಕೇಳಿ ನೀವು ಹೇಳಿದ್ದೀರಿ ನಾವು ಕೇಳುತ್ತೇವೆ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುವಾಗ Chairman ರಾಗಿರುವಂಥವರು 40 ಮಂದಿಯನ್ನು ಸದನದಿಂದ ಹೊರಗೆ ಹಾಕಿದ್ದಾರೆ ಎಂದು ಹೇಳಿದರು Is it not a proceeding? Why should we discuss about that particular proceeding? Whether you recognize him or not is a totally different thing But, the parliamentary etiquette

Sri M Mallikarjuna Kharge This is the deadlock created by the Constitution He cannot function

ಶ್ರೀ ಎಂ ಪಿ ಪ್ರಕಾಶ್ Kindly allow me Sir, I am not going to yield ತಾವು ಹೇಳಿದ್ದನ್ನೆಲ್ಲ ನಾವು ಕೇಳಿದ್ದೇವೆ Please kindly bear with me ಈಗ ತಾವು Shakdhar and Kaul

ಶ್ರೀ ಕೆ ಆರ್ ರಮೇಶ್‌ಕುಮಾರ್ Academic purpose ಗೆ ಈ ತರಹ outcome ಏನಾದರೂ ಇದ್ದರೆ it is good. ಸದನದಲ್ಲಿ ಈ ತರಹದ ಕೆಲವು ಚರ್ಚೆಗಳಾಗಬೇಕಾಗಿತ್ತು ತಾವು yield ಆದರೆ ನಾನು ತಮಗೆ ಒಂದೇ request ಮಾಡುವುದು, suspension of a member Suspension ಅನ್ನು ಹೇಗೆ ಮಾಡುತ್ತೇವೆ? ಯಾವುದೇ ಒಬ್ಬ ಸದಸ್ಯ ಸದನದ ಕಾರ್ಯಕಲಾವಗಳು ನಡೆಯುವಾಗ ಅಧ್ಯಕ್ಷರ ಎಲ್ಲಾ ಪ್ರಯತ್ನಕ್ಕೂ ಮೀರಿ ಹೋಗಿ ಸದನವನ್ನು ಸಕ್ರಮವಾದ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ತಡೆ ಉಂಟು ಮಾಡಿದಾಗ ಅವರ ಸಹನೆ ಮೀರಿದಾಗ ಅವರು ಯಾರ ಸಹಾಯ ಕೇಳುತ್ತಾರೆ? I want to send him out ದಯಮಾಡಿ Chief Whip ಯಾರಿರುತ್ತಾರೆ ಅವರಿಗೆ name ಮಾಡಿ ಎಂದು ಹೇಳುತ್ತಾರೆ Chief Whip ರವರು he has to name ಇಂಥವರನ್ನು ಸದನದಿಂದ ಹೊರಗೆ ಹಾಕಬೇಕೆಂದು ಹೇಳಿ ನಾನು urge ಮಾಡುತ್ತಿದ್ದೇನೆಂದು ಹೇಳಿ ತಮ್ಮ ಮೂಲಕ ಮನವಿಯನ್ನು ಸಲ್ಲಿಸಬೇಕು and if that is put into question, numerical strength ಮೇಲೆ

ಶ್ರೀ ಎಂ ಪಿ ಪ್ರಕಾಶ್ I understood your point Sir

ಶ್ರೀ ಕೆ ಆರ್ ರಮೇಶ್‌ಕುಮಾರ್ Usually, Government Chief Whip ಎಂದು ಯಾರಿಗೆ ಕರೆಯುತ್ತೇವೆ? ಯಾರಿಗೆ ಬಹುಮತವಿದೆ

ಶ್ರೀ ಎಂ ಪಿ ಪ್ರಕಾಶ್ That is under a totally different provision Sir

ಶ್ರೀ ಕೆ ಆರ್ ರಮೇಶ್‌ಕುಮಾರ್ ಇಲ್ಲಿ majority members ಅನ್ನು minorityಯಲ್ಲಿರುವವರು locus-standi ಇಲ್ಲದೇ suspend ಮಾಡಿಬಿಟ್ಟು

ಶ್ರೀ ಎಂ ಪಿ ಪ್ರಕಾಶ್. Whether Mr Thipanna has got locus-standi or not? ಅನ್ನತಕ್ಕಂಥದ್ದು ನೀವೇನು Shakdhar and Kaul ಮೇಲೆ ಅವಲಂಬಿತರಾಗಿದ್ದೀರಿ ಅದೇ Kaul and Shakdhar ಪುಸ್ತಕದ ಮೇಲೇ ನಾವು ಅವಲಂಬಿತರಾಗಿದ್ದೇವೆ ಇಲ್ಲಿ ಪ್ರಶ್ನೆ ಬರುತ್ತಿರುವುದೇನು? Any member of panel of Chairman when presiding over a sitting of a House has the same power as the Speaker when so presiding ಕೇಳಿ ಸಾರ್, ಓದುತ್ತೇನೆ Academic discussion ಆಗಬೇಕೆನ್ನುತ್ತೀರಿ ಉತ್ತರ ಬೇಕೆಂದು ಹೇಳುತ್ತೀರಿ At every time if you have a derisive laugh at these things then it means that you people have a feeling that your contention alone is correct and the other contention is bad ಎಂದು ಆಗುತ್ತದೆ

"Any member of the Panel of Chairmen when presiding over a sitting of the House has the same power as the Speaker When so presiding, the rulings of the Chairman are not subject to any criticism nor open to any debate or appeal In order that there is an authoritative ruling, a Chairman often reserves major issues of decision by the Speaker A reference to Chairman's conduct in the Chair amounts to contempt of the House, and therefore he is shown all respect as the Presiding Officer of the House" ಅದೇ ರೀತಿ, any member of the panel of chairman ಈಗ ಇವರು ಪ್ಯಾನಲ್‌ನಲ್ಲಿರತಕ್ಕಂಥ ಒಬ್ಬ ಚೇರಮನ್‌ರು ನೀವು ಏನು ಹೇಳುತ್ತೀರಿ, ಅದು ಅಧಿವೇಶನದಲ್ಲಿ ಆಗಿರತಕ್ಕಂಥದ್ದು ಮತ್ತೊಂದು ಅಧಿವೇಶನ ಕರೆದಾಗ ಆ ಪಟ್ಟಿ ತನ್ನ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತದೆ, ಅದರೆ ನನ್ನ ಪ್ರಕಾರವಾಗಿ ಅದು ಪ್ರಸ್ತುತವಾಗಿಯೇ ಇದೆ

ಮತ್ತೊಂದು ಹೊಸ ಪಟ್ಟಿ ತಯಾರಾಗುವವರೆಗೆ ಕೂಡ ಆ ಪ್ಯಾನಲ್ ಇದೆ ಆದರ ಪ್ರಕಾರ ಅವರು ನೇಮಕಾತಿಯನ್ನು ಮಾಡಿದ್ದಾರೆ ನೇಮಕಾತಿಯಾಗಿರತಕ್ಕಂಥ ಪ್ಯಾನಲ್‌ನ ಒಬ್ಬ ಚೇರಮನ್‌ರು, ಸಭಾಪತಿಯಾಗಿರತಕ್ಕಂಥವರು constitution ನ ಆರ್ಟಿಕಲ್ 184 (2)ರ ಕೆಳಗೆ ಎಲ್ಲಾ ಅಧಿಕಾರವನ್ನು ಚಲಾಯಿಸುವ ಹಕ್ಕು ಆತನಿಗಿದೆ ಒಮ್ಮೆ ನಾವು ಆ ಅಭಿಪ್ರಾಯಕ್ಕೆ ಬಂದಾಗ ಚಲಾಯಿಸುವ ಅಧಿಕಾರ ಆತನಿಗೆ ಇದ್ದಾಗ ಇಲ್ಲಿ ತೆಗೆದುಕೊಂಡಿರತಕ್ಕಂಥದ್ದು ತಾವೇನು ಪ್ರಸ್ತಾಪ ಮಾಡುತ್ತಿರಿ, ಚೀಫ್ ವಿಪ್ ಆಗಿರತಕ್ಕಂಥವರು ಕೊಡತಕ್ಕಂಥದ್ದು, ಅವರನ್ನು ಹೆಸರಿಸಬೇಕು ಎನ್ನುವಂಥದ್ದು ಅದು ಒಂದು ಕಲಂ ನಲ್ಲಿ ಇರತಕ್ಕಂಥದ್ದು ವಿಧಾನ ಪರಿಷತ್ತಿನ ನಿಯಾಮಾವಳಿ ನಡಾವಳಿ 327 ರ ಕೆಳಗೆ,

ಸದಸ್ಯರು ಕೆಲ ಕಾಲ ಸಭೆಗೆ ಬರದಂತೆ ತಡೆಹಿಡಿಯುವುದು

"ಸಭಾಪತಿಯವರು ತಾವು ಅವಶ್ಯಕವೆಂದು ಭಾವಿಸಿದ ಪಕ್ಷದಲ್ಲಿ ಯಾರೇ ಸದಸ್ಯರು ಸಭಾಪತಿಯವರ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೇ ತಿರಸ್ಕಾರ ಮಾಡುತ್ತಾರೋ ಅಥವಾ ಪರಿಷತ್ತಿನ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆಯನ್ನುಂಟು ಮಾಡುವುದರ ಮೂಲಕ ಪರಿಷತ್ತಿನ ನಿಯಮಗಳಿಗೆ ವಿರೋಧವಾಗಿ ವರ್ತಿಸಿತ್ತಾರೋ ಆ ಸದಸ್ಯರ ಹೆಸರನ್ನು ಪರಿಷತ್ತಿಗೆ ತಿಳಿಸಬಹುದು ಆ ರೀತಿ ಸಭಾಪತಿಯವರು ಒಬ್ಬ ಸದಸ್ಯರನ್ನು ತಿಳಿಸಿದ ಪಕ್ಷದಲ್ಲಿ ಆ ಕೂಡಲೇ ಆ ಸದಸ್ಯರು ಅಧಿವೇಶನದ ಉಳಿದ ಕಾಲದಲ್ಲಿ ಅಥವಾ ಸಭಾಪತಿಯವರು ನಿರ್ದಿಷ್ಟಪಡಿಸಬಹುದಾದಂಥ ಅಧಿವೇಶನದ ಒಂದು ಭಾಗದವರೆಗೆ ಪರಿಷತ್ತಿಗೆ ಬಾರದಂತೆ ಆಜ್ಞೆ ಮಾಡಬಹುದು ವರಂತು ಯಾವುದೇ ಸಮಯದಲ್ಲಿ ಸಭೆಗೆ ಬರದಂತೆ ತಡೆಹಿಡಿದ ಈ ಆಜ್ಞೆಯನ್ನು ತೆಗೆದು ಹಾಕಬೇಕೆಂಬ ಪ್ರಸ್ತಾವ ಬಂದರೆ ಪರಿಷತ್ತು ಆ ಆಜ್ಞೆಯನ್ನು ಹಿಂತೆಗೆದುಕೊಳ್ಳಬಹುದು "

ನೀವು ಹೇಳತಕ್ಕಂಥದ್ದು ನೇಮ್ ಮಾಡತಕ್ಕಂಥದ್ದಲ್ಲ ಸಭಾಕಲಾಪಗಳು ಮಾಡಿದಾಗ ಅವರಿಗೆ ನೀವು ಹೋಗಿ ಬಿಡಬೇಕು ಎಂದು ಹೇಳತಕ್ಕಂಥ ಅಧಿಕಾರ ವಿಧಾನ ಪರಿಷತ್ತಿನಲ್ಲಿ ನಿಯಾಮಾವಳಿಯ 327 ರ ಕೆಳಗೆ ಅವರಿಗೆ ಲಭ್ಯವಿರತಕ್ಕಂಥದ್ದು ಅದರೆ, ಆತ ಸಭಾಪತಿಯೇ ಅಲ್ಲ ಎನ್ನುವ

ಅಭಿಪ್ರಾಯದ ಮೂಲಕ ನೀವು ಮಾತನಾಡುವುದರಿಂದ ಸಭಾಪತಿ ಅಲ್ಲದವರು ಮಾಡುವ ಯಾವ ಆಜ್ಞೆಯು ಅಸಿಂಧು ಎನ್ನುತ್ತೀರಿ ಆದರೆ ತಾವು ದಯವಿಟ್ಟು ಗಮನಿಸಬೇಕಾಗಿರತಕ್ಕಂಥದ್ದು, ವಿಧಾನ ಪರಿಷತ್ತಿನಲ್ಲಿ ಇಲ್ಲಿ ಕೆಳಮನೆಯ ಸದಸ್ಯರಾಗಿರತಕ್ಕಂಥವರು ಗತಿಸಿದ ಸಂದರ್ಭದಲ್ಲಿ ಸಂತಾಪ ಸೂಚನೆಯನ್ನು ಮಾಡಿದಾಗ ಮೇಲ್ಮನೆಯಲ್ಲಿ ಸಂತಾಪ ಸೂಚನೆಯಲ್ಲಿ ಭಾಗವಹಿಸಿದರು ಅದರಲ್ಲಿ ಅರ್ಧಜನ ಭಾಗವಹಿಸಿದಂಥ ಸಂದರ್ಭದಲ್ಲಿ ಸಭಾಪತಿಯವರು ವಿಧಾನ ಸಭೆಯ ಒಬ್ಬ ಹಾಲಿ ಸದಸ್ಯರು ನಿಧನ ಹೊಂದಿದಂಥ ಸಂತಾಪದಲ್ಲಿ ಎರಡು ನಿಮಿಷ ಮೌನವಾಗಿ ಎದ್ದು ನಿಲ್ಲಬೇಕು ಎಂದು ಹೇಳಿದಾಗ, ಅಲ್ಲಿ ಬಹಳ ಪ್ರಮುಖವಾಗಿರತಕ್ಕಂಥ ಕೆಲವು ವಿರೋಧ ಪಕ್ಷದ ಸದಸ್ಯರುಗಳು, ಇಲ್ಲದ ಗಲಾಟೆಯನ್ನು ಎಬ್ಬಿಸಿ, ನೀವು ಹೇಳಿದ ಮಾತನ್ನು ನಾವು ಕೇಳಬೇಕಾಗಿಲ ಎಂದು ಅವರು ನಿಂತುಕೊಂಡು ಇದ್ದಾರೆ, ಸಂತಾಪ ಸೂಚನೆಯಲ್ಲಿ ಭಾಗವಹಿಸಿದ್ದಾರೆ, ಇದನ್ನು ನಾವು ಸರಿಯಾದಂಥ ನಡವಳಿಕೆ ಎಂದು ಪರಿಭಾವಿಸಬೇಕಾ? ಒಂದು ಸಂತಾಪ ಸೂಚನೆಯ ಸಭೆಯಲ್ಲಿಯೂ ಕೂಡ ಒಂದು ನಿಮಿಷ ನಿಂತುಕೊಳ್ಳುವುದಕ್ಕೆ ಸಾಧ್ಯವಾಗಲಾರದಂಥ ರೀತಿಯಲ್ಲಿ ಈ ರೀತಿಯಾದಂಥ ಗದ್ದಲವನ್ನು ಹಿರಿಯರ ಮನೆಯಲ್ಲಿ ಬಹಳ ಪ್ರಮುಖವಾಗಿರತಕ್ಕಂಥ, ಆ ಶಾಸಕಾಂಗ ಪಕ್ಷದಲ್ಲಿ ಮತ್ತು ಆ ಪಕ್ಷದಲ್ಲಿ ಗುರುತರವಾದಂಥ ಒಂದು ಸ್ಥಾನವನ್ನು ಪಡಿದಿರತಕ್ಕಂಥ ವ್ಯಕ್ತಿ ಗಲಾಟೆ ಮಾಡಿದರು ಇದು ಬಹಳ ದುರ್ದೈವದ ಸಂಗತಿ ಆ ಕಾರಣಕ್ಕಾಗಿ ನಾವು ಈ ವಿಚಾರದಲ್ಲಿ

ಶ್ರೀ ಕೆ ಆರ್ ರಮೇಶ್ ಕುಮಾರ್ We will leave it where it is We will adjourn for lunch We can reassemble ಏಕೆಂದರೆ, we have to contribute our views ಮತ್ತೆ ಲೇಟ್ ಆಗಿಬಿಡುತ್ತದೆ ಯಡಿಯೂರಪ್ಪನವರು is a diabetic patient ಅವರ ಆರೋಗ್ಯವನ್ನು ನಾವು ಕಾಪಾಡಿಕೊಳ್ಳಬೇಕು ಅವರು ಬಜಟ್ ಪ್ರೆಸೆಂಟ್ ಮಾಡಬೇಕು ಆದುದರಿಂದ ಅವರ ಹಿತದೃಷ್ಟಿಯಿಂದ ಈಗ ಸಭೆಯನ್ನು ಮುಂದಕ್ಕೆ ಹಾಕಿ, ಅವರ ಆರೋಗ್ಯ ಚೆನ್ನಾಗಿರುವಂತೆ ನೋಡಿಕೊಳ್ಳಿ

ಶ್ರೀ ಎಂ ಪಿ ಪ್ರಕಾಶ್ ಆಗಬಹುದು ಇದೇ ನೋಡಿ ಜಾಣರ ಕೆಲಸ ಹೇಗೆ ಇರುತ್ತದೆಂದರೆ, ಪಕ್ಕದಲ್ಲಿರುವವರಿಗೆ ತುಪ್ಪ ಹಾಕಿರಿ ಎಂದು ಹೇಳಿ ನಮಗೂ ಹಾಕುತ್ತಾರೆ ಎನ್ನುವ ಉದ್ದೇಶದಿಂದ ಹೇಳುತ್ತಾರೆ ಆಗಬಹುದು

ಶ್ರೀ ಕೆ ಆರ್ ರಮೇಶ್ ಕುಮಾರ್ I take it a s a compliment

ಅಧ್ಯಕ್ಷರು ಈಗೇನು adjourn ಮಾಡಬಹುದಾ?

ಶ್ರೀ ಎಂ ಪಿ ಪ್ರಕಾಶ್ ಮಾಡಿ ಸಾರ್ I leave it to you

ಅಧ್ಯಕ್ಷರು ತಾವೇನು ಮೂರ್ತಿ answer ಮಾಡುವುದಿಲ್ಲವೇ? ಇನ್ನೇನು ಐದು ನಿಮಿಷದಲ್ಲಿ ಅವರು ಉತ್ತರ ಮುಗಿಸಿಬಿಡುತ್ತಾರೆ ಮಧ್ಯಾಹ್ನ ಎಂದು ಹೇಳಿಕೊಂಡು ಹೋಗಿ ಮತ್ತೆ ಮತ್ತೆ ಅದನ್ನೇ ಎತ್ತಿ ಕೊಳ್ಳುವುದಕ್ಕಾಗುವುದಿಲ್ಲ ಅವರು ಉತ್ತರ ಕೊಟ್ಟುಬಿಡಲಿ ಇಲ್ಲದಿದ್ದರೆ ಏನಾಗುತ್ತದೆ ಇಡೀ ದಿವಸ ಹೀಗೆ ಆಗಿಬಿಡುತ್ತದೆ, ಬೇರೆ ಬೇರೆ ವಿಷಯಗಳನ್ನು ಎತ್ತಿಕೊಳ್ಳುವುದಕ್ಕಾಗುವುದಿಲ್ಲ ವಂದನಾ ನಿರ್ಣಯ ಎತ್ತಿಕೊಳ್ಳಬೇಕು

ಶ್ರೀ ಕೆ ಆರ್ ರಮೇಶ್ ಕುಮಾರ್ Abrupt ಆಗಿ ಬೇಡ We have to rely on the books ನಾವೆಲ್ಲ ಕೋಟ್ ಮಾಡಬೇಕಾಗುತ್ತದೆ

ಅಧ್ಯಕ್ಷರು ಒಪ್ಪಿದೆ ಸ್ವಾಮಿ, ಆದರೆ ಇಷ್ಟು ದಿವಸವಾದರೂ ವಂದನಾ ನಿರ್ಣಯ ಇನ್ನು ಎತ್ತಿಕೊಳ್ಳಲಿಲ್ಲ ಅದಕ್ಕೆ ಇದನ್ನು ಮುಗಿಸಿ ಬಿಟ್ಟರೆ ಮಧ್ಯಾಹ್ನ ಆ ವಿಷಯ ಎತ್ತಿಕೊಳ್ಳಬಹುದು

ಶ್ರೀ ಕೆ ಆರ್ ರಮೇಶ್ ಕುಮಾರ್ ಪ್ರಸ್ತಾಪ ಮಾಡಬೇಕೆನ್ನುವ ಚಪಲಕ್ಕೆ ಮಾಡಿಲ್ಲ ಅವರು ಹೇಳಿರತಕ್ಕಂಥದ್ದರಲ್ಲಿನ ಕೆಲವು ಲೋಪದೋಷಗಳನ್ನು ಪುನಃ ನಾವು ಹೇಳ ಬೇಕಾಗುತ್ತದೆ ಅದಕ್ಕೆ ಸಮಯ ಬೇಕಾಗುತ್ತದೆ Adjourn ಮಾಡಿ ಊಟ ಮಾಡಿಕೊಂಡು ಬಂದು ಬಿಡೋಣ ತಮಗೆ ಅನುಕೂಲವಾಗುತ್ತದೆ

ಅಧ್ಯಕ್ಷರು ಇದೇ ರೀತಿ ಈ ವಿಚಾರ ಇಡೀ ದಿನವಾದರೆ ಹೇಗೆ?

ಶ್ರೀ ಎನ್ ಧರ್ಮಸಿಂಗ್ ಪರಿಷತ್ತಿನಲ್ಲಿ ನಲವತ್ತು ಮಂದಿಗೆ ಸನ್‌ಪೆಂಡ್ ಮಾಡಿದ್ದಾರೆ ಮಾಡತಕ್ಕಂಥ ಅಧಿಕಾರವಿಲ್ಲ ಅದರ ಬಗ್ಗೆ ಚರ್ಚೆ ಆಗಬೇಕಾಗುತ್ತದೆ ಹೀಗೆ ಬಿಟ್ಟರೆ ಹೇಗೆ?

ಅಧ್ಯಕ್ಷರು ಚರ್ಚೆಯಾಗಬೇಕು ನರಿ ಸ್ವಾಮಿ, ಅವರು ಉತ್ತರ ಕೊಡುತ್ತಿದ್ದಾರೆ, ಅದು ಉತ್ತರ ಮುಗಿದು ಹೋದರೆ ಮುಗಿಯಿತು

ಶ್ರೀ ಎನ್ ಧರ್ಮಸಿಂಗ್ ಇಲ್ಲ ಇಲ್ಲ ನಾವು ಚರ್ಚೆಯಲ್ಲಿ ಭಾಗವಹಿಸಬೇಕು

ಅಧ್ಯಕ್ಷರು ಚರ್ಚೆ ಮಾಡುವುದಕ್ಕಾಗುವುದಿಲ್ಲ, ಇದು ಚರ್ಚೆಯ ವಿಷಯವಲ್ಲ - ಏಕೆಂದರೆ, ನೀವು ಎಲ್ಲಾ ನಿಮ್ಮ ಅಭಿಪ್ರಾಯಗಳನ್ನು ಹೇಳಿದಿರಿ, ನೀವು ಜಿರೋ ಅವರ್ ನಲ್ಲಿ ಪ್ರಸ್ತಾಪಿಸಿದ್ದೀರಿ ಅದಕ್ಕೆ ಅವರು ಉತ್ತರ ಹೇಳುತ್ತಿದ್ದಾರೆ ಅವರ ಉತ್ತರ ಮುಗಿದರೆ ಮತ್ತೆ ಚರ್ಚೆಗೆ ಅವಕಾಶ ಆಗುತ್ತೆ?

ಶ್ರೀ ಸಿದ್ದರಾಮಯ್ಯ ಚರ್ಚೆ ಮಾಡಬೇಕೆಂದು ಸರ್ಕಾರದ ಪರವಾಗಿ ಗೌರ್ನಮೆಂಟ್ ಒಪ್ಪಿಕೊಳ್ಳುತ್ತದೆ

ಅಧ್ಯಕ್ಷರು. no no ಏನು ಸ್ವಾಮಿ ಮತ್ತೆ ಚರ್ಚೆಯಾಗಬೇಕೆಂದು ತಾವು ಒಪ್ಪಿಕೊಳ್ಳುತ್ತೀರಾ?

ಶ್ರೀ ಎಂ ಪಿ ಪ್ರಕಾಶ್ ತಮ್ಮ ನಿರ್ದೇಶನದ ಮೇಲೆ ತೆಗೆದುಕೊಳ್ಳಬಹುದು

ಅಧ್ಯಕ್ಷರು ನೋಡಿ ಸಿದ್ದರಾಮಯ್ಯನವರೇ, ವಿರೋಧ ಪಕ್ಷದ ನಾಯಕರು ಜಿರೋ ಅವರ್ ನಲ್ಲಿ ಕಾವೇರಿ ವಿಷಯವಾದ' ಮೇಲೆ ಈ ವಿಷಯ ಪ್ರಸ್ತಾಪ ಮಾಡುತ್ತೇನೆಂದು ಎತ್ತಿದರು ಅವರು ಆಗಲೇ ಉತ್ತರ ಕೊಡಬೇಕಾಗಿತ್ತು, ಆನೇಕ ಜನ ಮಾತನಾಡಿದಿರಿ ಅವರು ಈಗ ಉತ್ತರ ಕೊಡುತ್ತಿದ್ದಾರೆ, ಈಗಾಗಲೇ ಅವರು ಉತ್ತರದ ಕೊನೆಯ ಹಂತದಲ್ಲಿದ್ದಾರೆ ಮತ್ತೆ ಇದರ ಬಗ್ಗೆ ಚರ್ಚೆಯಾಗಬೇಕೆಂದರೆ ಏನರ್ಥ?

ಶ್ರೀ ಸಿದ್ದರಾಮಯ್ಯ Constutitution dead-lock ಆಗಿ ಅಲ್ಲಿ ಮೇಲ್ಮನೆಯ ಸದಸ್ಯರನ್ನು ಸಸ್‌ಪೆಂಡ್ ಮಾಡಿದ್ದಾರೆ ಸ್ವಲ್ಪ ಅವರು ಬೆಳಕಲ್ಲಿ ಇರಬೇಕಾಗುತ್ತದೆ ಮೂಲಭೂತವಾಗಿ ಅವರಿಗೆ ಅಧಿಕಾರವೇ ಇಲ್ಲವೆಂದು ನಾವು ಪ್ರಶ್ನೆಯನ್ನು ಎತ್ತಿರಬೇಕಾದರೆ,

ಶ್ರೀ ಎಂ ಪಿ ಪ್ರಕಾಶ್ ಅಧಿಕಾರ ಇದೆ ಎನ್ನುವುದು ನಮ್ಮ ವಾದ

ಶ್ರೀ ಸಿದ್ದರಾಮಯ್ಯ ಅವರಿಗೆ locus standi ಇಲ್ಲ, ಅವರಿಗೆ ಅಧಿಕಾರನೇ ಇಲ್ಲ ನಾಮಿನೇಟ್ ಮಾಡುವುದಕ್ಕೆ ಬರುವುದೇ ಇಲ್ಲ, ಅವರಿಗೆ ಸಸ್‌ಪೆಂಡ್ ಮಾಡುವುದಕ್ಕೆ ಯಾವ ಅಧಿಕಾರವು ಇಲ್ಲವೆಂದು ಹೇಳಿರುವಾಗ, ಇದರ ಮೇಲೆ ಅವರು ಬೆಳಕು ಚೆಲ್ಲಬೇಕಲ್ಲವೆ?

ಶ್ರೀ ಎಂ ಪಿ ಪ್ರಕಾಶ್ ಸ್ಪೀಕರ್‌ರವರು ಏನು ಹೇಳುತ್ತಾರೆ ಅದರಂತೆ ಹೋಗೋಣ

ಅಧ್ಯಕ್ಷರು ನಾನು ಹೇಳುತ್ತಿರುವುದು ಏನೆಂದರೆ, ಉತ್ತರದ ಕೊನೆಯ ಹಂತದಲ್ಲಿ ಇದ್ದೀರಿ ಉತ್ತರದ ಕೊನೆಯ ಹಂತದಲ್ಲಿ ಇದ್ದುಬಿಟ್ಟು ಸುಮ್ಮಸುಮ್ಮನೆ ಕುಳಿತುಕೊಂಡು ಬಿಟ್ಟರೆ ಹೇಗೆ? ಮತ್ತೆ ಇಡೀ ದಿವಸ ಇದೇ ಚರ್ಚೆಯಾದರೆ ಹೇಗೆ? ಈಗ ವಂದನಾ ನಿರ್ಣಯ, ಇಷ್ಟು ದಿವಸವಾದರೂ ಇನ್ನೂ ಮೂವ್ ಆಗಿಲ್ಲ ಇದೇ ರೀತಿಯಾದರೆ ಹೇಗೆ? ಅನೇಕ ಅರ್ಧ ಗಂಟೆಯ ಪ್ರಶ್ನೆಗಳು ಬಾಕಿ ಇವೆ

ಶ್ರೀ ಕೆ ಶ್ರೀನಿವಾಸ ಗೌಡ ಊಟವಾದ ಮೇಲೆ ಅವರು ಉತ್ತರ ಕೊಡುತ್ತಾರೆ ಬಿಡಿ

ಅಧ್ಯಕ್ಷರು. ಗೌಡ್ರೇ ಸುಮ್ಮನೆ ಕುಳಿತುಕೊಳ್ಳಿ ಸುಮ್ಮನೆ ಏಕೆ ಎದ್ದು ನಿಂತಿಕೊಳ್ಳುತ್ತೀರಿ? ಈಗ ಆರ್ಧಗಂಟೆಗಳ ಕಾಲ ಚರ್ಚೆ ಮಾಡುವಂಥ ಪ್ರಶ್ನೆಗಳಿವೆ, ಅವುಗಳು ಬರಲಿಲ್ಲ ಇನ್ನೊಂದು law and order 69ಕ್ಕೆ ಕನವರ್ಟ್ ಮಾಡಿರುವುದು ಅದು ಬರಲಿಲ್ಲ ಯಾವುದೂ ಬರಲಿಲ್ಲ ಯಾವದೋ ಒಂದು ವಿಚಾರಕ್ಕೆ ಇಡೀ ದಿವಸ ಕಾಲ ಕಳೆದರೆ ಏನು ಮಾಡುವುದು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ನಮ್ಮ ವಿಷಯ ಬರಲಿಲ್ಲ

ಅಧ್ಯಕ್ಷರು ಸ್ವಾಮಿ ತಾವು ಕೇಳಿದಿರಿ ಅಷ್ಟರಲ್ಲಿ ನಿಮ್ಮ ನಾಯಕರು ನಿಂತು ಕೊಂಡು ಬೇರೆ ಬೇರೆ ವಿಷಯಗಳನ್ನು ಎತ್ತಿದರು ಈಗ ಗೌರ್ನಮೆಂಟ್ ಏನು ಹೇಳುತ್ತದೆ? ನೀವು ಚರ್ಚೆಗೆ consider ಮಾಡಿಕೊಂಡರೆ ನನ್ನದೇನೂ ಅಭ್ಯಂತರವಿಲ್ಲ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಸಭಾಧ್ಯಕ್ಷರು ಹೇಳಿರುವುದರಿಂದ ನಾನು ಉತ್ತರ ಕೊಡುತ್ತೇನೆ I will go by the directions of the Chair

ಅಧ್ಯಕ್ಷರು ಈಗ ಉತ್ತರ ಕೊಟ್ಟುಬಿಡಿ ಮತ್ತೆ ಚರ್ಚೆಗೆ ಹೋಗುವುದು ಬೇಡ ಮತ್ತೆ ಚರ್ಚೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಅವರು 5-6 ಪುಸ್ತಕಗಳನ್ನು ತೆಗೆದುಕೊಂಡು ಬಂದಿದ್ದಾರೆ

P2
20

ಶ್ರೀ ಸಿದ್ದರಾಮಯ್ಯ ನಾವು ಹೋಗಿ 5-6 ಪುಸ್ತಕಗಳನ್ನು ತರಬೇಕಾಗಿದೆ

ಅಧ್ಯಕ್ಷರು ನೋಡಿ ಮತ್ತೆ ಚರ್ಚೆಗೆ ಅವಕಾಶವಿಲ್ಲ Exhaust ಆಗಿ ನೀವೆಲ್ಲರೂ ಮಾತನಾಡಿದ್ದೀರಿ ಅದಕ್ಕೆ ಸರ್ಕಾರದಿಂದ ಏನು ಉತ್ತರ ಕೊಡುತ್ತಾರೋ ಕೊಡಲಿ ಮತ್ತೆ ಚರ್ಚೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ ಸಾರ್ ಅವರು ರಾಜ್ಯದ ಬಜೆಟ್ ಮಂಡಿಸಬೇಕು, ಅವರ ಆರೋಗ್ಯದ ಕಡೆಗೆ ಗಮನ ಕೊಡಿ ಸಾರ್ ಇಷ್ಟು ನಿರ್ದಾಕ್ಷಣ್ಯವಾಗಿರಬಾರದು

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಸಚಿವರು ನಿಮ್ಮ ಅಭಿಪ್ರಾಯದ ಪ್ರಕಾರ ಉತ್ತರ ಕೊಡುತ್ತೇವೆಂದು ಹೇಳುತ್ತಿದ್ದಾರೆ ಮಾನ್ಯ ಸಚಿವರು ನಿಮ್ಮ ಡೈರೆಕ್ಷನ್ ಕೇಳುತ್ತಿದ್ದಾರೆ

ಅಧ್ಯಕ್ಷರು ಉತ್ತರ ಕೊಟ್ಟು ಬಿಡಿ, ಮತ್ತೆ ಚರ್ಚೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ

ಶ್ರೀ ಎಂ ಪಿ ಪ್ರಕಾಶ್ ಸಂವಿದಾನದ 184 (2) ರ ಕೆಳಗೆ

"During the absence of the Chairman from any sitting of the Council the Deputy Chairman or, if he is also absent, such person as may be determined by the rules of procedure of the Council, or, if no such person is present, such other person as may be determined by the Council, shall act as Chairman"

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಅವರು ಹೇಳಿದ ಮೇಲೆ ನಾವು ಹೇಳಬೇಕಾಗುತ್ತದೆ

ಅಧ್ಯಕ್ಷರು ಅವರು ಮುಗಿಸುತ್ತಾರೆ

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಪ್ರಕಾಶ್ ರವರೆ ಈಗ 2-30 ಆಗಿದೆ

ಶ್ರೀ ಎಂ ಪಿ ಪ್ರಕಾಶ್ ಸ್ಪೀಕರ್‌ರವರಿಗೆ ಕನ್‌ವಿನ್ಸ್ ಮಾಡಿ ಸಾರ್ I will go by his direction

ಶ್ರೀ ಎನ್ ಧರ್ಮಸಿಂಗ್. ನೀವು ಹೇಳಿದರೆ ಅವರು ಒಪ್ಪುತ್ತಾರೆ

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್. ಸಾರ್ ನಿಮ್ಮ ಡೈರೆಕ್ಷನ್ ಕೇಳುತ್ತಿದ್ದಾರೆ

ಅಧ್ಯಕ್ಷರು ನೋಡಿ ಏನಾಗಿದೆ ಎಂದರೆ, ಈಗ ಎರಡು ಗಂಟೆಯಾದ ಮೇಲೆ ನೀವೆಲ್ಲರೂ ಮಾತನಾಡಬೇಕೆಂದು ಹೇಳಿದಿರಿ, ಅದರಂತೆ ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ ಇದಾದ ನಂತರ ಅವರು ಉತ್ತರ ಕೊಡುತ್ತಿದ್ದಾರೆ ಉತ್ತರ ಬಹಳಷ್ಟು ಆಗಲೇ ಹೇಳಿದ್ದಾರೆ ಈಗ ಕೊನೆಯ ಹಂತದಲ್ಲಿ ಇದ್ದಾರೆ

ಶ್ರೀ ಸಿದ್ದರಾಮಯ್ಯ ಮಾನ್ಯ ಅಧ್ಯಕ್ಷರೆ, ಇಲ್ಲಿ Constitutional dead lock ಆಗಿದೆ ಅವರು ಇದರ ಬಗ್ಗೆ ಎಲ್ಲಾ ಮಸ್ತಕಗಳನ್ನು ರೆಫರ್ ಮಾಡುತ್ತಿದ್ದಾರೆ ಅವರು ಹೇಳಿದ ಮೇಲೆ ಅಡ್ಜರ್ನ್ ಮಾಡಿ ನೀವು ಹೋಗುವುದಕ್ಕೆ ಆಗುತ್ತದೆಯೇ? ಅವರು ಉತ್ತರ ಕೊಟ್ಟಮೇಲೆ ನಾವು ಕ್ಲಾರಿಫಿಕೇಶನ್ ಕೇಳಬೇಕಲ್ಲವೇ? ಲೀಗಲ್ ಪೊಜಿಷನ್ ಏನೆಂಬುದನ್ನು ನಾವು ನಹ ಹೇಳಬೇಕಲ್ಲವೇ?

ಅಧ್ಯಕ್ಷರು ನಿಯಾಮವಳಿಗಳನ್ನು ನೀವು ಕೋಟ್ ಮಾಡಿದ್ದೀರಿ ಆದ್ದರಿಂದ ಅವರೂ ಸಹ ಕೋಟ್ ಮಾಡುತ್ತಿದ್ದಾರೆ ಅಷ್ಟೆ ತಾನೆ ಆದ್ದರಿಂದ ಇದರಲ್ಲಿ ಇನೇನು ಇದೆ?

ಶ್ರೀ ಸಿದ್ದರಾಮಯ್ಯ ನಾವೂ ಕೂಡ ನಮ್ಮ ವ್ಯೂ ಪಾಯಿಂಟ್ ಅನ್ನು ಹೇಳಬೇಕಾಗುತ್ತದೆ ಮತ್ತೆ ಲೀಗಲ್ ಪೊಜಿಷನ್ ಅನ್ನು ನಹ ಹೇಳಬೇಕಾಗುತ್ತದೆ

ಅಧ್ಯಕ್ಷರು ಈಗಾಗಲೇ ಇವೆಲ್ಲವನ್ನು ಹೇಳಿದ್ದೀರಲ್ಲವೆ?

ಶ್ರೀ ಸಿದ್ದರಾಮಯ್ಯ We need some time ಅದಕ್ಕೋಸ್ಕರ ಈಗ ಅಡ್ಜರ್ನ್ ಮಾಡಿ, ಮನ ಅರ್ಧಗಂಟೆ ಇದರ ಬಗ್ಗೆ ಚರ್ಚೆ ಮಾಡೋಣ -

ಅಧ್ಯಕ್ಷರು ಒಂದು ವಿಷಯವನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ ಅದೇನೆಂದರೆ, ಈಗಾಗಲೇ 2 30 ಗಂಟೆ ಆಯಿತೆಂದು ತಾವು ಹೇಳುತ್ತಿದ್ದೀರಿ ಆದ್ದರಿಂದ ನಾನು ಹೇಳುವುದೇನೆಂದರೆ, ಮಧ್ಯಾಹ್ನ ಅವರು ಉತ್ತರ ಕೊಡಬೇಕೇ ವಿನಃ ಮತ್ತೆ ಚರ್ಚೆಗೆ ಅವಕಾಶ ಕೊಡುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಅವರು ಕೆಲವು ಮಸ್ತಕಗಳನ್ನು ಕೋಟ್ ಮಾಡಿದ್ದಾರೆ ಆದ್ದರಿಂದ ನಾವು ಕೂಡ ಕೆಲವು ಪತ್ರಗಳನ್ನು ಮತ್ತು ರಾಜ್ಯಸಭಾದಿಂದ ಕರೆಸ್ಪಾಂಡೆನ್ಸ್ ಮಾಡಿರತಕ್ಕಂಥ ವಿಷಯದ ಬಗ್ಗೆ ನಾವೂ ಕೂಡ ಹೇಳಲೇಬೇಕಾಗುತ್ತದೆ

ಶ್ರೀ ಡಿ ಕೆ ಶಿವಕುಮಾರ್ ನೀವು ಹೇಳಿದ ಹಾಗೆ ನಾವು ಕೇಳಲೇಬೇಕೆ?

ಅಧ್ಯಕ್ಷರು ಮಾನ್ಯ ಶಿವಕುಮಾರ್‌ರವರೆ, ಸ್ಪೀಕರ್‌ರವರು ಹೇಳಿದ ಹಾಗೆ ಕೇಳಬೇಕೆಂದು ಇದೆ ನೀವು ಹೇಳಿದ ಹಾಗೆ ನಾವು ಕೇಳುವುದಕ್ಕೆ ಇಲ್ಲ ತಾವು ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಡಿ ಕೆ ಶಿವಕುಮಾರ್ ಹಾಗಾದರೆ, ಚರ್ಚೆ ಬೇಡವೇ?

ಅಧ್ಯಕ್ಷರು ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಕೊಟ್ಟಿದ್ದೇನೆ ಇದಕ್ಕೆ ಅವರು ಉತ್ತರ ಹೇಳುತ್ತಿದ್ದಾರೆ ಮತ್ತೆ ಮತ್ತೆ ಇದೇ ರೀತಿ ಮಾಡತಕ್ಕಂಥದು ಸರಿಯಲ್ಲ ಒಂದೇ ವಿಷಯವನ್ನು ಇಡೀ ದಿವಸ ಚರ್ಚೆ ಮಾಡುವುದೇ? ಈ ವಿಚಾರದ ಬಗ್ಗೆ ನೀವೆಲ್ಲರೂ ಕೂಡ ಮಾತನಾಡಿದ್ದೀರಿ ತಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಇನ್ನೂ ಯಾವುದಾದರು ವಿಷಯವಿದ್ದರೆ ಆಗಲೇ ತಾವುಗಳು ಕೋಟ್ ಮಾಡಿದ್ದರೆ ಮುಗಿದು ಹೋಗುತ್ತಿತ್ತು ಆದ್ದರಿಂದ, ನೀವು ಈ ರೀತಿ ಮಾಡುವುದು ನನಗೆ ಅರ್ಥವಾಗುತ್ತಿಲ್ಲ ಮಧ್ಯಾಹ್ನ ನಾನು ಉತ್ತರ ಕೊಡುವುದಕ್ಕೆ ಅವಕಾಶ ಕೊಡುತ್ತೇನೆ ವಿನ ಮತ್ತೆ ಚರ್ಚೆ ಮಾಡುವುದಕ್ಕೆ ಖಂಡಿತ ಅವಕಾಶ ಕೊಡುವುದಿಲ್ಲ

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಎಂ ಪಿ ಪ್ರಕಾಶ್‌ರವರು ನಿಮ್ಮ ಅಭಿಪ್ರಾಯವನ್ನು ಕೇಳುತ್ತಿದ್ದಾರೆ ಆದ್ದರಿಂದ, ನಿಮ್ಮ ಅಭಿಪ್ರಾಯವನ್ನಾದರು ಹೇಳಿ

ಅಧ್ಯಕ್ಷರು ಒಂದೇ ವಿಷಯದ ಬಗ್ಗೆ ಚರ್ಚೆ ಮಾಡಿದರೆ ಸಾಕೇ? ಅವರ ಉತ್ತರಕ್ಕೆ ಮಾತ್ರ ನಾನು ಮಧ್ಯಾಹ್ನ ಅವಕಾಶ ಕೊಡುತ್ತೇನೆ

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಇದರ ಬಗ್ಗೆ ಸರ್ಕಾರ ಉತ್ತರ ಕೊಡುತ್ತದೆ ಅಲ್ಲಿಗೆ ಈ ವಿಷಯ ಮುಗಿಯುತ್ತದೆ

ಅಧ್ಯಕ್ಷರು ಆಯಿತು ಈಗ ಸದನವನ್ನು 3 30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು ಮಧ್ಯಾಹ್ನ 2 32 ಗಂಟೆಗೆ ಮುಕ್ತಾಯಗೊಂಡು ಮತ್ತೆ 3 30 ಗಂಟೆಗೆ ಸೇರುವಂತೆ ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 56 ಗಂಟೆಗೆ ಪ್ರಾರಂಭವಾಯಿತು)

(ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ವಿಷಯ (ಇ) ವಿಧಾನ ಪರಿಷತ್ತಿನ ಸಭಾಪತಿಯವರ ಚುನಾವಣೆ ಬಗ್ಗೆ

(ಮುಂದುವರಿದ ಚರ್ಚೆ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಿಯಮ 69ರಡಿ ನಾವು ಕೊಟ್ಟಿರುವ ವಿಷಯದ ಚರ್ಚೆಗೆ ಅವಕಾಶ ಕೊಡುತ್ತಿರುವಿರಾ?

ಅಧ್ಯಕ್ಷರು ರಿಪ್ಲೈ ಆಗಬೇಕಲ್ಲವೇ?

ಶ್ರೀ ಜೆ ಸಿ ಮಾಧುಸ್ವಾಮಿ ನಿಯಮ 69 ರಡಿ ನಾವು ಕೊಟ್ಟಿರುವ ವಿಷಯ ನಿಮ್ಮ ಮನಸ್ಸಿನಲ್ಲಿ ಇರಲಿ ಎಂದು ಜ್ಞಾಪಿಸಿದ್ದೇವೆ

ಅಧ್ಯಕ್ಷರು. ವಂದನಾ ನಿರ್ಣಯವನ್ನು ತೆಗೆದುಕೊಂಡು ಮಾತನಾಡಲಿ

ಶ್ರೀ ಜೆ ಸಿ ಮಾಧುಸ್ವಾಮಿ ನಮ್ಮ ಕೋಮು ಗಲಭೆ ಬಗ್ಗೆ ನಿಯಮ 69 ರ ಕೆಳಗೆ ಚರ್ಚೆ ಮಾಡಲು ಕೇಳಿದ್ದೆವೆಲ್ಲಾ, ಅದನ್ನು ನಾಳೆ ತೆಗೆದುಕೊಳ್ಳುವಿರಾ?

ಅಧ್ಯಕ್ಷರು ನಾಳೆ ಒಂದು ಗಂಟೆ ಟೈಮ್ ಫಿಕ್ಸ್ ಮಾಡುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾಳೆ ಗ್ಯಾರಂಟಿ ತೆಗೆದುಕೊಳ್ಳುವಿರಾ? ಆಯಿತು, ಹಾಗೆ ಮಾಡಿ, ಟೈಮ್ ಫಿಕ್ಸ್ ಮಾಡಿ

ಶ್ರೀ ಜೆ ಸಿ ಮಾಧುಸ್ವಾಮಿ ಒಂದು ಗಂಟೆಯಲ್ಲಿ ಕೋಮು ಗಲಭೆ ಬಗ್ಗೆ ಮಾತನಾಡಲಿಕ್ಕೆ ಆಗುವುದಿಲ್ಲ

ಅಧ್ಯಕ್ಷರು ಇಲ್ಲ, ಒಂದು ಗಂಟೆ ಕಾಲ ಅವಕಾಶ ಕೊಡುತ್ತೇನೆ ಇಲ್ಲವಾದರೆ ರೂಲ್ 69ರ ಅಡಿಯಲ್ಲಿ ಚರ್ಚಿಸುವ ವಿಷಯಗಳೆಲ್ಲಾ ದಿನಗಟ್ಟಲೆ ಆಗುತ್ತಿದೆ

ಶ್ರೀ ಆರಗ ಜ್ಞಾನೇಂದ್ರ ಸರ್, ನಮಗೂ ಅವಕಾಶ ಕೊಡಿ, ನೀವು ಈ ಕಡೆ ನೋಡುವುದಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ Motion of Adjournment ನಲ್ಲಿ ರೈಸ್ ಮಾಡುತ್ತಿದ್ದೇವೆ ನೀವು ಆ ಕಡೆಯಿದ್ದು ಮಾತನಾಡುವುದೇ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಏನು ಜ್ಞಾನೇಂದ್ರರವರೇ, ನೀವು ಈ ರೀತಿ ಮಾತನಾಡಿಬಿಟ್ಟರೆ ನಾವೇನು ಮಾಡುವುದು ನೀವು ಈ ಕಡೆಗೆ ಬಂದು ಬಿಡಿ

ಶ್ರೀ ಜೆ ಸಿ ಮಾಧುಸ್ವಾಮಿ ನೀವು ಕೋಮು ಗಲಭೆ ಆಗಿರುವ ಬಗ್ಗೆ ಮಾತನಾಡುವಿರಾ, ನಮಗೆ ಸಂತೋಷ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಜ್ಞಾನೇಂದ್ರರವರಿಗೆ ಈ ಕಡೆ ಬಂದು ಮಾತನಾಡಿ, ಆ ಕಡೆ ನಿಮಗೆ adjust ಆಗುತ್ತಿಲ್ಲ ದಯವಿಟ್ಟು ಈ ಕಡೆ ಬಂದುಬಿಡಿ

ಶ್ರೀ ಆರಗ ಜ್ಞಾನೇಂದ್ರ ನಮ್ಮ ಕ್ಷೇತ್ರದಲ್ಲಿ ಏನಾಗಿದೆಯೆಂದರೆ ನೀವು ಎಲ್ಲ ವಿಧಾನಸಭೆಗೆ ಹೋಗುತ್ತಿಲ್ಲವೇ ಎಂದು ಕೇಳುತ್ತಿದ್ದಾರೆ ನಾವು ಈ ಕಡೆ ಬಂದ ಮೇಲೆ ನೀವು ನಮ್ಮ ಕಡೆ ನೋಡುವುದಿಲ್ಲ ನಮಗೆ ಬಹಳ ಕಷ್ಟವಾಗಿದೆ

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ನಿಯಮ 69 ಕ್ಕೆ ಕನ್ವರ್ಟ್ ಮಾಡಿದ ಮೇಲೆ ನಮ್ಮ ಸರ್ಕಾರವನ್ನು ತಾವು ಟೀಕೆ ಮಾಡುತ್ತೀರಿ ಸರ್ಕಾರ ಒಳ್ಳೆಯ ಕೆಲಸ ಮಾಡಿದ್ದೀರೆಂದು ಹೇಳಲಿಕ್ಕೆ ಆಡಳಿತ ಪಕ್ಷದವರಿಗೆ ಅಧಿಕಾರವಿದೆ

ಶ್ರೀ ಜೆ ಸಿ ಮಾಧುಸ್ವಾಮಿ ಅದನ್ನು ಹೇಳಲಿಕ್ಕೆ ಟ್ರೆಜರಿ ಬೆಂಚ್ ಇದೆಯೆಲ್ಲಾ ಎಂದು ನಮ್ಮ ಅಭಿಪ್ರಾಯ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ Adjournment Motion ನಿಯಮ 69 ಕ್ಕೆ ಕನ್ವರ್ಟ್ ಆಗಿದೆಯೆಲ್ಲಾ ಅದರಲ್ಲಿ ಯಾರಾದರೂ ಮಾತನಾಡಬಹುದು

ಶ್ರೀ ಜೆ ಸಿ ಮಾಧುಸ್ವಾಮಿ ಹೌದು, ಅದಕ್ಕೆ ನೀವಿದ್ದೀರಲ್ಲಾ, ತಿದ್ದುಬಹುದಲ್ಲಾ ಆಯಿತು, ಸರ್ಕಾರವನ್ನು ನೀವು ಡಿಫೆಂಡ್ ಮಾಡುವಿರೋ ಅಥವಾ ನೀವು ಅಶಕ್ತರು ಎಂದು ಒಪ್ಪಿಕೊಳ್ಳುತ್ತೀರೋ? ನಮ್ಮ ಕಡೆ ಆಗುವುದಿಲ್ಲ, ಮಂತ್ರಿಗಳು ಯಾರೂ ಇಲ್ಲ ನಮ್ಮ ಎಂ ಎಲ್ ಎ ಗಳೇ ಡಿಫೆಂಡ್ ಮಾಡುತ್ತಾರೆಂದು ಹೇಳಿಬಿಡಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಶಂಕರಮೂರ್ತಿಯವರೇ ತಾವು ಹಿರಿಯರಿದ್ದೀರಿ ಜ್ಞಾನೇಂದ್ರರವರಿಗೆ ಆ ಕಡೆ ಇರಲಿಕ್ಕೆ ಆಗುತ್ತಿಲ್ಲ, ಅವರಿಗೆ ಕಷ್ಟವಾಗಿಬಿಟ್ಟಿದೆ, ದಯವಿಟ್ಟು ಅವರನ್ನು ಈ ಕಡೆ ಕಳುಹಿಸಿಬಿಡಿ ಎಲ್ಲಾ ರೀತಿಯಲ್ಲಿಯೂ ಅವರಿಗೆ ಕಷ್ಟವಾಗಿದೆ, ಒಂದು ರೀತಿಯಲ್ಲಲ್ಲ, ಅನೇಕ

ರೀತಿಯಲ್ಲಿ ನೀವು ಅವರಿಗೆ ತೊಂದರೆ ಕೊಡುತ್ತಿದ್ದೀರಿ ಅವರನ್ನು ದಯವಿಟ್ಟು ಈ ಕಡೆ ಕಳುಹಿಸಿಬಿಡಿ

ಶ್ರೀ ಎಂ ಪಿ ಪ್ರಕಾಶ್ ಶ್ರೀರಾಮರೆಡ್ಡಿಯವರೇ, ಸರ್ಕಾರ ತಪ್ಪು ಮಾಡಿದ್ದನ್ನು ಆಡಳಿತ ಪಕ್ಷದ ನದಸ್ಯರು criticize ಮಾಡಲಿಕ್ಕೆ ಅವರಿಗೆ ಅಧಿಕಾರವಿದೆ ಆದ್ದರಿಂದ ವಿಪ್ ಕೊಟ್ಟಾಗ ಮಾತ್ರ ಅವರು ಬೇಕಾದರೆ ಸರ್ಕಾರದ ವರವಾಗಿ ಅಥವಾ ವಿಪ್‌ನ ಆದೇಶದ ಪ್ರಕಾರ ಅವರು ನಡೆದುಕೊಳ್ಳಬೇಕಾಗುತ್ತದೆ ಉಳಿದಂತೆ ಸರ್ಕಾರವನ್ನು ಟೀಕೆ ಮಾಡಲಿಕ್ಕೂ ಸಹ ಆಂತರಿಕ ಪ್ರಜಾಪ್ರಭುತ್ವದಲ್ಲಿ ಸ್ವಾಗತ ಮಾಡಬಹುದು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಆಗಬಹುದು, ಆದರೆ ಜ್ಞಾನೇಂದ್ರರವರಿಗೆ ಕಷ್ಟವಾಗಿಬಿಟ್ಟಿದೆ, ದಯವಿಟ್ಟು ನೀವು ಏನಾದರೂ ಮಾಡಿ ಅವರನ್ನು ಈ ಕಡೆ ಕಳುಹಿಸಿಬಿಡಿ ನೀವು ನಾನಾ ರೀತಿಯಲ್ಲಿ ಹಿಂಸೆ ಕೊಟ್ಟಿದ್ದೀರಿ, ಅವರಿಗೆ ಮಾನಸಿಕವಾಗಿ ಭಾರಿ ಹಿಂಸೆಯನ್ನು ಕೊಟ್ಟಿದ್ದೀರಿ

ಶ್ರೀ ಆರಗ ಜ್ಞಾನೇಂದ್ರ ಆ ರೀತಿಯೇನಿಲ್ಲ ನಮಗೆ ಮಾತನಾಡಲಿಕ್ಕೆ ಅವಕಾಶ ಕೊಡದಿದ್ದಾಗ ನಮಗೆ ಹಿಂಸೆಯೇ ಶ್ರೀರಾಮರೆಡ್ಡಿಯವರಿಗೆ ನಾವು ಆ ಕಡೆ ಇದ್ದಾಗ ಮಾತನಾಡಲಿಕ್ಕೆ ಕಡಿಮೆ ಅವಕಾಶವಿತ್ತು ಈಗ ನಾವು ಈ ಕಡೆ ಬಂದಿದ್ದರಿಂದ ಫುಲ್ ಅವರೇ, ಸರ್ವಾಧಿಕಾರಿಗಳಾಗಿದ್ದಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನೀವು ಈ ಕಡೆ ಬಂದುಬಿಡಿ

ಅಧ್ಯಕ್ಷರು ಕಾನೂನು ಸಚಿವರು ಮಾತನಾಡಿ

ಶ್ರೀ ಎಂ ಪಿ ಪ್ರಕಾಶ್(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೇ, ಇದನ್ನು ದೀರ್ಘವಾಗಿ ತೆಗೆದುಕೊಂಡು ಹೋಗುವ ಅಗತ್ಯತೆ ಇಲ್ಲ ಆದರೆ, ಈಗ ಏನು ನಡವಳಿಕೆಗಳಾಗಿವೆ, ಇದರ ಬಗ್ಗೆ ನಮ್ಮ ಎಲ್ಲಾ ಮಾನ್ಯ ಹಿರಿಯ ನದಸ್ಯರ ಗಮನ ಸೆಳೆಯಬೇಕೆನ್ನುವ ಕಾರಣಕ್ಕಾಗಿಯೇ ಕೆಲವು ಅನಿವಾರ್ಯವಾದ, ವಿವರಗಳನ್ನು ನಾವು ಕೊಡಬೇಕಾಗುತ್ತದೆ ಈ ವಿಚಾರದಲ್ಲಿ ವಿಧಾನಪರಿಷತ್ತಿನ ಕಾರ್ಯಾಲಯದವರು, ರಾಜ್ಯಸಭೆಗೆ ಅಲ್ಲಿಯ ನೆಕ್ರೆಟರಿ ಜನರಲ್‌ರವರಿಗೆ ಪತ್ರವನ್ನು ಬರೆದು ಈ ವಿಚಾರದಲ್ಲಿ ಸ್ಪಷ್ಟೀಕರಣವನ್ನು ಮಾರ್ಗದರ್ಶನವನ್ನು ಕೇಳಿದಾಗ ಅದರಲ್ಲಿಯೂ ಕೂಡ ಸನ್ಮಾನ್ಯ ಮಲ್ಲಿಕಾರ್ಜುನ್ ಖರ್ಗೆಯವರು ಹೇಳಿದರು ಅದರಲ್ಲಿ

ಮುಖ್ಯವಾಗಿರುವಂಥಾದ್ದು `` The Constitution, however being a higher law shall prevail over the provisions of the rules of procedure Even otherwise also apparently there does not occur to be any contradiction between the provisions of Article 91(2) and Rule 8(1) of the Rules of Procedure and conduct of business in Rajya Sabha " The question which has been raised by the Secretary, Karnataka Legislative Council has therefore to be addressed in the light of the provisions contained in Article 184(2) of the Constitution which contains of provisions identical to Article 91(2) ಎನ್ನುವಂಥ ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ ಮಾನ್ಯ ಮಲ್ಲಿಕಾರ್ಜುನ್ ಖರ್ಗೆಯವರು ಮೊದಲಿನ ಭಾಗದ ಒಂದು ವಿಚಾರವನ್ನು ಅವರು ಪ್ರಸ್ತಾಪ ಮಾಡಬಹುದು, ಇದರಲ್ಲಿದೆ ಅದರಲ್ಲಿ ಅವರು ಏನು ಹೇಳುತ್ತಾರೆಂದರೆ,`` While the Constitution says that, during the absence of the Chairman or the Deputy Chairman a person as may be determined by the Rules of Procedure of the Council or if no such person is present then such other person as may be determined by the Council shall act as a Chairman There is a difference between the provisions as contained in Article 91(2) and Rule 8(1) of the Rules of Procedure and Conduct of Business in the Rajya Sabha While Constitution allows the person so determined by the rules or if such a person is not present, then such other person as may be determined by the Council to act in the absence of the Chairman and the Deputy Chairman, as a Chairman the rules restrict his role to that of the presiding over the House only" ಎನ್ನತಕ್ಕಂಥಾದ್ದನ್ನು ಅವರು ಉಧೃತ ಮಾಡಬಹುದು ಆದರೆ ಇದರಲ್ಲಿರತಕ್ಕಂಥಾದ್ದು, ಪ್ಯಾನೆಲ್‌ನಲ್ಲಿರತಕ್ಕಂಥಾದ್ದು ಮುಂದಿನ ಅಧಿವೇಶನಕ್ಕೂ ಕೂಡ ಲಭ್ಯತೆಯಾಗುತ್ತದೆ ಅದು ನಿಷ್ಕ್ರಿಯವಾಗುವುದಿಲ್ಲ ಆ ಪ್ರಕಾರವಾಗಿ ಆ ಪ್ಯಾನೆಲ್ ಮುಂದುವರಿದಿದೆ ಎಂದು ನಾವು ಹೇಳಿ, Panel ನಲ್ಲಿರುವವರು 184(2) Constitutional Provisionರ ಕೆಳಗೆ ಅವರು ಎಲ್ಲಾ

ತರಹದ ಅಧಿಕಾರವನ್ನು, ಅಂದರೆ ಅಂತರ್ಗತ ಅಧಿಕಾರ ಸಭಾಪತಿಗಳಿಗೇನಿರುತ್ತದೆ, ಆ ಅಧಿಕಾರವನ್ನು ಇವರು ನಿರ್ವಹಿಸಲಿಕ್ಕೆ ಸಾಧ್ಯತೆಯಿದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಇಂತಹ ಕೇಸ್ argument ಮಾಡುವುದರಿಂದ ಒಳ್ಳೆಯ ಲಾಯರ್‌ಗೆ ರೆಪ್ಯುಟೇಶನ್ ಹೋಗುತ್ತದೆ

Sri K.R.Ramesh Kumar You read out from the observations sent by Rajya Sabha

ಶ್ರೀ ಎಂ ಪಿ ಪ್ರಕಾಶ್ Later part ತಾವು Article 184(2) ಅನ್ನು ಓದಲಿಲ್ಲ I will come back to you

ಶ್ರೀ ಜೆ ಸಿ ಮಾಧುಸ್ವಾಮಿ ಸಾರ್, ಅವರು ಈಗ ಲಾಯರ್ ಅಲ್ಲ ಅವರು ಈಗ ನಮ್ಮ ಜನರಲ್

ಶ್ರೀ ಸಿದ್ದರಾಮಯ್ಯ ಈಗಲೂ ಅವರನ್ನು ಲಾಯರ್ ಎಂದೇ ಕರೆಯುವುದು

ಶ್ರೀ ಜೆ ಸಿ ಮಾಧುಸ್ವಾಮಿ He is appointed by Government ಅಲ್ಲವೇ ಈಗ Advocate General Sir ತಾವು ಈಗ You cannot treat as lawyer You have to argue whatever the case may be on behalf of the Government ಅಲ್ಲವೇ?

ಶ್ರೀ ಎಂ ಪಿ ಪ್ರಕಾಶ್ – No It is not like that It is a correct position of law Whatever it may be, it is for the Chairman to decide

Sri K.R Ramesh Kumar· Rajya Sabha observation ತಾವು ಓದಿದಿರಲ್ಲ First portion ಓದಿದ ಮೇಲೆ second portion ಗೆ ಬಂದಿರಿ, 'His role gets confined to that of presiding only' ಅಂತ ಹೇಳಿ

Sri M P Prakash Sir, we are assisting the House

ಶ್ರೀ ಜೆ ಸಿ ಮಾಧುಸ್ವಾಮಿ ನಾನು ಅವರಿಗೆ ಹೇಳುತ್ತಿದ್ದೆ He brought in Governor Governor ಅನ್ನು ಒಳಗೆ ಕರೆದುಕೊಂಡು ಬರುವುದಕ್ಕೆ ನೀವು appoint ಮಾಡಿದ್ದಿರಿ It is a Constitutional lapse He is not a pro tem Chairman

ಶ್ರೀ ಎಂ ಪಿ ಪ್ರಕಾಶ್ ತಾವು ಇರಲಿಲ್ಲ ಆಗಲೇ ಅದರ ಬಗ್ಗೆ ಬಹಳ ಚರ್ಚೆಯಾಗಿದೆ

P2
21

ಶ್ರೀ ಜೆ ಸಿ ಮಾಧುಸ್ವಾಮಿ ಆಧ್ಯಕ್ಷರನ್ನು ಕರೆದುಕೊಂಡು ಬರುವುದಕ್ಕೆ ತಾವು ಕಾನೂನು ಮಾಡುವುದಕ್ಕೆ ಆಗುವುದಿಲ್ಲ Governor Address ಗೆ ಕರೆದುಕೊಂಡು ಬರುವುದಕ್ಕೆ panel ಮಾಡಿದ್ದೀರಿ

ಶ್ರೀ ಎಂ ಪಿ ಪ್ರಕಾಶ್ He is not a pro tem Chairman at all

Sri J.C.Madhu Swamy: Then, before the Assembly has assembled you have announced him

Sri M.P.Prakash: ಅವರು regular Chairman Panel ನಲ್ಲಿ ಇರುವವರು

ಶ್ರೀ ಜೆ ಸಿ ಮಾಧುಸ್ವಾಮಿ ಪೇಪರ್‌ನಲ್ಲಿ ಅನೌನ್ಸ್ ಮಾಡಿ ಫೋಟೋ ಹಾಕಿದ್ದೀರಿ ತಿಪ್ಪಣ್ಣನವರನ್ನು pro tem Chairman ಮಾಡಿದ್ದೇವೆಂದು To your bad luck Governor ಜೊತೆಯಲ್ಲಿ ಅವರು ಒಳಗೆ ಬಂದರು ಅಲ್ಲಿ ಕುಳಿತಿದ್ದಾರೆ ಅವರು Panel ಅಲ್ಲ ಅದು Panel regular Chairman ತಮ್ಮ ಜೊತೆ ಬಂದರು , ತಾವೇ ಹೇಳಿ ಸಾರ್

ಅಧ್ಯಕ್ಷರು ಅವರು ಉತ್ತರ ಹೇಳಲಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಒಂದು clarification ಬೇಕಾಗಿದೆ ಅಲ್ಲಿ ಒಂದು ಹೇಳಿದಿರಿ 'as may be determined by the Council' ಅಂತ ಹೇಳುತ್ತೀರಿ Whether the Council has determined ಸಭಾಪತಿ , ಉಪಸಭಾಪತಿ ಇಲ್ಲದೇ ಇದ್ದಾಗ panel ಇರಲಿಲ್ಲ Panel ಇರಲಿಕ್ಕೆ ಆವತ್ತು Chairman, Deputy Chairman ಕುಳಿತುಕೊಂಡಿರಲಿಲ್ಲ panel ನೇಮಕ ಮಾಡಿಲಿಲ್ಲ Panel ಅನ್ನು ಯಾರು appoint ಮಾಡಿದ್ದರು? ಅಲ್ಲಿ panel ಇರಲಿಲ್ಲ

ಶ್ರೀ ಡಿ ಆರ್ ಪಾಟೀಲ್ Sir, Council Rules ನಲ್ಲಿ Rule No (10) ನೋಡಿ 'Power of persons presiding - The Deputy Chairman or other Member competent to preside over a sitting of the Council shall when so presiding have the same power as the Chairman when presiding over the Council ' And all references ಇದೆ But after the Council adjourns, he cannot exercise those powers For next day how can he set the agenda?

ಶ್ರೀ ಎಂ ಪಿ ಪ್ರಕಾಶ್ ತಾವು ಕೌಲ್ ಅಂಡ್ ಶಕ್ಧರ್ ಬಗ್ಗೆಯೂ ಮಾತನಾಡಿದಿರಿ ನಾನು ಉತ್ತರ ಹೇಳಿಬಿಡುತ್ತೇನೆ

Sri K.R. Ramesh Kumar Governor's Address ಆಗುವುದಕ್ಕಿಂತ ಹಿಂದೆ what was the position? Both the Houses were prorogued They were adjourned sine-a-die Prorogation ಆಗಿತ್ತು Then, they were reconvened on the recommendation of the Governor So, Governor's Address ಆದ ಮೇಲೆ both the Houses should get back to their functioning So, the first and foremost thing, ತಾವು ಏನು ಮಾಡಿದಿರಿ ಈ ಸಭೆಯಲ್ಲಿ? Immediately, Governor ಹೊರಟು ಹೋದ ಮೇಲೆ ನಮ್ಮನ್ನು BAC ಗೆ ಕರೆದಿರಿ BAC ಯಲ್ಲಿ ಕುಳಿತುಕೊಂಡು Business ಅನ್ನು decide ಮಾಡಬೇಕು Council ನಲ್ಲಿ BAC rules ಏನು ಹೇಳುತ್ತದೆ ಸ್ವಲ್ಪ Rules of Procedure ನೋಡಿ 'Chairman only can be the Chairman of the Business Advisory Committee' ನಿಮ್ಮ panel of Chairmen ಗೆ, he enjoys all the powers of a Chairman while presiding over, while discharging the duty of a Chairperson he enjoys all the privileges of a Chairperson But he is not the Chairman He cannot arrogate the authority of Chairman to himself ಈಗ Governor's Address ಆಗಿದೆ They have to decide the Business BAC meeting ಆಗಬೇಕು BAC ವಿಚಾರಕ್ಕೆ Council Rules ಏನು ಹೇಳುತ್ತದೆ ನೋಡಿ

Sri M.P. Prakash: 'During the absence of the Chairman from any sitting of the Council, the Deputy Chairman or if he is also absent such persons as may be determined by the Rules of Procedure of the Council or if no such person is present, such other person as may be determined by the Council shall act as the Chairman'

Sri K.R.Ramesh Kumar That is exactly our prayer

ಶ್ರೀ ಎಂ ಪಿ ಪ್ರಕಾಶ್ ನಾನು ಉತ್ತರ ಕೊಡುವುದಕ್ಕಾದರೂ ಬಿಡಿ ಇದರ ಕೆಳಗೆ ಈ ವಿಚಾರ ಮಾಡುತ್ತಿರಬೇಕಾದರೆ ಆ ಸಂದರ್ಭದಲ್ಲಿ ಎನಾಗಿದೆ

ಅಂದರೆ panel ನಲ್ಲಿರತಕ್ಕಂತಹ ಮಾನ್ಯ ಸದಸ್ಯರನ್ನು ಮಾಡಬೇಕು ಎನ್ನತಕ್ಕಂತದ್ದು ಇದೆ ಅದೇ ಶಕ್ಧರ್ ಅಂಡ್ ಕೌಲ್‌ನಲ್ಲಿ ಕೂಡ ಹೇಳುತ್ತಾರೆ 'Any Member of the panel of Chairmen when presiding over a sitting of the House ನಾನು ಶಕ್ಧರ್ ಅಂಡ್ ಕೌಲ್‌ನಲ್ಲಿ ಅದರ extract ಅನ್ನು ತೆಗೆದುಕೊಂಡಿದ್ದೇನೆ ನಾನು extract ಅನ್ನು ಉತ್ತರ ಕೊಟ್ಟು ಹೇಳಿಬಿಡಬಹುದು ಎಂದು ತಯಾರಾಗಿದ್ದೆ ಆದ್ದರಿಂದ written ಉತ್ತರ ಕೊಟ್ಟರೆ ಮುಗಿದು ಹೋಗುತ್ತದೆ ಮತ್ತು ಎಲ್ಲರೂ ಚರ್ಚೆ ಮಾಡಬೇಕು ಎನ್ನುವ ಕಾರಣಕ್ಕಾಗಿ ನಾನು ಮಾತನಾಡಲಿಕ್ಕೆ ಶುರು ಮಾಡಿದೆ 'Any Member of the panel of Chairmen when presiding over a sitting of the House has the same power as the Speaker when so presiding, the rulings of the Chairmen are not subject to any criticism nor open to any debate or appeal In order that there is an authoritative ruling a Chairmen often reserves major issues for decision of the Speaker A reference to Chairman's conduct while in the Chair amounts to contempt of the House and therefore he is shown all respect as the presiding officer of the House '

ಶ್ರೀ ಎಂ ಪಿ ಪ್ರಕಾಶ್ ನಿಯಮ 327ರ ಕೆಳಗೆ 26 ಮಂದಿಯನ್ನು ಅವರು ಇವತ್ತು ಹೆಸರಿಸಿದ್ದಾರೆ I will come back to it Sir Kindly bear with me and have a little patience to listen

Sri K.R Ramesh Kumar: I just now conceded what you read out A person who is amongst the panel, who is otherwise addressed to as the Vice Chairman enjoys all the power ನಾವು ಅದನ್ನು ಕೇಳುತ್ತಿಲ್ಲ.

ಶ್ರೀ ಎಂ ಪಿ ಪ್ರಕಾಶ್ ಇದು ಹೇಗಿದೆಯೆಂದರೆ "ಬಸವನೆಂದೊಡೆ ಪಾಪ" ಎಂಬುದರ ಮುಂದಿನದು ಕೇಳಲೇ ತಯಾರಿಲ್ಲ, ನನ್ನನ್ನು ಗುರುವೆಂದು ಸ್ವೀಕಾರ ಮಾಡಿದ್ದಕ್ಕೆ ಧನ್ಯವಾದಗಳು, ಶಿಷ್ಯರು ನನಗಿಂತ ಬಹಳ ಚೆನ್ನಾಗಿ ಆಗಿದ್ದಾರೆಂಬುದು ನನಗೆ ಬಹಳ ಸಂತೋಷವೂ ಹೌದು "ಬಸವನೆಂದೊಡೆ

ಪಾಪ ದೆಸೆಗೆಟ್ಟು ಪೋಪುದು" ಎಂದು ಮುಂದಿನ ವಾಕ್ಯವನ್ನು ಕೇಳಲೊಲ್ಲರು ಬರೀ ಇದನ್ನೇ ಹೇಳುತ್ತೀರಲ್ಲ ಅನ್ನುತ್ತಾರೆ

ಶ್ರೀ ಕೃಷ್ಣ ಭೈರೇಗೌಡ. ನಾವು ಹೊಸ ಶಿಷ್ಯರು, ನಿಮ್ಮನ್ನು ನೋಡುತ್ತಲೇ ಇದ್ದೇವೆ, ಒಳ್ಳೆಯ ಮಾರ್ಗದಲ್ಲಿ ನಮ್ಮನ್ನು ಕರೆದುಕೊಂಡು ಹೋಗಿ, ದಯವಿಟ್ಟು ಈ ಮಾರ್ಗದಲ್ಲಿ ಬೇಡ

ಶ್ರೀ ಎಂ ಪಿ ಪ್ರಕಾಶ್ ಕೃಷ್ಣೇಗೌಡರು ಯುವಕರು, articulation ಇಷ್ಟು ಅದ್ಭುತವಾಗಿರುವವರು, ಆತನಿಗೆ ನೀವು ಅವಕಾಶವನ್ನೇ ಕೊಡಲೊಲ್ಲರಿ ಏನು ದುರ್ದೈವ, ಎಲ್ಲರೂ ದೆಹಲಿವರೆಗೂ ಹೋಗಿ ಹೇಳಿ ಬಂದರೂ ಕೂಡ ನಿಮ್ಮಲ್ಲಿ talent ಗುರ್ತಿಸುವ ಸ್ವಭಾವವೇ ಇಲ್ಲ ನಮ್ಮಲ್ಲಿ ನೋಡಿ

ಶ್ರೀ ಜೆ ಸಿ ಮಾಧುಸ್ವಾಮಿ ಬಹಳ ಚೆನ್ನಾಗಿ ಗುರ್ತಿಸಿದ್ದೀರಿ, A T ರಾಮಸ್ವಾಮಿ, ಜ್ಞಾನೇಂದ್ರರನ್ನು ನೋಡಿದರೆ ತಿಳಿಯುತ್ತಿದೆ

ಶ್ರೀ ಎಂ ಮಹದೇವ್ ಒಂದು submission Sir, from the beginning of this formation of the coalition Government every time you are trying to defend the indifference ಅದು ವಿತಂಡವಾದವೋ ಅಥವ ತಮ್ಮ ಜವಾಬ್ದಾರಿಯಿಡಿ ಹೀಗೆ ಮಾತನಾಡಬೇಕೋ , ಕೆಲವು ಸಲ ನಮಗೇ ಮುಜುಗರವಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ ಈಗ ನಡೆದಿರುವುದರ ಹಿನ್ನೆಲೆಯಲ್ಲಿ ಕಾನೂನು ನಿಯಮಗಳನ್ನು ಹೇಳುತ್ತಿದ್ದೇನೆ ಒಪ್ಪುವುದು ಬಿಡುವುದು ಅವರಿಗೆ ಸೇರಿದ್ದು, ತಮ್ಮ ತೀರ್ಮಾನಕ್ಕೆ ಅವಕಾಶ ಇದೆ ಹಿಂದೆ ಪದಧಾರಣ ಮಾಡಿರುವ ಚೇರ್ಮನ್ panel of Chairman ಪಟ್ಟಿಯಲ್ಲಿವ ಸದಸ್ಯರಿಗೂ ಅದೇ ಅಧಿಕಾರವಿದೆ ಎಂಬ ಮಾತನ್ನು ಹೇಳುತ್ತದೆ ಸಂವಿಧಾನದ 184[2]ರನ್ವಯ the Constitutional provisions do not put any restriction on the powers of the person acting as Chairman Since, the Constitution however being a higher law shall prevail over the provisions of the Rules of Procedure ಎಂದು ರಾಜ್ಯಸಭೆಯಿಂದ ನಮಗೆ ಸ್ಪಷ್ಟೀಕರಣ ಬಂದಿದೆ ಇದರೊಳಗೆ ಇಲ್ಲಿ ಕೂಡ ಆದ ಉದಾಹರಣೆ ಹೇಳಬೇಕು ಅಂದರೆ ರಾಮಚಂದ್ರಗೌಡರು ಆ ದಿವಸ panel of Chairman ನಲ್ಲಿ ಕೂಡುವಾಗ ಉಪಸಭಾಪತಿ ಸ್ಥಾನಕ್ಕೆ ಚುನಾವಣೆ ನಡೀತಿತ್ತು ಅದಕ್ಕೆ ಅವರು ನಾಮಪತ್ರ

ಮಾಡಿದ್ದುದರಿಂದ ಅದಕ್ಕೆ ಯಾರೂ ಇರಲಿಲ್ಲ 17–3–2005ರಂದು panel of Chairman ನಲ್ಲಿದ್ದ Dr M R ತಂಗಾ ಸಭಾಪತಿ ಸ್ಥಾನದಿಂದ ಚುನಾವಣೆ ಪ್ರಕ್ರಿಯೆ ಸಹ ನಡೆಸಿದರು

ಶ್ರೀ ಜೆ ಸಿ ಮಾಧುಸ್ವಾಮಿ: ತಾವು ಆತ್ಮಪೂರ್ವಕವಾಗಿ ಈ ಕೇಸ್ ವಾದಿಸುತ್ತಿದ್ದೀರ ಅಂತ ಹೇಳಿಬಿಡಿ, ಕೂತು ಕೇಳುತ್ತೇವೆ Where is the question of panel when your Deputy Chairman was available ನಿಮ್ಮ Dy Chairman ಇದ್ದಾಗಲೇ ರಾಜ್ಯಪಾಲರನ್ನು ಕರೆದುಕೊಂಡು ಅವರು ಒಳಕ್ಕೆ ಬರುತ್ತಾರೆ ಆದ್ದರಿಂದ ಈ panel question ಎಲ್ಲಿ ರೈಸ್ ಆಗುತ್ತದೆ?

ಶ್ರೀ ಎಂ ಪಿ ಪ್ರಕಾಶ್: ನಾವು ಪ್ರಾರಂಭಿಸಿದಾಗ ತಾವು ಇರಲಿಲ್ಲ ಮತ್ತೆ ಹೇಳುತ್ತೇನೆ ಸಭಾಪತಿ ಪದಧಾರಣ ಮಾಡುವವರ ಪಟ್ಟಿ Heading ಪ್ರಕಾರ ಸಭಾಪತಿಯವರು ಕಾಲಕಾಲಕ್ಕೆ ಪರಿಷತ್ತಿನ ಸದಸ್ಯರ ಪೈಕಿ 4 ಸದಸ್ಯರಿಗೆ ಮೀರದಂತೆ ಸಭಾಪತಿ ಕಾರ್ಯ ನಿರ್ವಹಿಸಲು ನಾಮನಿರ್ದೇಶನ ಮಾಡತಕ್ಕದ್ದು ಸಭಾಪತಿ, ಉಪಸಭಾಪತಿಗಳ ಗೈರುಹಾಜರಿಯಲ್ಲಿ ನಾಮನಿರ್ದೇಶನಗೊಂಡವರ ಪೈಕಿ ಯಾರಾದರೊಬ್ಬರು ಸಭೆ ಅಧ್ಯಕ್ಷತೆ ವಹಿಸತಕ್ಕದ್ದು

ಶ್ರೀ ಜೆ ಸಿ ಮಾಧುಸ್ವಾಮಿ ಅಷ್ಟೇ ಸಾಕು, ಸಭಾಪತಿಯವರಿಂದ ನಾಮಿನೇಟಾದವರು ಇಲ್ಲಿಯ ಕ್ವೆಶ್ಚನೇ ಬೇರೆ ಶಾಸನಸಭೆ ನಡೆದಿರುತ್ತದೆ, ಅಧ್ಯಕ್ಷರ panel ಇರುತ್ತದೆ, seat ಖಾಲಿ ಮಾಡುವಾಗ ಯಾರಿಗಾದರೂ ಹೇಳಿ ಹೋಗುತ್ತಾರೆ ಆದರೆ ಅಲ್ಲಿ there was Deputy Chairman available ಕೌನ್ಸಿಲ್ ಆರಂಭವಾಗುವ ಎರಡು ದಿವಸ ಮುಂಚೆಯೇ ನೀವು ತಿಪ್ಪಣ್ಣನವರನ್ನು ಚೇರ್ಮನ್ನಾಗಿ ತಾತ್ಕಾಲಿಕವಾಗಿ ನೇಮಿಸಿದ್ದೇವೆ ಎಂದಿರಿ, when Deputy Chairman was there, when Deputy Chairman was never asked to preside, ಅವರೇನು ಬರುವುದಿಲ್ಲ ಅಂದಿದ್ದರೆ? ರಜೆ ಹಾಕಿದ್ದರೆ? ಹಾಗಿದ್ದರೆ ಮಧ್ಯೆ ಯಾಕೆ ಬಂದರು? Leave of absence sanction ಆಗಿತ್ತೇ? ಅವರು ಲಭ್ಯವಿರುವಾಗಲೂ ರಾಜ್ಯಪಾಲರ ಜತೆ ತಿಪ್ಪಣ್ಣನವರು ಬಂದಾಗ all procedures are violated ಸುಮ್ಮನೆ ವಾದಿಸಿದರೆ ಏನು ಬಂತು?

ಶ್ರೀ ಎಂ ಪಿ ಪ್ರಕಾಶ್ ಸರ್ಕಾರದ ನಿಲುವನ್ನು, ಹೇಳಲು ಬಿಡಿ ಹಾಗಾದರೆ ನಾವು ಮೂಲಭೂತ ವಿಚಾರಕ್ಕೇ ಹೋಗೋಣ ಶೂನ್ಯವೇಳೆಯಲ್ಲಿ ಇದನ್ನು ಇಷ್ಟೆಲ್ಲ ಚರ್ಚಿಸಲು ಇದೆಯಾ? ಅದನ್ನು ಬಿಟ್ಟಿದ್ದೇವೆ, ಅಕೆದೆಮಿಕಾಗಿ

ಚರ್ಚೆಯಾಗಬೇಕು ಎಂದಿರಿ, ನಮ್ಮ ವಾದ ಸಂಪೂರ್ಣ ಆಲಿಸಿರಿ, ಒಪ್ಪುವುದು ಬಿಡುವುದು ನಿಮಗೇ ಸೇರಿದ್ದು ತೀರ್ಮಾನ ಸ್ಪೀಕರ್ ರವರದ್ದು ಮತ್ತೆ ಓದುತ್ತೇನೆ "ಪಟ್ಟಿಯಲ್ಲಿರುವ ನಾಮನಿರ್ದೇಶಿತ ಸದಸ್ಯರು ಮತ್ತೊಂದು ಹೊಸಪಟ್ಟಿ ತಯಾರಿಸುವವರೆಗೆ ಸಭಾಪತಿಗಳ ಗೈರುಹಾಜರಿಯಲ್ಲಿ ಸಭಾಪತಿಗಳ ಪದಧಾರಣ ಮಾಡತಕ್ಕದ್ದು ಎಂದಿದೆ" ಅಂದರೆ ಹೊಸ ಪಟ್ಟಿಯಾಗಿಲ್ಲ, ಹಳೇ ಪಟ್ಟಿಯೇ ಇದೆ ರಮೇಶಕುಮಾರ್‌ರವರು ಹೇಗೆ ಅರ್ಥೈಸಿದರೆಂದರೆ ಒಮ್ಮೆ ಅಧಿವೇಶನ ಮುಗಿದ ತಕ್ಷಣ ಅದು ಮುಗಿದುಹೋಗುತ್ತದೆ ಅಧಿವೇಶನ ಸಂದರ್ಭದಲ್ಲಿ ಹೊಸ ಪಟ್ಟಿ ಇರದಿದ್ದರೆ ಹಳೇ ಪಟ್ಟಿಯೇ ಇರುತ್ತದೆ ಎಂಬುದು It is a question of interpretation to which you have to cling on ಬೆಳಗಾವಿ ಅಧಿವೇಶನದಲ್ಲಿ ತಯಾರಾಗಿರುವ ಪಟ್ಟಿ ಹೊಸಪಟ್ಟಿ ತಯಾರಾಗುವವರೆಗೆ ಅದುಊರ್ಜಿತಗೊಳ್ಳುತ್ತದೆ ಆ ಹಳೇ ಪಟ್ಟಿಯಲ್ಲಿ ಮಾನ್ಯ ತಿಪ್ಪಣ್ಣನವರ ಹೆಸರೂ ಇದೆ ಉಪ ಸಭಾಪತಿಗಳಿಗಾದರೋ ಸಭಾಪತಿಗಳ ಎಲ್ಲ ಅಧಿಕಾರ ನಿರ್ವಹಿಸಲು ಅಧಿಕಾರ ಇದೆ ಇದೇ ರೀತಿ ಸಭಾಪತಿ ಸ್ಥಾನ ತೆರವಾದ ಸಂದರ್ಭದಲ್ಲಿ ಉಪಸಭಾಪತಿ ಮಾನ್ಯ ಖೋತ್‌ರವರು ಸಭಾಪತಿಯಾಗಿ ಕಾರ್ಯ ನಿರ್ವಹಿಸಿದ್ದಾರೆ, ಅಂತಹ ಅನೇಕ ಉದಾಹರಣೆ ಇದೆ ಆ ಸಂದರ್ಭದಲ್ಲಿ ಅವರೊಂದು ಪತ್ರ ಬರೆಯುತ್ತಾರೆ ಕಾರ್ಯಾಲಯಕ್ಕೆ, ನನ್ನ ಅನಾರೋಗ್ಯದ ಕಾರಣಕ್ಕಾಗಿ ವೈದ್ಯರ ಸಲಹೆ ಮೇರೆಗೆ ನಾನು ಸದನಕ್ಕೆ ಬರಲು ಆಗುತ್ತಿಲ್ಲ ಬದಲಿಗೆ ನಾಮನಿರ್ದೇಶಿತ ಪಟ್ಟಿಯಲ್ಲಿರುವ ತಿಪ್ಪಣ್ಣವರು ಹಿರಿಯ ಸದಸ್ಯರಾಗಿರುವ ಕಾರಣಕ್ಕೆ ಕಲಾಪ ನಡೆಸಿಕೊಂಡು ಹೋಗಲು ಒಪ್ಪಿಗೆ ಕೊಟ್ಟಿದ್ದೇನೆ ಎಂದು ಆ ಪತ್ರದ ಪ್ರಕಾರ notification ಆಗುತ್ತದೆ ಇದರ ಜತೆಗೆ panelನಲ್ಲಿರುವ ಒಬ್ಬ ವ್ಯಕ್ತಿ ದಿನವಹಿ ಕೆಲಸಕ್ಕೆ ಆತ ಜವಾಬ್ದಾರನೇ ವಿನಾ ಉಳಿದದ್ದನ್ನು ನಿರ್ವಹಿಸಲು ಆತನಿಗೆ ಅಧಿಕಾರವಿಲ್ಲವೆಂದು ಸದಸ್ಯರು ಹೇಳಿದ್ದೀರಿ, ಆದರೆ ಆರ್ಟಿಕಲ್ 184[2]ರ ಕೆಳಗೆ ಯಾರು ಸದಸ್ಯರಾಗಿ ದೈನಂದಿನ ಕೆಲಸ ಮಾಡುತ್ತಿದ್ದರೂ ಸಭಾಪತಿ ನಿರ್ವಹಿಸುವ ಅಧಿಕಾರವನ್ನು ಚಲಾಯಿಸಲು ಅವರಿಗೆ ಅಧಿಕಾರವಿದೆ ರಾಜ್ಯಸಭೆಯವರು ನೀಡಿರುವ ಸ್ಪಷ್ಟೀಕರಣವೂ ಅದನ್ನು ಪುಷ್ಟೀಕರಿಸುತ್ತದೆ ಈಗ ಆ ಸದನದಲ್ಲಿ ಆತ ಅನಧಿಕೃತ, ನಾವು ಒಪ್ಪುವುದಿಲ್ಲ ಎಂದು ವಿರೋಧ ಪಕ್ಷದ ಸದಸ್ಯರು ದಿನವೂ ಅಡ್ಡಿ ಮಾಡುತ್ತಿದ್ದಾರೆ ಜೊತೆಜೊತೆಗೇ ಮಾನ್ಯ ರಾಜ್ಯಪಾಲರಿಗೆ 2-

ಮನವಿಪತ್ರಗಳನ್ನು ಅರ್ಪಿಸಿದ್ದಾರೆ ಆ ಎರಡಕ್ಕೂ ನಾವು ಉತ್ತರ ಕೊಟ್ಟಿದ್ದೇವೆ ಅದರ ಸಾಧಕಬಾಧಕಗಳನ್ನು ರಾಜ್ಯಪಾಲರು ಪರಿಶೀಲಿಸಿದ್ದಾರೆ ನಮಗೆ ಅವರಿಂದ ಯಾವ ನಿರ್ದೇಶನವೂ ಬಂದಿಲ್ಲ

ಮತ್ತು ಯಾವುದೇ ತರಹದ ನಿರ್ದೇಶನಗಳನ್ನು ಕೊಡಬೇಕೆಂದು ಹೇಳಿ ಸರ್ಕಾರಕ್ಕೆ ಹೇಳಿದ ಬಗ್ಗೆ ರಾಜ್ಯಪಾಲರಿಂದ ನಮಗೆ ಯಾವುದೇ ತರಹದ ನಿರ್ದೇಶನ ಕೂಡ ಬಂದಿಲ್ಲ ಆ ಹಿನ್ನೆಲೆಯಲ್ಲಿ ನಾವು ತೆಗೆದುಕೊಂಡಿರುವ ನಿರ್ಣಯವು ಈ ನಿಮಿಷಕ್ಕೂ ಕೂಡ ಕಾನೂನುಬದ್ಧವಾಗಿರತಕ್ಕದ್ದು, ನಿಯಮಾವಳಿಗಳಿಗೆ ಅನುಗುಣವಾಗಿರತಕ್ಕದ್ದು ಹಾಗೆ ಇರುವುದಾಗಿದ್ದರೆ ಎಂ ಆರ್ ತಂಗಾ ಅವರು ಸುದರ್ಶನ್ ಅವರ ಕಾಲದಲ್ಲಿ ದೈನಂದಿನ ಕಾರ್ಯಕ್ರಮ ಮಾತ್ರ ಮಾಡಬೇಕು, ಚುನಾವಣೆ ಪ್ರಕ್ರಿಯೆ ಮಾಡತಕ್ಕ ಅಧಿಕಾರ ಏಕೆ ಅವರಿಗೆ ಇದೆ ಎಂದು ಹೇಳಿ ಹೇಳಬಹುದಾಗಿತ್ತಲ್ಲ, ಆದರೆ 17 3 2005 ರಂದು ಅವರು ಚುನಾವಣೆಯನ್ನು ಕೂಡ ನಡೆಸುತ್ತಾರೆ ಬರೀ ಕಾರ್ಯಕಲಾಪ ಮಾಡತಕ್ಕದ್ದಲ್ಲ, ಚುನಾವಣೆಯನ್ನು ಕೂಡ ಅವರು ನಡೆಸುತ್ತಾರೆ ನೀವು ಅನ್ನಬಹುದು ಚುನಾವಣೆಯು ಕೂಡ ದೈನಂದಿನ ಕಾರ್ಯಕ್ರಮ ಆದ್ದರಿಂದ ನಡೆಸಿರಬಹುದು ಎನ್ನುವ ಮಾತನ್ನು ಹೇಳಬಹುದು ಅದು ತಮಗೆ ಬಿಟ್ಟಿರುವ ವಿಷಯಗಳೇ ಆಗಿರುತ್ತದೆ ಈ ಹಿನ್ನೆಲೆಯಲ್ಲಿ ನಾವೇನು ನಿರ್ಣಯವನ್ನು ಕೈಗೊಂಡಿರತಕ್ಕದ್ದು, ಅದು ಕಾನೂನುಬದ್ಧವಾಗಿರತಕ್ಕದ್ದು ಅದರ ಜೊತೆಗೆ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಜನಗಳನ್ನು ಹೊರಗಡೆಗೆ ಹಾಕಿದ್ದಾರೆ, ಅನಧಿಕೃತವಾದ ಚೇರ್ಮನ್ ಆತ ಎನ್ನುವ ಮಾತೇನು ಇದೆ, ಅದು ಅವರೇನೆ ಪರಿಭಾವಿಸಿಕೊಂಡಿರಲಿ, ಅದನ್ನು ಅವರು ಸ್ಥಾನಮಾನದಿಂದ ಸಭಾಪತಿಗಳಾಗಿ ತೆಗೆದುಕೊಂಡಿರುವ ನಿರ್ಣಯವನ್ನು ನಾವು ಕೆಳಮನೆಯವರು ಚರ್ಚೆ ಮಾಡುವುದಕ್ಕೆ ಅಧಿಕಾರ ಇಲ್ಲ ನಿಯಮ 327 ರ ಕೆಳಗೆ ಅವರು ತಮ್ಮ ಅಧಿಕಾರವನ್ನು ಉಪಯೋಗಿಸಿಕೊಂಡು ಅವರಿಗೆ ಅಡಚಣೆ ಉಂಟುಮಾಡತಕ್ಕವರ ಮೇಲೆ ಕ್ರಮವನ್ನು ಅವರು ಕೈಗೊಂಡಿದ್ದಾರೆ ಅದನ್ನು ನಾವು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ ಆದ್ದರಿಂದ ಪ್ರಥಮವಾಗಿ ಇದಕ್ಕೆ ಒಂದು ಮಾರ್ಗದರ್ಶನ ಸಿಗಲಿ ಎನ್ನುವ ಕಾರಣಕ್ಕಾಗಿ ತಾವು ಒಪ್ಪಿದ್ದೀರಿ ಆ ಕಾರಣಕ್ಕಾಗಿ ಚರ್ಚೆ ಬಹಳ ದೀರ್ಘವಾಗಿ ನಡೆದುಹೋಗಿದೆ ಈ ದೀರ್ಘವಾದ ಚರ್ಚೆಯಲ್ಲಿ Parliamentary etiquetteನಲ್ಲಿ ಅಲ್ಲಿ ನಡೆಯತಕ್ಕ ವಿಚಾರಗಳನ್ನು

ಇಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಇದು ಒಂದು ಎರಡನೆಯದು ಶೂನ್ಯ ವೇಳೆಯಲ್ಲಿ ಅನೇಕ ಚರ್ಚೆಗಳನ್ನು ಮಾಡುವುದಕ್ಕಾಗುವುದಿಲ್ಲ ಮತ್ತೆ ಈಗ ಸರ್ಕಾರ ಉತ್ತರವನ್ನು ಕೊಟ್ಟಮೇಲೆ ಅದಕ್ಕೆ ಸ್ಪಷ್ಟೀಕರಣ ಕೇಳತಕ್ಕದ್ದೂ ಕೂಡ ಇಲ್ಲ ಆದರೆ ಇದರಲ್ಲಿ ತಾವು ಏನಾದರೂ ಕೂಡ ಅನೇಕ ವಿಷಯಗಳ ಬಗ್ಗೆ ಸ್ವಲ್ಪ ಮಟ್ಟಿಗೆ academic ಆಗಿ ಚರ್ಚೆಯಾಗಲಿ ಎಂದು ಹೇಳಿ ಪರಿಭಾವಿಸಿದರೆ ತಾವು ಏನು ಉತ್ತರ ಕೊಟ್ಟರೂ ಕೂಡ ನಾವು ಸ್ಪಷ್ಟೀಕರಣ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ ಈಗ ತೆಗೆದುಕೊಂಡಿರುವ ನಿರ್ಣಯ ಕಾನೂನಿಗೆ ಅನುಗುಣವಾದ ನಿರ್ಣಯವಾಗಿದೆಯೇ ವಿನಹಾ ದಯವಿಟ್ಟು ಇದರ ಬಗ್ಗೆ ನಾನು ಬೇರೆ ಪ್ರಯತ್ನವನ್ನು ಕೂಡ ಮಾಡಿದ್ದೆ ಅದರಲ್ಲಿ ವಿರೋಧ ಪಕ್ಷದ ನಾಯಕರಾದ ಹೆಚ್ ಕೆ ಪಾಟೀಲರ ಹತ್ತಿರ ಮಾತನಾಡಿದ ಮೇಲೆ, ಇಲ್ಲ, ತಾವು ನಮ್ಮ ಹಿರಿಯರಾದ ಧರ್ಮಸಿಂಗ್ ಅವರು ಮತ್ತು ನಮ್ಮ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರ ಜೊತೆಗೆ ಈ ವಿಷಯವನ್ನು ಚರ್ಚೆ ಮಾಡಿ ಈ stalemate ನ್ನು ಬಗೆಹರಿಸಬೇಕೆಂದು ಮಾನ್ಯ ಹೆಚ್ ಕೆ ಪಾಟೀಲರು ಕೊಟ್ಟಂಥ ಸಲಹೆ ಮೇಲೆ ಮಧ್ಯದಲ್ಲಿ adjournment motion ಮತ್ತೊಂದು ಇದ್ದುದರಿಂದ ಅವರಿಗೆ ಸಮಯಾವಕಾಶವಿರಲಿಲ್ಲ ಆದರೆ ಮೊನ್ನೆ ಈ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರಾದ ಹೆಚ್ ಕೆ ಪಾಟೀಲರು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಧರ್ಮಸಿಂಗ್ ಅವರ ಜೊತೆಗೆ ಮುಖ್ಯಮಂತ್ರಿಗಳನ್ನು ನಾವು ಸಭಾನಾಯಕರನ್ನು ಎಲ್ಲರೂ ಕರೆದು ಮಾತನಾಡಿದ ಸಂದರ್ಭದಲ್ಲಿ ಒಂದು ಉತ್ತಮವಾದ ಸಲಹೆಯನ್ನು ಮಲ್ಲಿಕಾರ್ಜುನ ಖರ್ಗೆಯವರು ಕೊಟ್ಟರು ನಿಮಗೆ majority ಇದೆ, ಆಗ ನೀವು ಮಾಡಿಕೊಳ್ಳಿ ನಮಗೆ majority ಇದ್ದಾಗ ನಾವು ಮಾಡಿಕೊಳ್ಳುತ್ತೇವೆ ಈ ತರಹದಲ್ಲಿ ಯೋಚನೆ ಮಾಡತಕ್ಕದ್ದು ಎಲ್ಲ ತರಹದಲ್ಲು ಒಳ್ಳೆಯದೆ ಎಂದು ಹೇಳಿ ಆಯಿತು ಆಗ ನಾನು ಇದರ ಹಿಂದೆ ಕೂಡ ಇದರ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ ಯಾರು ಈ ಸಂದರ್ಭದಲ್ಲಿ ಜೂನ್ ತಿಂಗಳೊಳಗಾಗಿ ಅವರ ಸದಸ್ಯತ್ವ ಮುಗಿದುಹೋಗುತ್ತದೆ, ಅವರನ್ನು ನಾವೇಕೆ ಆಯ್ಕೆ ಮಾಡಬಾರದು ಎನ್ನುವ ವಿಚಾರಗಳನ್ನು ಕೂಡ ಚರ್ಚೆ ಮಾಡಿ ಅದನ್ನು ಮಾತನಾಡಿದೆವು ಅದಕ್ಕೆ ಒಂದು ಸಕಾರಾತ್ಮಕವಾದಂಥ, ಒಂದು ರಚನಾತ್ಮಕವಾದ ಸಲಹೆಯನ್ನು ಅವರು ಕೊಟ್ಟರು ಕೊಟ್ಟಮೇಲೆ ಅದರ ಬಗ್ಗೆ ನಾವು ಚರ್ಚೆ ಮಾಡಿ ನಿರ್ಣಯ ಮಾಡುತ್ತೇವೆಂದು ಮುಖ್ಯಮಂತ್ರಿಗಳು

ಹೇಳಿದರು ಇವತ್ತು ಕೂಡ ಆ ವಿಚಾರದಲ್ಲಿ ಚರ್ಚೆಯಾಗುತ್ತದೆ ನಮ್ಮಲ್ಲೇ ಒಂದು ಒಮ್ಮತದ ಅಭಿಪ್ರಾಯಕ್ಕೆ ಬರಲಿಕ್ಕೆ ಸಾಧ್ಯವಾಗಿಲ್ಲ ಈಗಲೂ ಕೂಡ ಆ ಅಧಿಕಾರವನ್ನು ಉಪಯೋಗಿಸಬೇಕೆನ್ನುವುದರ ಬಗ್ಗೆ ಯೋಚನೆ ಮಾಡಿದ್ದೇವೆ ಆಗ ಮತ್ತೊಂದು ಸಮಸ್ಯೆ ಉದ್ಭವವಾಯಿತು ನಾವು ಅದಕ್ಕೆ ಒಪ್ಪಿದರೆ ಚುನಾವಣೆಯನ್ನು ನಡೆಸುವವರು ಯಾರು ಎನ್ನತಕ್ಕ ಪ್ರಶ್ನೆ ಬಂತು ಅಲ್ಲೇ ವಿರೋಧ ಪಕ್ಷದ ನಾಯಕರು ಮತ್ತು ಅಲ್ಲೇ ಚುನಾವಣೆಯನ್ನು ಯಾರು ನಡೆಸಬೇಕು ಎಂದು ಬಂತು ಚುನಾವಣೆಯನ್ನು ತಿಪ್ಪಣ್ಣನವರೇ ನಡೆಸಬೇಕು, ಬೇರೆಯವರು ನಡೆಸುವುದಕ್ಕಾಗುವುದಿಲ್ಲ ಎಂದು ಹೇಳಿದೆವು ಆಗ ಮತ್ತೆ ಮಲ್ಲಿಕಾರ್ಜುನ ಖರ್ಗೆಯವರು ಒಂದು ರಚನಾತ್ಮಕವಾದ ಸಲಹೆಯನ್ನು ಕೊಟ್ಟರು ಇದು ಮುಖ್ಯವಾದ ವಿವಾದ ಇರತಕ್ಕದ್ದು ಸಭಾಪತಿಗಳ ಆಯ್ಕೆ ವಿಚಾರದಲ್ಲಿ ಆ ನಿಯಮಾವಳಿಗಳು ಅಡ್ಡಿ ಬರುತ್ತವೆಂದರೆ ಆ ನಿಯಮಾವಳಿಗಳನ್ನು ಹೇಗೆ ಸರಿಪಡಿಸಬೇಕು ಎನ್ನುವ ಬಗ್ಗೆ ಚರ್ಚೆ ಮಾಡೋಣ ನೀವು ಮೊದಲು ಚುನಾವಣೆ ಪ್ರಕ್ರಿಯೆಗಳಿಗೆ ನಿಯಮಾವಳಿಗಳ ಪ್ರಕಾರ ತಯಾರಾಗಿ ಬನ್ನಿ, ಅದಾದಮೇಲೆ ಕೆಲವು impediments ಏನಾದರೂ ಇದ್ದರೆ we can work on those impediments ಎನ್ನತಕ್ಕ ಮಾತನ್ನು ಹೇಳಿದರು ಇನ್ನುವರೆಗೆ ಅದರ ಬಗ್ಗೆ ನಿರ್ಧಾರವಾಗಿಲ್ಲ ಅದನ್ನು ನಾನು ಸದನದ ಗಮನಕ್ಕೆ ತರತಕ್ಕ ವಿಚಾರ ನಾವು ತೆಗೆದುಕೊಂಡಿರತಕ್ಕ ನಿರ್ಣಯ ಕಾನೂನುಬದ್ಧವಾಗಿದೆ ಹಾಗೇನಾದರೂ ಕಾನೂನು ರಹಿತವಾಗಿ, ಕಾನೂನು ಬಾಹಿರವಾಗಿ ಮಾಡಿದ್ದರೆ ಇದರ ಬಗ್ಗೆ ಈಗಾಗಲೇ ರಾಜ್ಯಪಾಲರು ನಮಗೆ ಮಾರ್ಗದರ್ಶನವನ್ನು ಮಾಡುತ್ತಿದ್ದರು ಅದರಿಂದ ಅವರನ್ನು ಇದರಲ್ಲಿ ಎಳೆದು ತರುವ ಅಗತ್ಯ ಕೂಡ ಇಲ್ಲ ನಾವು ತೆಗೆದುಕೊಂಡಿರತಕ್ಕ ನಿರ್ಣಯ ಕಾನೂನುಬದ್ಧವಾಗಿರುವುದರಿಂದ ವಿರೋಧ ಪಕ್ಷದ ನಾಯಕರಾದ ಮಾನ್ಯ ಹೆಚ್ ಕೆ ಪಾಟೀಲರು ಮತ್ತು ಅಲ್ಲಿರುವಂಥ ಸದಸ್ಯರು ದಯವಿಟ್ಟು ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಹಕಾರವನ್ನು ಕೊಡಬೇಕೆಂದು ಹೇಳಿ ಈ ಸದನದ ಮೂಲಕ ಅವರಿಗೆ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಇದು ಹೇಗೆಂದರೆ ' ಪರದೇಶಿ ಮಗನಿಗೆ ನಾನೆ ನಿಮ್ಮಪ್ಪ ' ಎಂದು ಹೇಳಿ ತಿಪ್ಪಣ್ಣನವರು ಬಂದ ಹಾಗೆ ಆಯಿತು ಇವರು ಒಪ್ಪಿಕೊಂಡ ಹಾಗೆ ಆಯಿತು

ಶ್ರೀ ಕೆ ಆರ್ ರಮೇಶ್‌ಕುಮಾರ್ ನಾನು ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ ತಾವು ಅಭಿಪ್ರಾಯಪಟ್ಟಂತೆ ಹಿರಿಯ ನಾಯಕರುಗಳೆಲ್ಲ ಸೇರಿ ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿದುಕೊಳ್ಳುವುದಾದರೆ ಸಮಸ್ಯೆ ನಿವಾರಣೆಯಾಗುತ್ತದೆ ನಮಗೂ ಕೂಡ ಬಹಳ ಸಂತೋಷ ಆದರೆ ತಾವು ರಾಜ್ಯಸಭೆಯಿಂದ ಬಂದಂತಹ ಅಭಿಪ್ರಾಯವನ್ನು ಉಲ್ಲೇಖ ಮಾಡಿದಿರಿ ರೂಲ್ಸ್ ಓದಿದಿರಿ ಕಾನೂನು ಪ್ರಕಾರ ನಾವು ಮಾಡಿರುವುದು ಸರಿ ಇದೆ ಎಂದು stand ನ್ನು ತಾವು ತೆಗೆದುಕೊಂಡಿದ್ದೀರಿ ನಾನು ಇಷ್ಟನ್ನೇ ತಮಗೆ ಹೇಳುತ್ತೇನೆ ರಾಜ್ಯಪಾಲರ ಭಾಷಣವಾದ ಮೇಲೆ ತಕ್ಷಣದ ಕೆಲಸ ರಾಜ್ಯಪಾಲರು ಇಲ್ಲಿಂದ ನಿರ್ಗಮಿಸಿದ ಮೇಲೆ ಎರಡೂ ಸದನದ ಸಭಾಪತಿಗಳು ಮತ್ತು ಸಭಾಧ್ಯಕ್ಷರು ಆಯಾ business advisory committee ಯನ್ನು ಕರೆಯಬೇಕಾಗುತ್ತದೆ ಏಕೆಂದರೆ business schedule ಮಾಡಬೇಕಲ್ಲ Without business ಸುಮ್ಮನೆ ಸದನ ಕರೆಯುವುದಕ್ಕಾಗುವುದಿಲ್ಲ ಎಷ್ಟು ದಿವಸ ಇರಬೇಕು? ಯಾವ bills ಗಳಿದ್ದಾವೆ? ಯಾವುದು lapse ಆಗಿದ್ದಾವೆ, proprgation ಆಗಿವೆ, ಇವೆಲ್ಲ ಚರ್ಚೆ ಆಗಬೇಕು ನೀವು Rules of Procedure conduct of business ನ್ನು ನೋಡಿ Rule 221 Business Advisory Committee

Rule 222 Constitution of the Committee.

"A Business Advisory Committee shall be constituted at the commencement of the Council or from time to time and shall consist of the Chairman, who shall be the Chairman of the Committee and six other members, who shall be nominated by the Chairman "

How can a panel Chairman who is Vice Chairman conduct the Business Advisory Committee Meeting? ನೀವು Business Advisory Committee meetingನ್ನೇ ಮಾಡದೆ Business Schedule ಮಾಡದೆ ಸದನವನ್ನು ಹೇಗೆ ನಡೆಸಿಕೊಂಡು ಹೋಗುತ್ತೀರಿ? I am just seeking a very simple clarification ಅದರ ಜೊತೆಗೆ ಒಂದೇ ಒಂದು ಘಟನೆ ಮಾನ್ಯ

ಪ್ರಕಾಶ್ ರವರ ಗಮನಕ್ಕೆ ತಂದುಬಿಡುತ್ತೇನೆ Great Britain ನಲ್ಲಿ ಬೆಂಜಮಿನ್ ಡಿಸ್ರೇಲಿಯವರು Prime Minister ಆಗಿದ್ದರು ಅವರಿಗೆ ಕೇವಲ ಒಂದು ಸದಸ್ಯತ್ವದ ಬಹುಮತ ಪಾರ್ಲಿಮೆಂಟ್ ನಲ್ಲಿ During the discussion of a particular bill, Speaker absent ಇರುತ್ತಾರೆ Deputy Speaker absent ಇರುತ್ತಾರೆ Opposition Partyಗೆ ಸೇರಿದ ಒಬ್ಬ ಪ್ಯಾನಲ್ ಚೇರ್ಮನ್ preside ಮಾಡಿರುತ್ತಾರೆ House ನ numerical strength ಹೇಗೆ ಇರುತ್ತೆ ಎಂದರೆ ಅದು Money bill If it was put to vote, casting vote £ÀAß panel Chairman ತನ್ನ ಪಾರ್ಟಿ loyalties ಪ್ರಕಾರ ಮಾಡಿದ್ದಿದ್ದರೆ ಬೆಂಜಮಿನ್ ಡಿಸ್ರೇಲಿಯವರ ಸರ್ಕಾರ ಉರುಳಿ ಹೋಗುತ್ತಿತ್ತು Panel Chairmanನಲ್ಲಿ I think ಓಕ್ಸ್ ಎಂದು ಕಾಣುತ್ತದೆ I don't remember the name properly Sudden ಆಗಿ refer ಮಾಡುವುದಕ್ಕೆ ಆಗುತ್ತಿಲ್ಲ ಆತ Panel Chairman ಆಗಿ ಏನು ಹೇಳುತ್ತಾನೆ, Great Britain ದೇಶದ ಸಮಸ್ತ ಜನ ಡಿಸ್ರೇಲಿ ಅವರ ಪರವಾಗಿ ತಮ್ಮ ಅಭಿಮತವನ್ನು ವ್ಯಕ್ತಮಾಡಿದ್ದಾರೆ, ಈ ಸರ್ಕಾರ ರಚನೆಯಾಗಿದೆ, ತಾಂತ್ರಿಕವಾಗಿ ಈ ಸಂದರ್ಭದ ದುರುಪಯೋಗವನ್ನು ಮಾಡಿಕೊಂಡು ಪಕ್ಷದ loyalties ಮೇಲೆ ಹೋಗಿ ನಾನು stability ಗೆ ತೊಂದರೆ ಮಾಡುವುದಕ್ಕೆ ನಾನು ತಯಾರಾಗಿಲ್ಲ Democratic traditions ನ್ನು ನಾನು ಕಾಪಾಡಬೇಕಾಗಿದೆ ಆದ್ದರಿಂದ I cast my vote with the Government ಎಂದು ಹೇಳಿ ಸರ್ಕಾರವನ್ನು ಆತ survive ಮಾಡುತ್ತಾನೆ ಆ caliber ನ persons ಆ seat ಗೆ ಹೋಗಬೇಕಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ (ಕಾನೂನು ಮತ್ತು ಸಂಸದೀಯ, ಗೃಹ ಸಚಿವರು) ಮಾನ್ಯ ಅಧ್ಯಕ್ಷರೇ, ತಾವು ಹೇಳಿದಂಥದ್ದು ಬಹಳ ಮುಖ್ಯವಾದ ವಿಷಯ Money bills ವಿಚಾರದಲ್ಲಿ ಬಂದಾಗ ಸರ್ಕಾರವನ್ನು ಜನತೆ ಆರಿಸಿ ಕಳುಹಿಸಿ ಬಹುಮತವನ್ನು ಕೊಟ್ಟಾಗ ಅದನ್ನು ಅಲ್ಲಗಳೆಯತಕ್ಕದ್ದು ಸರಿಯಾದುದಲ್ಲ ಎಂದು ಇದ್ದು ವಿಧಾನ ಪರಿಷತ್ತಿನಲ್ಲಿ ಈ ವಿಚಾರದಲ್ಲಿ ನಮ್ಮಲ್ಲಿ ಅನೂಚಾನವಾಗಿ ನಡೆದು ಬಂದಿರುವ ಸಂಪ್ರದಾಯಕ್ಕೆ ವಿರುದ್ದವಾಗಿ ಹಿಂದೆ ಇಲ್ಲಿ ಪಾಸ್ ಮಾಡಿದ ಮನಿ ಬಿಲ್ಲನ್ನು ಅಲ್ಲಿ ಪರಷತ್ತಿನಲ್ಲಿ defeat ಮಾಡಿದರು ಇದು ಯಾವುದೇ ಕಾಲಕ್ಕೆ ಯಾವ ಕಾಲಕ್ಕೂ ಆಗಿರಲಿಲ್ಲ ಅವರಿಗೆ ಗೊತ್ತಿದೆ 14 ದಿವಸದೊಳಗಾಗಿ ಮತ್ತೆ ಅದು ವಾಪಸ್ ಬರುತ್ತದೆ, ಈ ಸದನದಿಂದ ಮತ್ತೆ

ಅದು ಊರ್ಜಿತವಾಗುತ್ತದೆ ಎಂದು ಹೇಳಿ ಅದು ಗೊತ್ತಿದ್ದೂ ಕೂಡ ಬಹುಮತ ಇದೆ ಎನ್ನುವಂಥ ಒಂದೇ ದಾಷ್ಟ್ರ್ಯತೆಯ ಕಾರಣಕ್ಕಾಗಿ ಈ ಒಂದು ತಮ್ಮ ತತ್ವವೇನನ್ನು ಪ್ರತಿಪಾದನೆ ಮಾಡಿದಿರಿ, ಅದನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕಾಗಿತ್ತು ಅವರು ಅದನ್ನು ಗಮನದಲ್ಲಿಟ್ಟುಕೊಳ್ಳದೇ ಇದೇ ಸದನ ನಡೆಯತಕ್ಕ ಸಂದರ್ಭದಲ್ಲಿ defeat ಮಾಡಿದರು ಇದು ಏನಾಗಿದೆ ಎಂದರೆ ನಮ್ಮಲ್ಲಿ ಪ್ರಭುತ್ವವೇ ಇಲ್ಲವೆಂದು ಕಾಣುತ್ತದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಇದು ಬಹಳ ಒಳ್ಳೆಯದಾಯಿತು ಯಾವ ಕಡೆಗೆ ಇದ್ದರೂ ಕೂಡ ಇಂತಹವು they have become matters for guidance Cromwellನ beheading ನಿಂದ ಹಿಡಿದು Parliamentary Democracy, Great Britain ನಲ್ಲಿ ಇವತ್ತಿನ ಹಂತ ತಲುಪಬೇಕಾಗಿದ್ದರೆ ಅಥವಾ ಹೆಣ್ಣು ಮಕ್ಕಳಿಗೆ ಓಟು ಕೊಡುವ ಹಕ್ಕನ್ನು ಅವರಿಗೆ ಕೊಡಬೇಕಾಗಿದ್ದರೆ, ಅವರು ಸುಮಾರು 350 ವರ್ಷಗಳು ಪ್ರಯಾಣ ಮಾಡಿದ್ದಾರೆ It did not happen over night Furge ನಿಮಗೆ ಗೊತ್ತಿದೆ Parliament ಹೇಗೆ ಆಯಿತು ಎಂದು ಗೊತ್ತಿದೆ Parliament ಒಳಗೆ ಏನಾಯಿತು ಎಂದು ಗೊತ್ತಿದೆ Let us not go into all those things ನಾನು ತಮಗೆ ಏನು ಹೇಳುತ್ತೇನೆ ಎಂದರೆ Business Advisory Committee Meeting ಆಗದೇ Business ಅನ್ನು schedule ಮಾಡದೇ Council ಅನ್ನು ನೀವು summon ಮಾಡಿ ಏನು ಮಾಡುತ್ತೀರಿ? Business Advisory Committee Meeting ಅನ್ನು preside ಮಾಡುವುದಕ್ಕೆ ಅವರಿಗೆ ನೀವೇ ಉಲ್ಲೇಖ ಮಾಡಿದ Rules ಪ್ರಕಾರ ಅಧಿಕಾರ ಇಲ್ಲ He is not authorized to conduct the Business Advisory Committee Meeting, which means to say you confer him, yes I concede we confer him all the privileges and rights that a chair -person enjoys while he sits there in the chair and executes his authority, presides over the House But the authority of a Chairman does not get transferred to him, does not arrogated to him outside the chair We are now talking about his locus standi outside the chair, not sitting and

conductıng the proceedıngs of the House Therefore, these are two dıstınctly dıfferent thıngs

ಅವರು ಛೇರ್‌ನಲ್ಲಿ ಕುಳಿತು ಕಲಾಪಗಳನ್ನು ನಡೆಸತಕ್ಕದ್ದು, ಆ ವೇಳೆಗೆ ಅವರಿಗೆ ಸಿಗತಕ್ಕ ಗೌರವ, ಸೌಲಭ್ಯಗಳು, ಇದನ್ನು ನಾವು ಪ್ರಶ್ನೆ ಮಾಡುತ್ತಿಲ್ಲ ಅವು ಪ್ರಶ್ನಾತೀತ ಆದರೆ ಛೇರ್ ನ ಹೊರಗಾಗಿ

ಅಧ್ಯಕ್ಷರು ಆಯಿತು ಈಗ

ಶ್ರೀ ಕೆ ಆರ್ ರಮೇಶ್‌ಕುಮಾರ್ ಅಷ್ಟೇ ಇನ್ನೇನು ಇದೆ ಸಾರ್? ಎಷ್ಟಾದರೂ ಅದನ್ನೇ ಹೇಳಬೇಕು ಆದ್ದರಿಂದ ದಯಮಾಡಿ ನಾನೇನು ಹೇಳುತ್ತೇನೆ ಅಂದರೆ ಕಾನೂನು ಪ್ರಕಾರ ಎಂದು ಹೇಳತಕ್ಕದ್ದನ್ನು ಒಪ್ಪಲಿಕ್ಕೆ ಸಾಧ್ಯ ಇಲ್ಲ Amıcable settlement ಅಥವಾ ಇನ್ನೊಂದು ಆಗುವುದಾದರೆ Alrıght, ಇದೊಂದು ಪ್ರಿಸಿಡೆಂಟ್ ಆಗುತ್ತದೆ ಮುಂದೆ ಇಂತಹ crısıs ಉದ್ಭವ ಆದಾಗ ಅದಕ್ಕೆ ಇದೊಂದು ಮಾರ್ಗದರ್ಶನ ಆಗುತ್ತಲ್ಲ ಆದರೆ Legally I thınk they are at fault

ಅಧ್ಯಕ್ಷರು. ಆಯಿತು ಈಗ ಗಮನ ಸೆಳೆಯುವ ಸೂಚನೆಗೆ ಹೋಗೋಣ

ಶ್ರೀ ಕೆ ಆರ್ ರಮೇಶ್‌ಕುಮಾರ್ ಇದರಲ್ಲಿ ಕೂಡ He has been more than kınd enough , ಇಲ್ಲದೇ ಇದ್ದರೆ ಮುಗಿಸೋಣ

ಅಧ್ಯಕ್ಷರು Let us go to the next subject

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ ಮಾನ್ಯ ಅಧ್ಯಕ್ಷರೇ, ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನಾ ಕಾರ್ಯಕ್ರಮಕ್ಕೆ ಹಣ ಬಿಡುಗಡೆಯಾಗದಿರುವುದರಿಂದ ತುಮಕೂರು ಜಿಲ್ಲೆಯ ನೇಕಾರರಿಗೆ ಉಂಟಾಗಿರುವ ತೊಂದರೆಯ ಬಗ್ಗೆ - ಮಾನ್ಯ ಜವಳಿ ಸಚಿವರ ಗಮನವನ್ನು ಸೆಳೆಯುತ್ತೇನೆ

ಶ್ರೀ ಎನ್ ಧರ್ಮಸಿಂಗ್. ಮಾನ್ಯ ರಾಜಣ್ಣನವರೇ, ಏಕೆ ತರಾತುರಿ?

ಶ್ರೀ ಎನ್ ರಾಜಣ್ಣ ತರಾತುರಿ ಅಲ್ಲ ಸಾರ್

ಶ್ರೀ ಎನ್ ಧರ್ಮಸಿಂಗ್ ಈ ಪ್ರಶ್ನೆ ಮುಗಿದಿಲ್ಲ ಅಧ್ಯಕ್ಷರೇ

ಶ್ರೀ ಎನ್ ರಾಜಣ್ಣ ನಾನು ಗಮನ ಸೆಳೆದಿದ್ದೇನೆ

ಶ್ರೀ ಎನ್ ಧರ್ಮಸಿಂಗ್ ಈಗಾಗಲೇ ಬಹಳ ಸುತ್ತಿ ಬಳಸಿ

ಅಧ್ಯಕ್ಷರು. ಅವರು ಉತ್ತರ ಕೊಟ್ಟಿದ್ದಾರೆ

ಶ್ರೀ ಎನ್ ಧರ್ಮಸಿಂಗ್ ಇಲ್ಲ, ಇಲ್ಲ ಅವರು ಸುತ್ತಿ ಬಳಸಿ ಹೇಳಿದ್ದಾರೆ ಇವತ್ತು ಮಾನ್ಯ ಎಂ ಪಿ ಪ್ರಕಾಶ್ ಅವರು ಹೇಳಿದ್ದಾರೆ ಇದು ಸಮಂಜಸವಾದ ಉತ್ತರ ಅಲ್ಲ ಅವರು ಸಂಸದೀಯ ಪಟುಗಳು ಅವರು ಬಹಳ ಸುತ್ತಿ ಬಳಸಿ ಹೇಳಿದ್ದಾರೆ ಹೇಳಿದ್ದಾರೆ ಏನು ನಾವು ವಿರೋಧ ಪ ಕ್ಷದಲ್ಲಿ ಕುಳಿತು , ಇವತ್ತು ವಿಧಾನ ಪರಿಷತ್ತಿನಲ್ಲಿ ಏನೊಂದು ಘಟನೆ ನಡೆದಿದೆ? ಅವರು ಹೇಳಿದರು ಜೀರೋ ಅವರ್ ನಲ್ಲಿ ಎತ್ತಿರತಕ್ಕದ್ದು ಅಲ್ಲ ಈಗಾಗಲೇ ನಾವು ಮಾನ್ಯ ತಿಪ್ಪಣ್ಣನವರಿಗೆ ಸಭಾಪತಿ ಎಂದು ಹೇಳಿ ಅವರನ್ನು ಸ್ವೀಕಾರ ಮಾಡಿಲ್ಲ 9 ದಿನಗಳ ಕಾಲ ಕಲಾಪ ನಡೆಯಲಿಲ್ಲ ಯಾರಿಗೆ 9 ದಿನಗಳ ಕಾಲ ಕಲಾಪ ನಡೆಸತಕ್ಕ ಶಕ್ತಿ ಇಲ್ಲವೋ, ನಮ್ಮದು ಒಂದು ಮೆಜಾರಿಟಿ ಇದೆ ಇವತ್ತು ಪೀರದ ಮೇಲೆ ಬಂದು ಕುಳಿತು ನೇಮ್ ಮಾಡಿ, ಯಾರಿಗೋ ಫೋನ್ ಮಾಡಿ, ಅವರ ಮುಖಾಂತರ ಆದೇಶವನ್ನು ತೆಗೆದುಕೊಂಡು ಇವತ್ತು ಎಲ್ಲಾ ಕಡೆಗೆ suspend ಮಾಡತಕ್ಕ ರೀತಿ ಮೊಟ್ಟಮೊದಲನೆಯದಾಗಿ ವಿಧಾನ ಪರಿಷತ್ತಿನಲ್ಲಿ ನಡೆದಿದೆ ಅದಕ್ಕೆ ನಾವು ನೇರವಾಗಿ ಏನು ಕೇಳುತ್ತೇವೆ ಎಂದರೆ ಅವರನ್ನು ಸಭಾಪತಿ ಎಂದು ಒಪ್ಪಲಿಲ್ಲ 9 ದಿನಗಳ ಕಾಲ ಕಾರ್ಯಕಲಾಪಗಳು ನಡೆಯಲಿಲ್ಲ ಇವತ್ತು ಏಕಾಏಕಿ ಬಂದು ಎಲ್ಲರನ್ನೂ suspend ಮಾಡತಕ್ಕದ್ದು ಏನಿದೆ? ಇದು ಸರಿಯಾದುದು ಅಲ್ಲ ಅದಕ್ಕೆ ತಾವು ಉತ್ತರ ಕೊಡಲಿಲ್ಲ ಇವತ್ತು ಸದನ ನಡೆಯುತ್ತಿದೆ ಸದನ ನಡೆಯತಕ್ಕ ಕಾಲದಲ್ಲಿ ಈ ರೀತಿಯಾಗಿ ಉದ್ಧಟತನ ವರ್ತನೆ, ಈ ಸರ್ಕಾರದ ಕಾರ್ಯ ವೈಖರಿ ಏನು ಇದೆ? ಇವತ್ತು ವಿರೋಧ ಪಕ್ಷದವರನ್ನು ಶಮನ ಗೊಳಿಸತಕ್ಕ ರೀತಿಯಲ್ಲಿ ಏನು ಇವತ್ತು ಘಟನೆ ನಡೆದಿದೆ? ಕರ್ನಾಟಕ ಜನತೆ ತಮಗೆ ಇವತ್ತು ಒಪ್ಪಿಗೆ ಕೊಡುತ್ತಿಲ್ಲ ಅದಕ್ಕೆ ನಾವೆಲ್ಲರೂ ಇದಕ್ಕೆ ಪ್ರತಿಭಟನೆ ಮಾಡುತ್ತೇವೆ ಕಾರ್ಯಕಲಾಪ ಗಳು ಇವತ್ತು ನಡೆಯಲಿ ಆದರೆ ನಾವೇನಪ್ಪ ಅಂದರೆ ಇವತ್ತಿನ ತಮ್ಮ ಉತ್ತರದಿಂದ ಪ್ರತಿಭಟನೆ ಮಾಡಿ ನಾವು ಬಾವಿಯಲ್ಲಿ ಕುಳಿತುಕೊಳ್ಳುತ್ತೇವೆ

(ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಬಾವಿಗೆ ಆಗಮಿಸಿದರು)

ಶ್ರೀ ಆರಗ ಜ್ಞಾನೇಂದ್ರ ಸಾರ್ ನೀವೇಕೆ ಇಲ್ಲಿ ಬಾವಿಗೆ ಬೀಳುತ್ತೀರಿ?

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ. ಸಾರ್ ಈಗ ಮೇಲ್ಮನೆಯಲ್ಲಿಯಂತೂ ಕಲಾಪವನ್ನು ತಡೆ ಹಿಡಿದು ಜನರ ಭಾವನೆಗಳಿಗೆ ವಿರುದ್ಧವಾಗಿ ಸಮಯವನ್ನು ದುರುಪಯೋಗ ಮಾಡಿದ್ದಾರೆ ಇಲ್ಲಿಯೂ ಕೂಡ ಅದನ್ನು ಮಾಡಲಿಕ್ಕೆ ಹೊರಟಿದ್ದಾರೆ

ಅಧ್ಯಕ್ಷರು ವಿಷಯವನ್ನು ಅವರ ಗಮನಕ್ಕೆ ತಂದಿದ್ದೀರಿ ಚರ್ಚೆ ಮಾಡಿದ್ದೀರಿ ಆದರೆ ಸದನವನನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡದೇ ಹೀಗೆ ಬಾವಿಗೆ ಬಂದರೆ ಹೇಗೆ?

ಶ್ರೀ ಆರಗ ಜ್ಞಾನೇಂದ್ರ ಸಾರ್ ಈ ರೀತಿ ಮಾಡಿದರೆ ವಿಧಾನ ಸಭೆ, ವಿಧಾನ ಪರಿಷತ್ತು ಎರಡನ್ನೂ ಕೂಡ ತಡೆ ಹಿಡಿದು ಜನರ ಭಾವನೆಗಳನ್ನು ಇಲ್ಲಿ ವ್ಯಕ್ತ ಮಾಡಲು ಆಗದೇ ಚರ್ಚೆಯಲ್ಲಿ ಭಾಗವಹಿಸದೇ ಇರುವಂತಹ ಇವರಿಗೆ ಜನ ಬುದ್ಧಿ ಕಲಿಸುತ್ತಾರೆ 120 ಜನ ಇದ್ದಂತಹವರು ಇವತ್ತು 65 ಜನ ಆಗಿ ಕುಳಿತಿದ್ದಾರೆ ಇವತ್ತು ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸಲಿಕ್ಕೆ ಕೂಡ ಬರುತ್ತಿಲ್ಲ ಏನು ನಾವು ವಿರೋಧಪಕ್ಷದಲ್ಲಿ ಕುಳಿತು, ಇವತ್ತು ವಿಧಾನ ಪರಿಷತ್ತಿನಲ್ಲಿ ಏನೊಂದು ಘಟನೆ ನಡೆದಿದೆ? ಅವರು ಹೇಳಿದರು ಜೀರೋ ಅವರ್ ನಲ್ಲಿ ಎತ್ತಿರತಕ್ಕದ್ದು ಅಲ್ಲ ಈಗಾಗಲೇ ಮಾನ್ಯ ತಿಪ್ಪಣ್ಣನವರಿಗೆ ನಾವು ಸಭಾಪತಿ ಎಂದು ಹೇಳಿ ಅವರನ್ನು ಸ್ವೀಕಾರ ಮಾಡಿಲ್ಲ 9 ದಿನಗಳ ಕಾಲ ಕಲಾಪ ನಡೆದಿಲ್ಲ ಯಾರಿಗೆ 9 ದಿನಗಳ ಕಾಲ ಕಲಾಪವನ್ನು ನಡೆಸತಕ್ಕ ಶಕ್ತಿ ಇಲ್ಲ? ನಮ್ಮದು ಒಂದು majority ಇದೆ ಇವತ್ತು ಪೀರದ ಮೇಲೆ ಬಂದು ಕುಳಿತು ನೇಮ್ ಮಾಡಿ ಯಾರಿಗೋ ಫೋನ್ ಮಾಡಿ, ಅವರ ಮುಖಾಂತರ ಆದೇಶವನ್ನು ತೆಗೆದುಕೊಂಡು ಇವತ್ತು ಎಲ್ಲಾ ಕಡೆ suspend ಮಾಡತಕ್ಕ ರೀತಿ ಮೊಟ್ಟಮೊದಲನೆಯದಾಗಿ ವಿಧಾನ ಪರಿಷತ್ತಿನಲ್ಲಿ ಈ ಘಟನೆ ನಡೆದಿದೆ ಅದಕ್ಕೆ ನಾವು ನೇರವಾಗಿ ಏನು ಕೇಳುತ್ತೇವೆಂದರೆ ಅವರನ್ನು ಸಭಾಪತಿಯಾಗಿ ಒಪ್ಪಲಿಲ್ಲ 9 ದಿನಗಳ ಕಾಲ ಕಾರ್ಯಕಲಾಪ ನಡೆಯಲಿಲ್ಲ ಇವತ್ತು ಏಕಾ– ಏಕಿ ಬಂದು ಎಲ್ಲರನ್ನೂ suspend ಮಾಡತಕ್ಕದ್ದು ಏನಿದೆ? ಇದು ಸರಿಯಾದುದು ಅಲ್ಲ ಅದಕ್ಕೆ ತಾವು ಉತ್ತರವನ್ನು ಕೊಡಲಿಲ್ಲ ಇವತ್ತು ಸದನ ನಡೆಯುತ್ತಿದೆ ಸದನ ನಡೆಯತಕ್ಕಂಥ ಕಾಲದಲ್ಲಿ ಈ ರೀತಿಯಾಗಿ ಉದ್ಧಟತನದ ವರ್ತನೆ, ಈ ಸರ್ಕಾರದ ಕಾರ್ಯ ವೈಖರಿ ಏನಿದೆ? ಇವತ್ತು ವಿರೋಧ ಪಕ್ಷದವರನ್ನು

ಶಮನಗೊಳಿಸತಕ್ಕಂಥ ರೀತಿಯಲ್ಲಿ ಏನು ಘಟನೆ ನಡೆದಿದೆ? ಕರ್ನಾಟಕ ಜನತೆ ಇವತ್ತು ತಮಗೆ ಒಪ್ಪಿಗೆ ಕೊಡುತ್ತಿಲ್ಲ ಅದಕ್ಕೆ ನಾವೆಲ್ಲರೂ ಕೂಡ ಪ್ರತಿಭಟನೆ ಮಾಡುತ್ತೇವೆ ಕಾರ್ಯಕಲಾಪಗಳು ಇವತ್ತು ನಡೆಯಲಿ ಆದರೆ ನಾವೇನೆಂದರೆ ಇವತ್ತಿನ ತಮ್ಮ ಉತ್ತರದಿಂದ ನಾವು ಪ್ರತಿಭಟನೆ ಮಾಡಿ ಬಾವಿಯಲ್ಲಿ ಕುಳಿತುಕೊಳ್ಳುತ್ತೇವೆ

(ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಬಾವಿಗೆ ಆಗಮಿಸಿದರು)

ಶ್ರೀ ಆರಗ ಜ್ಞಾನೇಂದ್ರ ಸಾರ್ ನೀವೇಕೆ ಇಲ್ಲಿ ಬಾವಿಗೆ ಬೀಳುತ್ತೀರಿ?

ಅಧ್ಯಕ್ಷರು ಏನ್ ಸ್ವಾಮಿ ಇದು?

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ ಸಾರ್, ಈಗ ಮೇಲ್ಮನೆಯಲ್ಲಿಯಂತೂ ಕಲಾಪವನ್ನು ತಡೆಹಿಡಿದು ಜನರ ಭಾವನೆಗೆ ವಿರುದ್ಧವಾಗಿ ಸಮಯವನ್ನು ದುರುಪಯೋಗ ಮಾಡಿದ್ದಾರೆ

ಅಧ್ಯಕ್ಷರು ಸದನ ನಡೆಯದ ಹಾಗೆ ಮಾಡಬಾರದು

ಶ್ರೀ ಆರಗ ಜ್ಞಾನೇಂದ್ರ ಇಲ್ಲೂ ಕೂಡ ಅದನ್ನು ಮಾಡಲಿಕ್ಕೆ ಹೊರಟಿದ್ದಾರೆ

(ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು ಎಲ್ಲಾ ವಿಷಯವನ್ನು ಗಮನಕ್ಕೆ ತಂದಿದ್ದೀರಿ ಚರ್ಚೆ ಮಾಡಿದ್ದೀರಿ ಆದರೆ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡದೇ ಹೀಗೆ ಬಂದರೆ ಹೇಗೆ?

ಶ್ರೀ ಆರಗ ಜ್ಞಾನೇಂದ್ರ ಸಾರ್, ಈ ರೀತಿ ಮಾಡಿದರೆ ವಿಧಾನಸಭೆ, ವಿಧಾನ ಪರಿಷತ್ತು ಎರಡನ್ನೂ ತಡೆ ಹಿಡಿದು ಜನರ ಭಾವನೆಗಳನ್ನು ಇಲ್ಲಿ ವ್ಯಕ್ತ ಮಾಡಲಿಕ್ಕೆ ಆಗದೇನೆ, ಚರ್ಚೆಯಲ್ಲಿ ಭಾಗವಹಿಸದೇ ಇರುವಂತಹ ಇವರಿಗೆ ಜನರು ಬುದ್ಧಿ ಕಲಿಸಬೇಕು 120 ಜನ ಇದ್ದಂಥವರು ಇವತ್ತು 65 ಜನ ಆಗಿ ಕುಳಿತಿದ್ದಾರೆ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸಲಿಕ್ಕೆ ಕೂಡ ಬರುತ್ತಿಲ್ಲ ನಿಜವಾಗಲೂ ಕೂಡ ಚೆನ್ನಾಗಿ ಅಧಿವೇಶನವನ್ನು ನಡೆಸಬಹುದಾಗಿತ್ತು ಮೇಲ್ಮನೆಯಲ್ಲಿ ಕೂಡ ಚೆನ್ನಾಗಿ ಅಧಿವೇಶನವನ್ನು ನಡೆಸಬಹುದಾಗಿತ್ತು

P2
23

(ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ ಸಾರ್, ಭಾರಿ ಅನ್ಯಾಯ ಮೇಲ್ಮನೆಯಲ್ಲಿಯೂ ಕೂಡ ಇದೇ ರೀತಿ ಮಾಡಿದರು ಕೆಳಮನೆಯಲ್ಲಿಯೂ ಕೂಡ ಇದೇ ರೀತಿ ಮಾಡುತ್ತಿದ್ದಾರೆ ಆ ಮನೆಯಲ್ಲಿ ನಡೆದುಕೊಂಡ ರೀತಿ ಬಗ್ಗೆ ಜನ ಕಳೆದ ಒಂದು, ವಾರದಿಂದ ಛೀಮಾರಿ ಹಾಕುತ್ತಿದ್ದಾರೆ ಇವತ್ತು ಈ ಮನೆಯಲ್ಲಿ ಕೂಡ ಇದೇ ರೀತಿ ನಡವಳಿಕೆ ಮಾಡುತ್ತಿದ್ದಾರೆ ಖಂಡಿತವಾಗಿಯೂ ಕರ್ನಾಟಕದ ಜನ ಇವರನ್ನು ಕ್ಷಮಿಸುವುದಿಲ್ಲ

(ಗೊಂದಲ)

ಶ್ರೀ ಜೆ ವಿ ಶ್ರೀರಾಮರೆಡ್ಡಿ ಸಾರ್, ಪಾಪ ನಮ್ಮ ಸ್ನೇಹಿತರು ಧರಣಿ ಕುಳಿತಿದ್ದಾರೆ ಜೂನ್ ತಿಂಗಳವರೆಗೆ ದರಣಿ ಕುಳಿತರೂ ಸಹ ಚುನಾವಣೆ ನಡೆಯುವುದಿಲ್ಲ Waste, ಏಕೆ ಧರಣಿ ಮಾಡುತ್ತೀರಿ? ಜೂನ್ ತಿಂಗಳವರೆಗೆ ಇಲ್ಲಿ ಧರಣಿ ಕುಳಿತರೂ ಅಲ್ಲಿ ಚುನಾವಣೆ ನಡೆಯುವುದಿಲ್ಲ

ಅಧ್ಯಕ್ಷರು ಗಮನ ನೆಳೆಯುವ ಸೂಚನೆ ಕರೆಯುತ್ತೇನೆ ಅವರು ಜವಾಬು ಹೇಳುತ್ತಾರೆ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಜೂನ್ ತಿಂಗಳ ವರೆಗೆ ನೀವು ಇಲ್ಲೇ ಕುಳಿತುಕೊಳ್ಳಿ ಅಲ್ಲಿ ಚುನಾವಣೆ ನಡೆಯುವುದಿಲ್ಲ

(ಗೊಂದಲ)

ಶ್ರೀ ಜೆ ವಿ ಶ್ರೀರಾಮರೆಡ್ಡಿ ನೀವು ಜೂನ್ ವರೆಗೆ ಹೋರಾಟವನ್ನು ಮಾಡುತ್ತಿರಬೇಕು

(ಗೊಂದಲ)

ಅಧ್ಯಕ್ಷರು: ಈಗ ಕಲಾಪವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ

(ವಿಧಾನ ಸಭೆಯ ಕಲಾಪವನ್ನು ಸಂಜೆ 4 37ಕ್ಕೆ 10 ನಿಮಿಷಗಳ ಕಾಲ ಮುಂದೂಡಲಾಯಿತು)

(ಸದನವು ಸಂಜೆ 5 ಗಂಟೆ 39 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು ಅಧ್ಯಕ್ಷ ಪೀಠದಲ್ಲಿ ಸಭಾಧ್ಯಕ್ಷರಾದ ಮಾನ್ಯ ಶ್ರೀ ಕೃಷ್ಣರವರು ಉಪಸ್ಥಿತರಿದ್ದರು)

(ಸದನದ ಬಾವಿಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ತಮ್ಮ ಧರಣಿಯನ್ನು ಮುಂದುವರೆಸಿದ್ದರು)

ಅಧ್ಯಕ್ಷರು ಮಾನ್ಯ ಸಂಸದೀಯ ಸಚಿವರು ಈಗ ಉತ್ತರ ಕೊಡುತ್ತಾರೆ

ಶ್ರೀ ಎಂ ಪಿ ಪ್ರಕಾಶ್(ಗೃಹ ಇಲಾಖೆ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಹಿರಿಯ ಸದಸ್ಯರುಗಳು ಮತ್ತು ಎಲ್ಲಾ ಪಕ್ಷದ ಮುಖಂಡರುಗಳು ತಮ್ಮ ಕೊರಡಿಯಲ್ಲಿ ಬೆಳಿಗ್ಗೆ ಇದ್ದರು ಆ ಸಂದರ್ಭದಲ್ಲಿ ಸರ್ಕಾರ ಸಭಾವತಿ ಚುನಾವಣೆ ನಡೆಸುವುದಕ್ಕೆ ಕನಿಷ್ಟಪಕ್ಷ ಬದ್ಧತೆಯನ್ನು ತೋರಿಸಬೇಕೆಂದು ಚರ್ಚೆ ಆಯಿತು

ಮಾನ್ಯ ಮುಖ್ಯಮಂತ್ರಿಗಳ ಜೊತೆ ಕೂಡ ಇದರ ಬಗ್ಗೆ ನಾನು ಮಾತನಾಡಿದ್ದೇನೆ ಒಳ್ಳೆಯ ಸಲಹೆಯನ್ನು ಕೂಡ ಕೊಟ್ಟಿದ್ದೀರಿ ಅದನ್ನು ನಾವು ಪರಿಶೀಲಿಸಬೇಕಾಗುತ್ತದೆ ಆದುದರಿಂದ ದಯವಿಟ್ಟು ನಾಳೆಯವರೆಗಾದರೂ ಕೂಡ ತಾವು ಅವಕಾಶವನ್ನು ಕೊಡಿ ಎಂದು ವಿನಂತಿ ಮಾಡಿಕೊಂಡಿದ್ದರಿಂದ ನಾಳೆ ನೋಡುತ್ತೇವೆ ಎನ್ನುವ ಮಾತನ್ನು ಹೇಳಿದರು ಈ ನಂದರ್ಭದಲ್ಲಿ ನಾಳೆವರೆಗೆ ಸಮಯವನ್ನು ಕೊಟ್ಟರೆ ಒಳ್ಳೆಯದು

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ಅವರನ್ನು ಕರೆಸುವುದಕ್ಕೆ ಆಗುವುದಿಲ್ಲ ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ ಸನ್ಮಾನ್ಯ ಅಧ್ಯಕ್ಷರ ಮೂಲಕ ಎಲ್ಲಾ ಹಿರಿಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ ದಯವಿಟ್ಟು ತಾವು ಸಹಕಾರ ಕೊಟ್ಟು ಮುಂದಿನ ಸಭೆಯ ಕಾರ್ಯಕಲಾಪಗಳು ನಡೆಯಬೇಕು

ಅಧ್ಯಕ್ಷರು ದಯಮಾಡಿ ಮಾನ್ಯ ಸದಸ್ಯರೆಲ್ಲ ತಮ್ಮ ತಮ್ಮ ಆಸನಗಳಿಗೆ ಹೋಗಬೇಕೆಂದು ವಿನಂತಿ

ಶ್ರೀ ಎಂ ಪಿ ಪ್ರಕಾಶ್ ಸರ್ಕಾರ ಎಂದರೆ ಒಬ್ಬರೆ ಹೇಳುವಂಥದ್ದು ಇರುವುದಿಲ್ಲ ದಯವಿಟ್ಟು ಸಹಕಾರ ಕೊಡಬೇಕು

ಅಧ್ಯಕ್ಷರು ಎಲ್ಲಾದರೂ Speakerಗಳನ್ನು ಕೇಳಿರುವಂತಹ ಸರ್ಕಾರವನ್ನು ನೋಡಿದ್ದೀರಾ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ಜಾಸ್ತಿ ಮುಂದುವರೆಸದೆ, ಇದು 15 ದಿವಸದಿಂದ ನಡೆಯುತ್ತಿದೆ ನಾನು ತಮ್ಮ

ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ ವಿಧಾನ ಪರಿಷತ್ತಿನಲ್ಲಿ ನಡೆಯುವಂಥದ್ದು ಯಾರಿಗೂ ಘನತೆ ತರುವಂತಾದ್ದಲ್ಲ ಅದರ ಬಗ್ಗೆ ಆದಷ್ಟು ಬೇಗ ಇತ್ಯರ್ಥ ಮಾಡಿದರೆ ಎಲ್ಲರಿಗೂ ಕೂಡ ಘನತೆ ಗೌರವ ಬರುತ್ತದೆಂದು ವಿನಂತಿಸಿಕೊಳ್ಳುತ್ತೇನೆ ಮಾನ್ಯ ಪ್ರಕಾಶ್ ರವರು ನಾಳೆಯವರೆಗೆ ಸಮಯ ತೆಗೆದುಕೊಂಡಿದ್ದಾರೆ ದಯವಿಟ್ಟು ನಾಳೆ ಏನಾದರೂ ಒಂದು ತೀರ್ಮಾನ ಮಾಡಿಬಿಡಿ

ಅಧ್ಯಕ್ಷರು ಆಯಿತು, ಮಾನ್ಯ ಸದಸ್ಯರು ದಯಮಾಡಿ ತಮ್ಮ ತಮ್ಮ ಆಸನಗಳಿಗೆ ಹೋಗಿ

ಶ್ರೀ ಆರಗ ಜ್ಞಾನೇಂದ್ರ ಅಲ್ಲಿಯವರೆಗೂ ಮಾನ್ಯ ಸದಸ್ಯರನ್ನು ಹೊರಗೆ ಕರೆದು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅವರನ್ನು ಹೊರಗೆ ಕರೆದು, ಅದರ ಬಗ್ಗೆ ಇತ್ಯರ್ಥವಾದಮೇಲೆ, ಹೇಗೂ ಇವರು ಬರುವುದಿಲ್ಲ ಈಗ adjourn ಮಾಡಿ ನಾಳೆ ಬೆಳಿಗ್ಗೆ ಕರೆದು

ಶ್ರೀ ಎಂ ಪಿ ಪ್ರಕಾಶ್ ಇದರ ಬಗ್ಗೆ ತೀರ್ಮಾನವನ್ನು ಒಬ್ಬ ವ್ಯಕ್ತಿ ತೆಗೆದುಕೊಳ್ಳತಕ್ಕಂಥಾದ್ದಲ್ಲ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಎಲ್ಲರ ಜೊತೆ ಮಾತನಾಡಬೇಕಾಗುತ್ತದೆ ಅದರಿಂದ ಸಮಯವಕಾಶ ಕೇಳಿದ್ದೇನೆ ಕನಿಷ್ಟ ಮಧ್ಯಾಹ್ನದವರೆಗಾದರೂ ಅವಕಾಶವನ್ನು ಕೊಡಬೇಕಾಗುತ್ತದೆ ಬೆಳಿಗ್ಗೆ ಎಂದು ಹೇಳಿದರೆ ಒಮ್ಮೊಮ್ಮೆ ಸಿಗುವುದಿಲ್ಲ ಆಮೇಲೆ ನೀವು ಮಧ್ಯಾಹ್ನದಿಂದ ನಿರ್ಣಯ ಮಾಡಿರಿ

ಅಧ್ಯಕ್ಷರು ಮಾತನಾಡಿ ಒಂದು ತೀರ್ಮಾನಕ್ಕೆ ಬಂದು ನಾಳೆ ಮಾಡುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಆಧ್ಯಕ್ಷರೆ, ಕಲಾಪವನ್ನು ಮುಂದಕ್ಕೆ ಹಾಕುವುದು ಬೇಡ ಸರ್ಕಾರ ಬೆಳಿಗ್ಗೆಯೆ ತೀರ್ಮಾನ ಮಾಡಲಿ

ಅಧ್ಯಕ್ಷರು ಅವರು ಹೇಳಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ಮುಗಿಸಿಬಿಡಿ ಎಂದು ತಾವು ಸರ್ಕಾರಕ್ಕೆ ಹೇಳಿ ಮತ್ತೆ ನಾಳೆ ಮಧ್ಯಾಹ್ನದವರೆಗೂ ಸದನ ಮುಂದೂಡುವುದು ಬೇಡ ಸರ್ಕಾರಕ್ಕೆ ಮನಸಿದ್ದರೆ ನಾಳೆ ಬೆಳಿಗ್ಗೆ

ಆಗಬಹುದಲ್ಲ ನಾವು ಹೇಗೋ 11 ಗಂಟೆಗೆ ಸೇರುತ್ತೇವೆ ಅಷ್ಟರೊಳಗೆ ಆಗಬಹುದಲ್ಲ

ಅಧ್ಯಕ್ಷರು: ಈಗ ಮಾನ್ಯ ಸಚಿವರಿಗೆ ಯಾವಾಗ ಸಮಾಲೋಚನೆ ಮಾಡಿ ಹೇಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಕೇಳುತ್ತಿದ್ದಾರೆ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ 11 ಗಂಟೆಗೆ ಸದನ ಸೇರುವುದು ಅಷ್ಟರೊಳಗೆ ಸರ್ಕಾರ ಮನಸ್ಸು ಮಾಡಿದರೆ ಅದೇನು ಅಷ್ಟೊಂದು ದೊಡ್ಡ ಸಮಸ್ಯೆ ಅಲ್ಲ, ಪರಿಹಾರ ಮಾಡಬಹುದು

ಅಧ್ಯಕ್ಷರು, ನಾಳೆ ಎಷ್ಟು ಗಂಟೆಯವರೆಗೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ನಾಳೆ ಮಧ್ಯಾಹ್ನದವರೆಗೆ ಸಮಯ ಕೊಡಿ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಕೇಳುವವರನ್ನು ಕೇಳಿಯೇ ಈಗ ಹೇಳಿರುವುದು

ಅಧ್ಯಕ್ಷರು ದಯಮಾಡಿ ಎಲ್ಲ ತಮ್ಮ ಆಸನಗಳಿಗೆ ಹೋಗಬೇಕು

ಶ್ರೀ ಆರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೇ, ಅವರನ್ನು well ನಲ್ಲಿ ಇಟ್ಟುಕೊಂಡು ಕಾರ್ಯಕ್ರಮ ಮಾಡುವುದು ಸರಿಯಲ್ಲವೆಂದು ಎಲ್ಲರೂ ಅಭಿಪ್ರಾಯ ಪಡುತ್ತಾರೆ ಬಹಳ ಹಿರಿಯರೆಲ್ಲಾ ಇದ್ದಾರೆ ಆಡಳಿತದ ಮತ್ತು ಶಾಸನಸಭೆ ನಡೆಸಿದಂತಹ ಅನುಭವ ಇದ್ದವರು ಇದ್ದಾರೆ

ಅಧ್ಯಕ್ಷರು ನಾಳೆ ಮಧ್ಯಾಹ್ನ ಎಂದು ಹೇಳಿದ್ದಾರೆ, ನಾಳೆ ಮಧ್ಯಾಹ್ನದವರೆಗಾದರೂ ಕಲಾಪ ಮಾಡಿ

ಶ್ರೀ ಆರಗ ಜ್ಞಾನೇಂದ್ರ ಸದನ ಆರಂಭವಾದಾಗಿನಿಂದ ಮೇಲ್ಮನೆ ಕಲಾಪ ಸಂಪೂರ್ಣವಾಗಿ ಸ್ಥಗಿತವಾಗಿದೆ ಇನ್ನು ಈ ಮನೆಯಲ್ಲಿ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮತ್ತು ನಿಯಮ 69 ರ ಮೇಲಿನ ಚರ್ಚೆಗಳು ಅಪೂರ್ಣವಾಗಿವೆ ರಾಜ್ಯದ ಜನ ನಮ್ಮನ್ನು ನೋಡುತ್ತಿದ್ದಾರೆ ದಯಮಾಡಿ ಅವರು well ನಿಂದ ಹೊರಬಂದು ಚರ್ಚೆ ಮಾಡುವುದಕ್ಕೆ ದಾರಿ ಮಾಡಿಕೊಡಬೇಕು ಅಲ್ಲದೆ ಅವರು ಸರ್ಕಾರದ ಜೊತೆಗೆ ಸಹಕಾರ ಕೊಡಬೇಕು ಮತ್ತು ಸರ್ಕಾರ ಸಹಕರಿಸುತ್ತದೆ ಎಂದು ಈಗಾಗಲೇ ಹೇಳಿಯಾಗಿದೆ ಆದರೂ ಅವರು ಹರದ ನಿಲುವನ್ನು ತೆಗೆದುಕೊಳ್ಳುವುದು ಒಳ್ಳೆಯದಲ್ಲವೆಂದು ನನ್ನ ವಿನಂತಿ ಇದೆ

ಅಧ್ಯಕ್ಷರು ಈಗ ನಡೀರಿ, ನಿಮ್ಮ ನಿಮ್ಮ ಆಸನಗಳಿಗೆ ಹೋಗಿ ನಾಳೆ ಮಧ್ಯಾಹ್ನದವರೆಗೆ ಸಮಯ ಬೇಕೆಂದು ಹೇಳುತ್ತಿದ್ದಾರೆ

(ಗೊಂದಲ)

ಅಧ್ಯಕ್ಷರು. ನಿಮ್ಮ ನಿಮ್ಮ ಆಸನಗಳಿಗೆ ಹೋದರೆ ನಾಳೆ ಅಷ್ಟರೊಳಗೆ ಏನು

ಶ್ರೀ ಡಿ ಹೆಚ್ ಶಂಕರಮೂರ್ತಿ ಮಾನ್ಯ ಅಧ್ಯಕ್ಷರೆ, ಮೇಲ್ಮನೆಯಲ್ಲಿ 8–10 ದಿವಸದಿಂದ ಕಲಾಪ ನಡೆಯಲಿಲ್ಲ ಅದಕ್ಕೆ ಕಾರಣ ಏನು? ಇಲ್ಲಿ ಅದರ ಬಗ್ಗೆ ಚರ್ಚೆ ಬೆಳಿಗ್ಗೆಯಿಂದ ನಡೆದಿರುವ ಕಾರಣ ಈಗ ಅದು ಅಪ್ರಸ್ತುತ ಆದರೆ ಮೇಲ್ಮನೆ ಕಲಾಪ ನಡೆಯದೆ ಇರುವುದಕ್ಕೆ ಕಾರಣ ಏನು ಎನ್ನುವುದು ಸಹ ಬಹಳ ಪ್ರಮುಖ

ಅಧ್ಯಕ್ಷರು ಮೇಲ್ಮನೆ ನಾಯಕರು ಹೇಳುತ್ತಿದ್ದಾರೆ

(ಗೊಂದಲ)

ಶ್ರೀ ಡಿ ಹೆಚ್ ಶಂಕರಮೂರ್ತಿ. ನಾನು ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ

(ಗೊಂದಲ)

ಶ್ರೀ ಡಿ ಹೆಚ್ ಶಂಕರಮೂರ್ತಿ ನಾನು ಚರ್ಚೆ ಅಪ್ರಸ್ತುತ ಎಂದು ಹೇಳಿದೆನಲ್ಲ

ಅಧ್ಯಕ್ಷರು ಸಂಸದೀಯ ಸಚಿವರು ತೀರ್ಮಾನವನ್ನು ಹೇಳಿದರಲ್ಲ

(ಗೊಂದಲ)

ಅಧ್ಯಕ್ಷರು ವಿವರಣೆ ಬೇಡವೇ? ಸದನವು ದಿನಾಂಕ 19, 20 ಹಾಗೂ 21 ರವರೆಗೆ ಮುಂದುವರಿಯುತ್ತದೆ ಈಗ ಸದನವನ್ನು ನಾಳೆ ಬೆಳಿಗ್ಗೆ 11 00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನದ ಕಲಾಪವು ಸಂಜೆ 5 ಗಂಟೆ 47 ನಿಮಿಷಕ್ಕೆ ಮಕ್ತಾಯವಾಗಿ ಮತ್ತೆ ದಿನಾಂಕ 14 02 07ರಂದು ಬುಧವಾರ ಬೆಳಿಗ್ಗೆ 11 00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)